No. MAG (3)/NPP/77/2017-18

RNI No. KARKAN-2012/53684/Dtd. 19-12-2013

ವಾಗ್ರೂಪನೆಯೆಂಬುದು ಕರ್ಣಾಭರಣವಯ್ಯ

ನೊಳಂಬವಾಣಿ

NOLAMBAVANI Kannada Quarterly

ಕನ್ನಡ ತ್ರೈಮಾಸಿಕ

ಸಂಪಾದಕರು : ಡಾ. ಬಿ.ಸಿ.ರಾಕೇಶ್

Volume-16	July-August-September 2026	Rs. 25/-	Page - 56	Issue-3
ಸಂಪುಟ–16	ಜುಲೈ–ಆಗಸ್ಟ್–ಸೆಪ್ಟಂಬರ್ 2026	ರೂ. 25/–	ಪುಟಗಳು – 56	ಸಂಚಿಕೆ–3





ನೂತನ ನಿರ್ದೇಶಕರುಗಳಿಗೆ ಅಭಿನಂದನಾ ಸಮಾರಂಭ

ನೂತನ ಅಧ್ಯಕ್ಷರಿಗೆ ಶುಭಾಷಯಗಳು



ಶ್ರೀ ಬಿ.ಕೆ.ಚಂದ್ರಶೇಖರ್
ಅಧ್ಯಕ್ಷರು
ನೊಳಂಬ ಲಿಂಗಾಯತ ಸಂಘ (ರಿ.)
ಬೆಂಗಳೂರು.



ಧ್ಯಾನಕ್ಕೆ ನಿಮ್ಮ ಶ್ರೀ ಮೂರ್ತಿಯೆ ಮುಖ್ಯವಯ್ಯಾ.
ಪೂಜೆಗೆ ನಿಮ್ಮ ಶ್ರೀ ಪಾದವೆ ಮುಖ್ಯವಯ್ಯಾ.
ಮಂತ್ರಕ್ಕೆ ನಿಮ್ಮ ನಾಮಾಮೃತವೆ ಮುಖ್ಯವಯ್ಯಾ.
ಮುಕ್ತಿಗೆ ನಿಮ್ಮ ಘನ ಕೃಪೆಯೆ ಮುಖ್ಯವಯ್ಯಾ.
ನಿಮ್ಮಿಂದದಿಕರನಾರನೂ ಕಾಣೆನಯ್ಯಾ.
ಕೂಡಲಸಂಗಮದೇವಾ ನೀವು ಜ್ಞಾನಗುರುವಾದ ಕಾರಣ.



ಸಂಪಾದಕ ಮಂಡಳಿ

ಸಂಪಾದಕರು :

ಡಾ. ರಾಕೇಶ್ ಬಿ.ಸಿ., ಎಂ.ಎ.,ಪಿಹೆಚ್.ಡಿ.,

ಸದಸ್ಯರು

ಕತ್ತಿಗೆ ಬಿ.ಚನ್ನಪ್ಪ, ಎಂ.ಎ., ಬಿ.ಇಡಿ.,

ಎಂ.ದಯಾನಂದಸ್ವಾಮಿ, ಎಂ.ಎ.,
(ಪತ್ರಿಕೋದ್ಯಮ ಡಿಪ್ಲಮೊ)

ಡಾ. ಟಿ.ಬಿ.ಬಸವರಾಜು, ಪಿಹೆಚ್.ಡಿ.,

ಎಸ್.ಎಂ.ಜಯದೇವ್, ಎಂ.ಎ.,

ಎಸ್.ಯೋಗಾನಂದ, ಎಂ.ಎ.ಬಿ.ಇಡಿ., ಕೆ.ಇ.ಎಸ್.

ಬಿ.ಆರ್.ಭುಜೇಂದ್ರ, ಎಂ.ಎ., ಬಿಪಿಇಡಿ., ಎಲ್.ಎಲ್.ಬಿ.,

ಆರ್.ರಂಗನಾಥ್, ಎಂ.ಎ.,

ಎ.ಬಿ.ಬಸವರಾಜು, ಬಿ.ಕಾಂ.,

ಎಂ.ಎನ್.ಪ್ರಸಾದ್, ಎಂ.ಇ.,

ಸುಶೀಲಾ ಸದಾಶಿವಯ್ಯ., ಎಂ.ಎ.,

ಅಕ್ಷರ ವಿನ್ಯಾಸ :

ಸತೀಶ್ ಹೆಬ್ಬಾಕ

ಬೆನಕ ಗ್ರಾಫಿಕ್ಸ್, ತುಮಕೂರು.

ಚಂದಾದರ

ಬಿಡಿ ಸಂಚಿಕೆ	ರೂ. 25/–
ಆಜೀವ ಸದಸ್ಯರು	ರೂ. 2000/–
ಪೋಷಕರು	ರೂ. 10,000/–
ಮಹಾಪೋಷಕರು	ರೂ. 25,000/–

('ನೊಳಂಬ ವಾಣಿ'ಯಲ್ಲಿ ಪ್ರಕಟವಾಗುವ ಲೇಖನ, ವಿಚಾರ, ವಿಶ್ಲೇಷಣೆಗಳಿಗೆ ಲೇಖಕರು ಜವಾಬ್ದಾರರು – ಸಂಪಾದಕರು)

Published From :

B.K.CHANDRASHEKAR
NOLAMBA ADHYAYANA KENDRA
NOLAMBA LINGAYATHA SANGHA (R)
1/A, 1st Cross, 3rd Stage, 4th Block,
Basaveshwara Nagar,
Bengaluru - 560 079. Karnataka.
Phone : 080-48148953
E-mail : nolambavani2012@gmail.com

Editor :
Dr. Rakesh B.C.
Cell : 9481910181

ಒಳ ಪುಟಗಳಲ್ಲಿ.....

1. ಸಂಪಾದಕೀಯ : ಡಾ. ಬಿ.ಸಿ.ರಾಕೇಶ್	05
2. ಅಧ್ಯಕ್ಷರ ಆಶಯ ನುಡಿ : ಬಿ.ಕೆ.ಚಂದ್ರಶೇಖರ್, ಅಧ್ಯಕ್ಷರು.	06
3. ನೊಳಂಬ ಲಿಂಗಾಯತ ಸಂಘದ ಕಾರ್ಯ ಚಟುವಟಿಕೆಗಳು : ಚನ್ನವೀರಪ್ಪ ಬಿ ಬಾಸೂರು	07
4. ಕಾಯಕ ಮೀಮಾಂಸೆ ಮತ್ತು ಸಮಾಜದ ಸಮೃದ್ಧತೆ : ಪ್ರೊ. ಟಿ.ಆರ್.ಚಂದ್ರಶೇಖರ್	08
5. ಪ್ರಸಾದದ ಅಪರಿಮಿತತೆ : ಸುಶೀಲ ಸದಾಶಿವಯ್ಯ	10
6. ಸಿದ್ದರಾಮರ ವಚನಗಳಲ್ಲಿ ಶೈಕ್ಷಣಿಕ ಮೌಲ್ಯಗಳು ಮತ್ತು ಕಲಿಕೆ : ಸುಶೀಲ ಸೋಮಶೇಖರ್	13
7. ಸಿದ್ಧರಾಮೇಶ್ವರರ ವಚನಗಳಲ್ಲಿ ಲಿಂಗಾನುಭವ ಮತ್ತು ಸತ್ಸಂಗ : ಡಾ. ಜಿ.ವಿ.ಮಂಜುನಾಥ್	18
8. ನೊಳಂಬರ ದೇವಾಲಯಗಳು : ಡಾ. ಸುಂಕಂ ಗೋವರ್ಧನ್	22
9. ಎಲ್ಲರೂ ಶಿಕ್ಷಣ ಪಡೆಯಬೇಕು : ಮಲ್ಲೇಶಪ್ಪ ಟಿ.ಎಸ್.	24
10. 15ನೇ ಸೆಪ್ಟೆಂಬರ್ 2026, ವಿಶ್ವ ಅಂತರಾಷ್ಟ್ರೀಯ ಪ್ರಜಾಪ್ರಭುತ್ವದ ದಿನ : ವಿವೇಕಾನಂ ಹೆಚ್.ಕೆ,	26
11. ವಚನ ಚಳುವಳಿ : ಕತ್ತಿಗೆ ಬಿ. ಚನ್ನಪ್ಪ	28
12. ಜೈವಿಕ ಉದ್ಯಾನವನದ ಶಿಲ್ಪಿ ಡಾ॥ ಎಂ.ಎಲ್.ಲಲಿತಮ್ಮ : ಡಾ. ಹಾಲಪ್ಪ ಹೆಚ್ ಕುಂಟೆ	30
13. ಆರೋಗ್ಯಾಮೃತ-43 : ಶ್ರೀ ಶ್ರೀ ಬಸವಾನಂದಸ್ವಾಮಿಗಳು	35
14. ಆರೋಗ್ಯಕ್ಕಾಗಿ ಆಯುರ್ವೇದ : ಡಾ. ಶ್ರೀಪಾದ್ ಎಚ್.ಎಸ್.	37
15. ಬದುಕು ದೊಡ್ಡದು : ಪ್ರಶಾಂತ್ ಚಂದ್ರ ಎಸ್.ಎನ್.	39
16. ಮದುವೆ ಮತ್ತು ವಾಣಿಜ್ಯೀಕರಣ : ರಾಜರಾಜೇಶ್ವರಿ	40
17. ಯುವಶಕ್ತಿ ಮತ್ತು ವಿಕಸಿತ ಭಾರತ : ಆರ್.ರಂಗನಾಥ್	42
18. ಆತ್ಮವಿಶ್ವಾಸದ ಅಡಿಕೆ : ತರಲಾರದು ಭಂಗದ ಬದುಕ : ಡಿ.ಬಿ.ಶಂಕರಪ್ಪ	43
19. ದೇವನೊಬ್ಬ ನಾಮ ಹಲವು : ಆರ್.ರಾಜಯ್ಯ	44
20. ನೊಳಂಬರ ಕೆರೆ ಕಟ್ಟೆ ಬಾವಿಗಳು : ಶಿವಕುಮಾರ್ ಎಸ್.	45
21. ಮೈಕ್ರೋಗ್ರೀನ್ಸ್ : ಆರೋಗ್ಯಕರ ಜೀವನದತ್ತ ಹಸಿರು ಹೆಜ್ಜೆ : ಡಾ. ಶಶಿಕುಮಾರ್ ಎಸ್.	47
22. ಕಾರ್ಯಕಾರಿ ಮಂಡಳಿ ಸದಸ್ಯರ ಮಾಹಿತಿ	50

ಜಾಹಿರಾತು ವಿವರ

1. ಕಪ್ಪು–ಬಿಳುಪು ಕಾಲು ಪುಟ	ರೂ. 2500/–
2. ಕಪ್ಪು–ಬಿಳುಪು ಒಳ ಅರ್ಧಪುಟ	ರೂ. 4000/–
3. ಒಳಪುಟ ಕಾಲುಪುಟ (ಮಲ್ಟಿ ಕಲರ್)	ರೂ. 4000/–
4. ಕಪ್ಪು–ಬಿಳುಪು ಒಳ ಪೂರ್ಣಪುಟ	ರೂ. 6000/–
5. ಒಳಪುಟ ಅರ್ಧಪುಟ (ಮಲ್ಟಿ ಕಲರ್)	ರೂ. 6000/–
6. ಕಪ್ಪು–ಬಿಳುಪು ಸೆಂಟರ್ ಸ್ಪ್ರೆಡ್	ರೂ. 10,000/–
7. ಒಳಪುಟ ಪೂರ್ಣ ಪುಟ (ಮಲ್ಟಿ ಕಲರ್)	ರೂ. 12,000/–
8. ರಕ್ಷಾಪುಟದ 2ನೇ/3ನೇ ಒಳಪುಟ (ಮಲ್ಟಿ ಕಲರ್)	ರೂ. 19,000/–
9. ಸೆಂಟರ್ ಸ್ಪ್ರೆಡ್ ಪುಟ (ಮಲ್ಟಿ ಕಲರ್)	ರೂ 20,000/–.
10. ಹಿಂಬದಿ ರಕ್ಷಾ ಪುಟ (ಮಲ್ಟಿ ಕಲರ್)	ರೂ. 24,000/–

ನೂತನ ಆಡಳಿತ ಮಂಡಳಿಗೆ ಶುಭಾಷಯಗಳು



ಶ್ರೀ ಚನ್ನವೀರಪ್ಪ ಬಿ ಬಾಸೂರು
ಕಾರ್ಯದರ್ಶಿ



ಶ್ರೀ ಬಿ.ಕುಭೇರಪ್ಪ
ಖಜಾಂಚಿ



ಶ್ರೀ ಜಿ.ರುದ್ರೇಗೌಡ
ಉಪಾಧ್ಯಕ್ಷರು



ಶ್ರೀ ಸಿ.ಎಸ್.ಮೋಹನ್‌ಕುಮಾರ್
ಉಪಾಧ್ಯಕ್ಷರು



ಶ್ರೀ ಉಮೇಶ್ ಕಾಟಿಕೆರೆ
ಉಪಾಧ್ಯಕ್ಷರು



ಶ್ರೀ ಬಿ.ಆರ್.ಭುಜೇಂದ್ರ
ಸಹ ಕಾರ್ಯದರ್ಶಿ



ಶ್ರೀ ಪುಟ್ಟಮಲ್ಲೇಗೌಡ
ಸಹ ಕಾರ್ಯದರ್ಶಿ



ಶ್ರೀ ಹೆಚ್.ಎಸ್.ಕಿರಣ್‌ಕುಮಾರ್
ಸಹ ಕಾರ್ಯದರ್ಶಿ

ಸಂಪಾದಕೀಯ



ಜೀವನ, ಪ್ರೀತಿ ಮೇಲೆ ನಿಲ್ಲಬೇಕೇ ಹೊರತು ಅನಿವಾರ್ಯ ಅವಶ್ಯಕತೆ ಮತ್ತು ನಿರೀಕ್ಷೆಗಳ ಮೇಲಲ್ಲ. ನಮ್ಮ ಸಮಾಜ ಎನ್ನುವ ಪರಿಕಲ್ಪನೆಗೆ ಬಹುಮುಖ್ಯವಾಗಿ ನಮ್ಮೆಲ್ಲರನ್ನು ಬೆಸೆದಿರುವುದು 'ನೊಳಂಬ' ಎನ್ನುವ ರಾಜಮನೆತನವೇ ಮೂಲದ್ರವ್ಯ. ಸೂರ್ಯ ಚಂದ್ರರಿರುವವರೆಗೂ ನಮಗಿರುವ ಭಾವನಾತ್ಮಕ ಆಸ್ತಿ ಅದೊಂದೇ ಆಗಿದೆ. ಈ ಬೌದ್ಧಿಕ (Intellectual) ಆಸ್ತಿಯನ್ನು ಶತಶತಮಾನಗಳಿಂದಲೂ ನಮ್ಮ ಪೂರ್ವಜರ ಇತಿಹಾಸದಲ್ಲಿ ಶಾಸನಗಳು, ದೇವಸ್ಥಾನಗಳು, ಕೆರೆಗಳು ಇಂದಿಗೂ ನಮ್ಮ ಅಸ್ತಿತ್ವಕ್ಕೆ ಸಾಕ್ಷಿಯಾಗಿವೆ. ಹನ್ನೆರಡನೇ ಶತಮಾನದಿಂದಾ ಈ ಕಾರ್ಯವನ್ನು ಮುಂದುವರೆಸಿದ್ದು ನಮ್ಮ ಮಠಮಾನ್ಯಗಳು. ಅದರಲ್ಲೂ ಬಸವ ಪೂರ್ವದ ಹಿನ್ನೆಲೆಯ ನಂದಿಗುಡಿ ಮಠದಿಂದಿಡಿದು ಬಸವೋತ್ತರ ಕಾಲಮಾನದ ಹತ್ತಕ್ಕೂ ಮಿಕ್ಕಿ ನಮ್ಮ ಮಠಗಳು ನೊಳಂಬರ ಅಸ್ಮಿತೆಯ ಕುರುಹಾಗಿವೆ.

ಕಳೆದ ಹತ್ತೊಂಬತ್ತನೆಯ ಶತಮಾನದ ಆರಂಭದಲ್ಲಿ ಸ್ವಾತಂತ್ರ್ಯ ಪೂರ್ವದ ದಿನಗಳಲ್ಲಿ ಲಿಂಗಾಯತರಲ್ಲಿ ಮೇಲುಕೀಳು ಸಂಘರ್ಷದಲ್ಲಿ ನೊಳಂಬರು ನ್ಯಾಯಾಲಯದ ಕಟಕಟೆಯಲ್ಲಿ ನಿಂತು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ಇಂದಿನ ತಲೆಮಾರಿಗೆ ನೀಡಿದವರು ದಾನಶೂರ ಕಂಬಿ ಸಿದ್ದರಾಮಣ್ಣನವರು ಅವರಿಗೆ ಬೆಂಗಾವಲಾಗಿ ನಿಂತು ಇಡೀ ನೊಳಂಬ ಸಮುದಾಯದ ಸಮಗ್ರತೆಗೆ ತಮ್ಮ ಬದುಕು ಸವೆಸಿದವರು. ಇಂದು ನಾವೆಲ್ಲರೂ ಮಠಗಳತ್ತ ದಿಟ್ಟಿಸಲು ಆಸಕ್ತಿಹೊಂದಲು, ಅಲ್ಲಿನ ನ್ಯೂನ್ಯತೆಗಳ ಬಗ್ಗೆ ಚರ್ಚಿಸುತ್ತೇವೆ. ಅತಿ ನಿರೀಕ್ಷೆಗಳಿಂದ ನಿರಾಶಾದಾಯಕ, ಹತಾಶೆಯ ಅಪ್ರಬುದ್ಧ ಪದ ಬಳಕೆ ಮಾಡುತ್ತೇವೆ. ಒಮ್ಮೆ ನಿರ್ಲಿಪ್ತವಾಗಿ ಯೋಚಿಸಿ ನೋಡಿ, ನಾವೆಂದಾದರೂ ನಮ್ಮ ವ್ಯಾಪ್ತಿಯ ಮಠಗಳಲ್ಲಿನ ಆಗುಹೋಗುಗಳಿಗೆ ಬಾಗಿದಾರರಾಗಿದ್ದೇವೆಯೇ? (ಶೇಕಡ ಒಂದೆರಡು ಪರ್ಸೆಂಟ್ ಹೊರತು ಪಡಿಸಿ) ಲೋಕದಲ್ಲಿ ಯಾವ ಒಂದು ವಸ್ತುವಿನ ಬೆಲೆಯೇ ಆಗಲಿ ಅದರ ಜನೋಪಯೋಗಿತೆಯನ್ನು ಅವಲಂಬಿಸಿಕೊಂಡಿರುತ್ತದೆ. ಇಂದಿನ ದಿನಮಾನಗಳಲ್ಲಿ ಮಠಮಾನ್ಯಗಳಿಗೆ ಮಕ್ಕಳನ್ನು ತಮ್ಮ ದಾನಕೊಡಲು ಸಾಧ್ಯವೆ? ಇಂದಿನ ನಮ್ಮ ಮಠಗಳಲ್ಲಿರುವ ಹೆಚ್ಚು ಸ್ವಾಮೀಜಿಯವರು ಪ್ರಾಸಂಗಿಕವಾಗಿ ಆ ಸ್ಥಾನಕ್ಕೆ ಬಂದವರಾಗಿದ್ದಾರೆ. ಮಠಕ್ಕೆ ಮರಿ ಆಯ್ಕೆಮಾಡುವ ಬಗ್ಗೆ ವಿಶ್ವಮಟ್ಟದ ಧಾರ್ಮಿಕ, ಸಾಮಾಜಿಕ ಸಂಸ್ಥೆಗಳಲ್ಲಿ ಅವರಿಗೆ ವಿದ್ಯಾಸಂಸ್ಕಾರ ಕೊಡಿಸುವ ನಿಟ್ಟಿನಲ್ಲಿ ನಾವೆಂದಾದರೂ ಯೋಚಿಸಿದ್ದೇವೆಯೆ? ನಮ್ಮ ಮಠಗಳು ಜಾಗತಿಕ ಮಟ್ಟದಲ್ಲಿ ಬೆಳೆಯಬೇಕೆಂಬ ನಿರೀಕ್ಷೆ ಸರಿಯೆ, ಆದರೆ ನಮ್ಮ ಪೂರ್ವಸಿದ್ಧತೆಗೆ ನಾವೆಷ್ಟು ತ್ಯಾಗ ಸಹಕಾರ ಮಾಡುವವರಿಗೆ ಬೆನ್ನೆಲುಬಾಗಿದ್ದೇವೆ? ಮಠಗಳಲ್ಲಿನ ಪೂಜ್ಯರು ದೇಹಕ್ಕೆ ಖಾವಿ ಧರಿಸುವುದು ವಿರಕ್ತತೆಯ ಸಂಕೇತ. ಈ ಖಾವಿದಾರಿ ಪೂಜ್ಯರ ಸುತ್ತ ಮನಸ್ಸಿಗೆ ಖಾವಿ ಧರಿಸಿದ ಸಂಸಾರಿಗಳ ಪಡೆಯೊಂದು ನಿರಂತರವಾಗಿರುವ ಆಶಯದ ಅನುಷ್ಠಾನ ಮಾಡವುದು ಅನಿವಾರ್ಯ. ಸಂಸಾರಿಗಳಾದ ನಾವು ಮೂರು ನಾಲ್ಕರ ಗುಣಾಕಾರದ ಭ್ರಮೆ ಸುಣ್ಣ ಬಗ್ಗಡಗಳೆಂಬ ಭ್ರಮೆಗಳಿಂದಾ ಮುಕ್ತರಾಗಬೇಕಿದೆ. ಮಠಮಾನ್ಯಗಳ ಧಾರ್ಮಿಕ ಚುಕ್ಕಾಣಿ ಹಿಡಿದಿರುವವರು ಸಹ ಶ್ರೇಷ್ಠತೆಯ ಭ್ರಮೆಗಳಾದ ರೇಣುಕ ಧಾರುಕಾ ಪಂಡಿತಾರಾಧ್ಯ ಮುಂತಾದ ಭ್ರಮೆಗಳಿಂದ ಮುಕ್ತರಾಗದ ಹೊರತು. 'ನೊಳಂಬಮನೆತನ'ಕ್ಕೆ ಮುಕ್ತಿಯಿಲ್ಲ.

ನಿನಗೆ ತೋಚಿಲ್ಲದಂತೆ

ಶಿವಯೋಗಿ ಸಿದ್ಧರಾಮೇಶ್ವರರು ಶ್ರೇಷ್ಠ ಕರ್ಮಯೋಗಿಗಳು. ಗುರು ಬಸವಣ್ಣನವರ ಭಕ್ತಿ ಮತ್ತು ಜ್ಞಾನ ಪ್ರಭಾವಕ್ಕೆ ಒಳಗಾಗಿ ಬಸವ ಯೋಗಿಗಳಾಗಿ ಪರಿವರ್ತನೆ ಹೊಂದಿದ್ದು ಒಂದು ರೋಚಕ ಇತಿಹಾಸ. ಇಷ್ಟಲಿಂಗ ಯೋಗದ ಅನುಭಾವಿಯಾಗಿ ಅವರು ಸಾಧಿಸಿದ ಸಾಧನೆ ಅಸಾಮಾನ್ಯವಾದದ್ದು. ಅನುಭವ ಮಂಟಪದ ತೃತೀಯ ಪೀಠದ ಅಧ್ಯಕ್ಷರಾಗಿ ಅವರು ಸಲ್ಲಿಸಿದ ಜಂಗಮ ಸೇವೆಗಳು ಅತ್ಯಂತ ಅನನ್ಯ. ಅವರು ವಿಶ್ವಕ್ಕೆ ನೀಡಿದ ವಚನಗಳು ಲೋಕದ ಅಂಧಕಾರವನ್ನು ಹೋಗಲಾಡಿಸಿ, ಜ್ಞಾನ ಜ್ಯೋತಿಯನ್ನು ಬೆಳಗಿಸಿರಿವುದನ್ನು ಕಾಣಬಹುದು. ಮಹತ್ವದ ಕಾರ್ಯದಲ್ಲಿ ತೊಡಗಿಸಿಕೊಂಡವರು ಟೀಕೆಗಳನ್ನು ಕೇಳಿಸಿಕೊಳ್ಳುವುದು ಅನಿವಾರ್ಯವಾಗಬಹುದು ಇಂಥ ಸಂದರ್ಭದಲ್ಲಿ ಎದೆಗುಂದದೆ ಹಿಡಿದ ಕೆಲಸವನ್ನು ಸಾಧಿಸುವವರೇ ನಿಜಸಾಧಕರು. ನೊಳಂಬ ಲಿಂಗಾಯತ ಸಂಘದ ಚುನಾವಣೆಯಲ್ಲಿ ವಿಜಯಶಾಲಿಯಾದ ಎಲ್ಲಾ ಅಭ್ಯರ್ಥಿಗಳಿಗೆ ಹಾರ್ದಿಕ ಶುಭಾಶಯಗಳು ಮತ್ತು ಅಭಿನಂದನೆಗಳು ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ನೀವುಗಳು ಶ್ರಮಿಸಬೇಕು ಮತ್ತು ಸಮಾಜದ ಎಲ್ಲ ಬಂಧುಗಳ ಜೊತೆಗೆ ಉತ್ತಮ ಬಾಂಧವ್ಯವನ್ನು ಬೆಳೆಸಿಕೊಳ್ಳಬೇಕು. ಶ್ರೀಗುರು ಸಿದ್ಧರಾಮೇಶ್ವರರ ಆಶೀರ್ವಾದ ನಿಮಗೆ ದೊರೆಯಲಿ ಮತ್ತು ಶ್ರೀಗುರು ನಿಮಗೆ ಶಕ್ತಿಯನ್ನು ಕೊಡಲಿ ಎಂದು ಪ್ರಾರ್ಥಿಸುತ್ತೇನೆ. ಒಳ್ಳೆಯ ಮನಸ್ಸಿನಿಂದ ಹೇಳುವ ಪ್ರತಿಯೊಂದು ಮಾತೂ ಮೌಲ್ಯಯುತವಾಗಿದೆ. ಒಳ್ಳೆಯ ಆಲೋಚನೆಯಿಂದ ಮಾಡುವ ಪ್ರತಿಯೊಂದು ಕಾರ್ಯವು ಉಪಯುಕ್ತವಾಗಿದೆ. ನಮ್ಮೆಲ್ಲರ ಬೆಂಬಲ ನಿಮಗೆ ಸದಾ ಇರುತ್ತದೆ.

– ಡಾ. ರಾಕೇಶ್ ಬಿ.ಸಿ.
ಸಂಪಾದಕರು

ಅಧ್ಯಕ್ಷರ ಆಶಯ ನುಡಿ



ಆತ್ಮೀಯ ಚಂದದಾರರೇ, ಸಮಾಜ ಬಾಂಧವರೇ.....

ಎನಿತು ಜನ್ಮದಲಿ. ಎನಿತು ಜೀವರಿಗೆ
ಎನಿತು ನಾವು ಋಣಿಯೇ
ತಿಳಿದು ನೋಡಿದರೆ ಬಾಳು ಎಂಬುದು
ಋಣದ ರತ್ನಗಣಿಯೋ ಎಂಬ ರಾಷ್ಟ್ರಕವಿ ಜಿ.ಎಸ್.ಎಸ್.ರವರ ಕವನದ ಸಾಲುಗಳನ್ನು ಸ್ಮರಿಸುತ್ತಾ ನನ್ನನ್ನು ಅಧ್ಯಕ್ಷನನ್ನಾಗಿ ಅವಿರೋಧವಾಗಿ ಪುನರ್ ಆಯ್ಕೆ ಮಾಡಿರುವುದಕ್ಕೆ ಎಲ್ಲಾ ಕಾರ್ಯಕಾರಿ ಸಮಿತಿ ಸಮಾಜದ ಮುಖಂಡರಿಗೂ ಹಾಗೂ ಸಮಾಜದ ಬಂಧುಗಳಿಗೆ ವಂದನೆಗಳು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸದಸ್ಯರ ಬದಲಾವಣೆಗಳು ಆಯ್ಕೆ ಅಥವಾ ಚುನಾವಣೆ ಪ್ರಕ್ರಿಯೆಯ ಮೂಲಕ ಆಗಬೇಕಾಗಿರುತ್ತದೆ. ಆಯ್ಕೆಯ ವ್ಯವಸ್ಥೆಯಲ್ಲಿ ಯಾವುದೇ ಸದ್ದಿಲ್ಲದೆ ಹೆಚ್ಚಿನ ಸಂಖ್ಯೆಯ ಸಮಾಜ ಬಾಂಧವರಿಗೆ ಗಮನಕ್ಕೆ ಬಾರದಂತೆ ಹಿರಿಯರುಗಳು, ಅವರ ಗಮನದಲ್ಲಿರುವ ಸಮಾಜಮುಖಿಯಾಗಿ ಕೆಲಸ ನಿರ್ವಹಿಸುವ ಸಮಾಜ ಬಾಂಧವರನ್ನು ಆಯ್ಕೆ ಮಾಡಲಾಗುವುದು. ಚುನಾವಣಾ ವ್ಯವಸ್ಥೆಯಲ್ಲಿ ಸಮಾಜದ ಬಗ್ಗೆ ಅರಿವಿರುವವರು ಅಥವಾ ಇಲ್ಲದಿರುವವರು ಸಹ ಚುನಾವಣಾ ಕಣದಲ್ಲಿ ಅಭ್ಯರ್ಥಿಗಳಾಗಿ ಸ್ಪರ್ಧಿಗಳಾಗಿದ್ದು, ಚುನಾವಣೆ ರಂಗೇರಿಸುತ್ತ ಮನೆ ಮನೆ ಬಾಗಿಲಿಗೆ ತೆರಳಿ ಮತಯಾಚಿಸುತ್ತಾರೆ. ಸಂಘದ ಕಾರ್ಯಭಾರ, ಸಂಘದ ಆಸ್ತಿಗಳ ವಿವರ ಹಾಗೂ ಸಂಘದ ಇತರೆ ಚಟುವಟಿಕೆಗಳನ್ನು ಅರಿತು ಕೆಲವು ಮತದಾರರು ಕೆಲಸ ಮಾಡುವ ಅಭ್ಯರ್ಥಿಯ ಪರವಾಗಿ ಮತ ಚಲಾಯಿಸಿದರೆ, ಮತ್ತೆ ಕೆಲವು ಮತದಾರರು ಸಂಘದ ಅಭಿವೃದ್ಧಿ ಗಮನಿಸದೆ ಸ್ಥಳೀಯವಂತ, ಸಂಬಂಧಿ, ಸ್ನೇಹಿತತ್ವ, ಹಾಗೂ ಬೇರೆಯವರ ಒತ್ತಡಕ್ಕೆ ಮಣಿದು ಮತ ಚಲಾಯಿಸುವ ಸಂದರ್ಭಗಳು ಉಂಟು. ಇದನ್ನು ಅರಿತು ಹಲವಾರು ಹಿರಿಯರು ಚುನಾವಣೆ ಬಗ್ಗೆ ಅಸಮಧಾನಿತರಾಗಿರುತ್ತಾರೆ.

ಈ ಚುನಾವಣಾ ಅವದಿಯಲ್ಲಿ ಮೈಸೂರು ಮತ್ತು ಹಾಸನ ಜಿಲ್ಲೆಯನ್ನು ಹೊರತುಪಡಿಸಿ ಮತ್ತೆಲ್ಲ ಜಿಲ್ಲೆಗಳಲ್ಲಿಯೂ ಸಹ ಬಹಳ ಬಿರುಸಿನಿಂದ ಯಾವುದೇ ಅಹಿತಕರ ಘಟನೆಗೆ ಆಸ್ಪದ ನೀಡದೆ ಶಾಂತಿಯುತ ಚುನಾವಣೆ ನಡೆದಿರುವುದಕ್ಕೆ ಎಲ್ಲ ಮತದಾರರಿಗೂ ಹಾಗೂ ಅಭ್ಯರ್ಥಿಗಳನ್ನು ಪ್ರಶಂಸಿಸುತ್ತೇನೆ. ಈ ಬಾರಿ ಕಾರ್ಯಕಾರಿ ಮಂಡಳಿಯು 14 ಜನ ಹಳೆಯ ಮತ್ತು 27 ಜನ ಹೊಸ ಸದಸ್ಯರನ್ನು ಹೊಂದಿದ್ದು, ಆಯ್ಕೆಯಾದ ಸದಸ್ಯರ ಪೈಕಿ ಸರ್ಕಾರದಲ್ಲಿ ಕಾರ್ಯನಿರ್ವಹಿಸಿ ನಿವೃತ್ತರಾದ ಅಧಿಕಾರಿಗಳು, ವಕೀಲರು, ಸ್ಥಳೀಯ ಹಾಗೂ ಸಹಕಾರ ಕ್ಷೇತ್ರದ ಮಾಜಿ ಹಾಗೂ ಹಾಲಿ ಸದಸ್ಯರುಗಳು, ಪ್ರಗತಿಪರ ರೈತರು, ವಿವಿದ ರಾಜಕೀಯ ಪಕ್ಷದ ಮುಖಂಡರು, ಅಭಿಯಂತರರು, ವಾಣಿಜ್ಯೋದ್ಯಮಿಗಳು ಇತರೆ ಕ್ಷೇತ್ರದವರು ಇರುತ್ತಾರೆ. ಅವರುಗಳು ಸಮಾಜವನ್ನು ಮತ್ತು ಸಂಘವನ್ನು ಮತ್ತಷ್ಟು ಆಶಾದಾಯಕವಾಗಿ ಬೆಳೆಸುವ ಧ್ಯೇಯೋದ್ದೇಶಗಳನ್ನು ಹೊಂದಿ ಬಹಳ ಉತ್ಸುಕರಾಗಿದ್ದಾರೆ.

ಈ ಕಾರ್ಯಕಾರಿ ಸಮಿತಿ ಅವಧಿ ಮುಗಿಯುವುದರೊಳಗೆ ಕಡೂರಿನಲ್ಲಿ ನಿರ್ಮಾಣಗೊಳ್ಳುತ್ತಿರುವ ಸಮುದಾಯ ಭವನದ ಕಾಮಗಾರಿಯನ್ನು ಪೂರ್ಣಗೊಳಿಸುವುದು, ಬೆಂಗಳೂರಿನ ಮಹಾಲಕ್ಷ್ಮಿಪುರಂನಲ್ಲಿರುವ ಹಾಲಿ ವಿದ್ಯಾರ್ಥಿ ನಿಲಯದ ಪಕ್ಕದಲ್ಲಿರುವ ನಿವೇಶನದಲ್ಲಿ ಮತ್ತೊಂದು ವಿದ್ಯಾರ್ಥಿನಿ ನಿಲಯವನ್ನು ನಿರ್ಮಿಸುವುದು, ತಿಪಟೂರಿನಲ್ಲಿ ಸರ್ಕಾರದಿಂದ ಮಂಜೂರಾಗಿರುವ 1 ಎಕರೆ ಜಮೀನನ್ನು ಸ್ವಾಧೀನಕ್ಕೆ ಪಡೆದು ಅಭಿವೃದ್ಧಿ ಪಡಿಸುವುದು, ದಾವಣಗೆರೆಯಲ್ಲಿ ಮಂಜೂರಾಗಿರುವ ಸಿ.ಎ ನಿವೇಶನಕ್ಕೆ ಹಣ ಪಾವತಿ ಮಾಡಿ ಸ್ವಾಧೀನಕ್ಕೆ ಪಡೆದು ಅಭಿವೃದ್ಧಿ ಪಡಿಸುವುದು, ಹೊನ್ನಾಳಿಯಲ್ಲಿರುವ ಖಾಲಿ ನಿವೇಶನದಲ್ಲಿ ಎಲ್ಲರ ಸಹಕಾರದಿಂದ ಸಮುದಾಯ ಭವನ ನಿರ್ಮಾಣ ಮಾಡುವ ಯೋಜನೆ ಹೊಂದಿದ್ದು ಆರ್ಥಿಕ ಪರಿಸ್ಥಿತಿಗನುಗುಣವಾಗಿ ಆದ್ಯತೆ ಮೇರೆಗೆ ಮೇಲ್ಕಂಡ ಉದ್ದೇಶಗಳನ್ನು ಪರಿಪೂರ್ಣಗೊಳಿಸುವುದು. ಹಾಗೂ ಸಮಾಜದ ಜನಗಣತಿ ಮಾಡುವುದು ಮತ್ತು ರಚನಾತ್ಮಕ ಸಮಾಜಮುಖಿ ಕೆಲಸವನ್ನು ಮಾಡುವ ಉದ್ದೇಶ ಹೊಂದಿದ್ದು ಇವುಗಳನ್ನು ಪರಿಪೂರ್ಣಗೊಳಿಸಲು ತಮ್ಮಗಳ ಸಹಕಾರವನ್ನು ಕೋರುತ್ತೇನೆ.

ಶರಣು ಶರಣಾರ್ಥಿಗಳು

ಶ್ರೀ ಬಿ.ಕೆ.ಚಂದ್ರಶೇಖರ್

ಅಧ್ಯಕ್ಷರು

ನೊಳಂಬ ಲಿಂಗಾಯತ ಸಂಘ (ರಿ.), ಬೆಂಗಳೂರು.

ನೊಳಂಬ ಲಿಂಗಾಯತ ಸಂಘದ ಕಾರ್ಯ ಚಟುವಟಿಕೆಗಳು

1. ದಿನಾಂಕ 15–08–2026ರಂದು ಸ್ವಾತಂತ್ರ್ಯ ದಿನಾಚರಣೆಯನ್ನು ಸಂಘದ ಮಾಜಿ ಅಧ್ಯಕ್ಷರಾದ ಎಸ್.ಆರ್.ಪಾಟೀಲ್‌ರವರ ಸಮ್ಮುಖದಲ್ಲಿ ಧ್ವಜಾರೋಹಣ ವನ್ನು ನೆರವೇರಿಸಲಾಯಿತು.

2. 2027ರ ಶ್ರೀಗುರುಸಿದ್ಧರಾಮೇಶ್ವರ ಜಯಂತಿಯನ್ನು ನಡೆಸುವ ಬಗ್ಗೆ ಚರ್ಚಿಸಲಾಯಿತು.

3. ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದಿಂದ ಸಂಘಕ್ಕೆ ಹಂಚಿಕೆ ಮಾಡಿರುವ ನಿವೇಶನದ ಹಣವನ್ನು ಮುಂದಿನ ದಿನಗಳಲ್ಲಿ ಪಾವತಿಸಲು ಮತ್ತು ಅಭಿವೃದ್ಧಿಪಡಿಸಲು ಚರ್ಚಿಸಲಾಯಿತು.

4. ಹೆಚ್ಚುವರಿಯಾಗಿ ಬಿಡಿಎನಿಂದ ಬೆಂಗಳೂರಿನ ಮಹಾಲಕ್ಷ್ಮಿ ಪುರಂನಲ್ಲಿರುವ ವಿದ್ಯಾರ್ಥಿ ನಿಲಯದ ಪಕ್ಕದಲ್ಲಿರುವ ನಿವೇಶನದಲ್ಲಿ ಹಾಸ್ಟೆಲ್ ಕಟ್ಟಡ ಕಟ್ಟುವ ಬಗ್ಗೆ ಮುಂದಿನ ನಿರ್ಧಾರಗಳನ್ನು ಕೈಗೊಳ್ಳಲಾಗುವುದು.

5. ಕಾರ್ಯಕಾರಿ ಸಮಿತಿಗೆ ನಾಲ್ಕು ಜನ ನಾಮಕರಣ ಸದಸ್ಯರನ್ನು ಮತ್ತು ಇತರ ಸಮಿತಿಗಳ ಹಾಗೂ ಉಪ ಸಮಿತಿಗಳನ್ನು ಮುಂದಿನ ದಿನಗಳಲ್ಲಿ ನೇಮಿಸುವ ಬಗ್ಗೆ ಕ್ರಮ ವಹಿಸಲಾಗುವುದು.

6. ಚುನಾವಣಾಧಿಕಾರಿಯಾದ ರಾಜಣ್ಣನವರಿಂದ ದಿನಾಂಕ 23–08–2026ರಂದು ಕೇಂದ್ರ ನೊಳಂಬ ಲಿಂಗಾಯತ ಸಂಘಕ್ಕೆ ರಾಜ್ಯದಾದ್ಯಂತ ಚುನಾವಣೆ ನಡೆದು 41 ಜನ ನಿರ್ದೇಶಕರನ್ನು ಆಯ್ಕೆ ಮಾಡಲಾಯಿತು. ಹಾಗೂ 03–09–2026ರಂದು 41 ಜನ ನೂತನ ನಿರ್ದೇಶಕರಿಗೆ ಪ್ರಮಾಣ ಪತ್ರಗಳನ್ನು ನೀಡಲಾಯಿತು. ಅಂದೇ ಶ್ರೀ ಬಿ.ಕೆ.ಚಂದ್ರಶೇಖರ್‌ರವರನ್ನು ಅಧ್ಯಕ್ಷರನ್ನಾಗಿ ಮರು ಆಯ್ಕೆ ಮಾಡಲಾಯಿತು. ಕಾರ್ಯದರ್ಶಿಗಳಾಗಿ ಶ್ರೀ ಚನ್ನವೀರಪ್ಪ ಬಿ. ಬಾಸೂರುರವರನ್ನು, ಖಜಾಂಚಿಗಳಾಗಿ ಶ್ರೀ ಕುಬೇರಪ್ಪ ಅವರನ್ನು, ಉಪಾಧ್ಯಕ್ಷರುಗಳಾಗಿ ಶ್ರೀ ರುದ್ರೇಗೌಡ ಜಿ., ಶ್ರೀ ಉಮೇಶ್ ಕಾಟಿಕೆರೆ, ಡಾ. ಸಿ.ಎಸ್.ಮೋಹನ್‌ಕುಮಾರ್ ಹಾಗೂ ಸಹ ಕಾರ್ಯದರ್ಶಿಗಳಾಗಿ ಶ್ರೀ ಬಿ.ಆರ್.ಭುಜೇಂದ್ರ, ಶ್ರೀ ಹೆಚ್.ಎಸ್.ಕಿರಣ್ ಕುಮಾರ್, ಶ್ರೀ ಬಿ.ಪುಟ್ಟಮಲ್ಲೇಗೌಡ ಇವರುಗಳನ್ನು 2026–31ನೇ ಸಾಲಿಗೆ ಪದಾಧಿಕಾರಿಗಳಾಗಿ ಆಯ್ಕೆ ಮಾಡಲಾಯಿತು.



ಚನ್ನವೀರಪ್ಪ ಬಿ ಬಾಸೂರು
ಕಾರ್ಯದರ್ಶಿ
ನೊಳಂಬ ಲಿಂಗಾಯತ
ಸಂಘ (ರಿ) ಬೆಂಗಳೂರು.

7. ದಿನಾಂಕ 20–09–2026ರಂದು ಮೊದಲ ಆಡಳಿತ ಮಂಡಳಿ ಸಭೆಯನ್ನು ಶ್ರೀ ಬಿ.ಕೆ.ಚಂದ್ರಶೇಖರ್ ಇವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

8. ಶ್ರೀ ಬಿ.ಕೆ.ಚಂದ್ರಶೇಖರ್ ಇವರ ಅಧ್ಯಕ್ಷತೆಯಲ್ಲಿ ದಿನಾಂಕ 20–09–2026ರಂದು ಮಾಜಿ ಮುಖ್ಯ ಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪನವರನ್ನು ಭೇಟಿ ಮಾಡಿ ಶ್ರೀಯುತರನ್ನು ಗೌರವಪೂರ್ವಕವಾಗಿ ಸನ್ಮಾನಿಸಲಾಯಿತು.

9. ಕಂಬಿ ಸಿದ್ಧರಾಮಣ್ಣ ಹಾಸ್ಟೆಲ್‌ನಲ್ಲಿ ವಿದ್ಯಾಗಣಪತಿಯನ್ನು ಪ್ರತಿಷ್ಠಾಪಿಸಿ ಮೆರವಣಿಗೆಯೊಂದಿಗೆ ವಿಸರ್ಜಿಸಲಾಯಿತು.

10. ಕಳೆದ ಬಾರಿ ನಿರ್ದೇಶಕರಾಗಿ ಸೇವೆ ಸಲ್ಲಿಸಿದ ಎಲ್ಲಾ ನಿರ್ದೇಶಕರಿಗೆ ಧನ್ಯವಾದವನ್ನು ಸಲ್ಲಿಸಲಾಯಿತು.

11. 2026–27ನೇ ಸಾಲಿನ ವಸತಿ ನಿಲಯಗಳಾದ ಕಂಬಿ ಎಂ. ಸಿದ್ಧರಾಮಣ್ಣ ವಿದ್ಯಾರ್ಥಿನಿಲಯ ಹಾಗೂ ಶ್ರೀಮತಿ ಸರ್ವಮಂಗಳಮ್ಮ ವಿದ್ಯಾರ್ಥಿನಿಲಯಗಳಿಗೆ ಪ್ರವೇಶಾತಿ ಪ್ರಾರಂಭಗೊಂಡಿದೆ.


12. ಕಡೂರಿನಲ್ಲಿ ನೂತನವಾಗಿ ನಿರ್ಮಿಸುತ್ತಿರುವ ಸಮುದಾಯ ಭವನದಲ್ಲಿ ಟೈಲ್ಸ್ ಹಾಕುವುದರೊಂದಿಗೆ ನಿರ್ಮಾಣ ಕಾರ್ಯವು ತ್ವರಿತ ಗತಿಯಲ್ಲಿ ನಡೆಯುತ್ತಿದೆ.

13. ಸಂಘದ ಅಧ್ಯಕ್ಷರಾದ ಬಿ.ಕೆ.ಚಂದ್ರಶೇಖರ್‌ರವರ ಸಮ್ಮುಖದಲ್ಲಿ ಸಂಘದ ಅಭಿವೃದ್ಧಿ ಕಾರ್ಯಗಳು ಸುಲಲಿತವಾಗಿ ನಡೆಸಲು ಮಾಸಿಕ, ದ್ವೈಮಾಸಿಕ ಸಭೆಗಳನ್ನು ನಡೆಸಲಾಗುತ್ತಿದೆ.

ನೊಳಂಬವಾಣಿ

ಕಾಯಕ ಮೀಮಾಂಸೆ ಮತ್ತು ಸಮಾಜದ ಸಮೃದ್ಧತೆ

ಕಾಯಕವೇ ಕೈಲಾಸ ಎಂಬ ಸೂತ್ರವು ಆಯ್ದಕ್ಕಿ ಮಾರಯ್ಯನವರ ವಚನದಲ್ಲಿದೆ. ಇದು ಮತ್ತಾವ ಶರಣರ ವಚನಗಳಲ್ಲಿ ಇಲ್ಲ. ಇದರ ಆಧಾರದ ಮೇಲೆ ಇದು ಲಿಂಗಾಯತ ಧರ್ಮದ ಅಥವಾ ಬಸವಣ್ಣನವರ ಪ್ರಧಾನ ಸಿದ್ಧಾಂತವಲ್ಲ ಎಂದು ಹೇಳಲು ಬರುವುದಿಲ್ಲ. ಏಕೆಂದರೆ ಅನೇಕ ಇತರೆ ಶರಣರು ಕಾಯಕವೇ ಕೈಲಾಸ ಎಂದು ಹೇಳದಿದ್ದರೂ ಅದರ ಮೂಲಸೂತ್ರವನ್ನು ಬೇರೆ ಬೇರೆ ರೀತಿಯಲ್ಲಿ ಪ್ರತಿಪಾದಿಸಿರುವುದನ್ನು ವಚನ ಸಾಹಿತ್ಯದಲ್ಲಿ ಕಾಣಬಹುದು. ಇಡೀ ಲಿಂಗಾಯತದ ಮೂಲಮಂತ್ರವೇ ಇದಾಗಿದೆ. ಲಿಂಗಾಯತದಲ್ಲಿ ಗುಡಿಗಳಿಲ್ಲ, ದೇವರಿಲ್ಲ, ಪುರೋಹಿತರಿಲ್ಲ. ಅರ್ಚನ–ಆರಾಧನೆಗಳಿಲ್ಲ. ದಾನದತ್ತಿ ಉಂಬಳಿ ದಕ್ಷಿಣೆಗಳಿಲ್ಲ. ತೀರ್ಥಯಾತ್ರೆ ತೀರ್ಥಸ್ನಾನಗಳಿಗೆ ಇಲ್ಲಿ ಅವಕಾಶವೇ ಇಲ್ಲ. ಲಿಂಗದರ್ಶನವಿಲ್ಲ. ಕುಂಭಮೇಳಕ್ಕೆ ಇಲ್ಲಿ ಸ್ಥಾನವೇ ಇಲ್ಲ. ನಮ್ಮ ಊರಿನ ಹಳ್ಳದ ಕೆರೆಯ ನೀರೂ ಗಂಗೆಯ ನೀರಿನಷ್ಟೇ ಪವಿತ್ರ. ಕುವೆಂಪು ಹೇಳಿರುವಂತೆ 'ನೀರೆಲ್ಲವೂ ತೀರ್ಥ'! ಇಲ್ಲಿ ಕೈಲಾಸವಿಲ್ಲ. ಸ್ವರ್ಗ – ನರಕಗಳೂ ಇಲ್ಲ; ಪುಣ್ಯ ಪಾಪಗಳೂ ಇಲ್ಲ. ಸತ್ತ ಮೇಲೆ ಲಿಂಗಾಯತರು ಸ್ವರ್ಗಕ್ಕೂ ಹೋಗುವುದಿಲ್ಲ, ನರಕಕ್ಕೂ ಹೋಗುವುದಿಲ್ಲ. ಅಲ್ಲಮಪ್ರಭುಗಳು **"ಕಾಯಗುಣವಳಿದು ಮಾಯಾಜ್ಯೋತಿ ವಾಯುವ ಕೂಡುವ ಮುನ್ನ ಭಕ್ತಿಯ ಮಾಡಬಲ್ಲಡೆ ಆತನೇ ದೇವ"** ಎನ್ನುತ್ತಾರೆ. ಇಲ್ಲಿನ ಒಂಬತ್ತು ನುಡಿಗಳಲ್ಲಿ ಪ್ರಭುಗಳು ಬಹುದೊಡ್ಡ ತತ್ವವನ್ನು ಮಂಡಿಸುತ್ತಿದ್ದಾರೆ. 'ಕಾಯಗುಣವಳಿದು' ಎಂದರೆ ದೇಹದಲ್ಲಿನ ಜೀವ ಅಳಿದಮೇಲೆ–ಜೀವ ಹೋದ ಮೇಲೆ ಅದು ಎಲ್ಲಿಗೂ ಅಂದರೆ ಸ್ವರ್ಗ ಅಥವಾ ನರಕಕ್ಕೆ ಅಥವಾ ಮತ್ತೊಂದು ಲೋಕಕ್ಕೆ ಹೋಗುವುದಿಲ್ಲ. 'ಮಾಯಾಜ್ಯೋತಿ' ಅಂದರೆ ಜೀವ(ಆತ್ಮ ಅಲ್ಲ) 'ವಾಯುವ ಸೇರುವ' ಎಂದರೆ ಪ್ರಕೃತಿಯಲ್ಲಿ ಲೀನವಾಗುವ ಎಂದು ಅರ್ಥ. ಹುಟ್ಟು–ಸಾವುಗಳ ನಡುವೆ 'ಭಕ್ತಿ'ಯ ಮಾಡುವುದೇ ಧರ್ಮ. ಭಕ್ತಿ ಎಂದರೆ ಇಲ್ಲಿ ಆರಾಧನೆಯಲ್ಲ ಅಥವಾ ಉತ್ಸವವಲ್ಲ. 'ಭಕ್ತಿ' ಎನ್ನುವುದನ್ನು ಶರಣರು ಕಾಯಕ ಎಂದೇ ಬಳಸುತ್ತಿದ್ದಾರೆ. ಸಿದ್ಧರಾಮಣ್ಣನವರು **"ಕಪಿಲಸಿದ್ಧ ಮಲ್ಲಿಕಾರ್ಜುನನ ಭಕ್ತಿಕ್ರೀಯನು ಕೂಡಿದಾತ ನಾನು"** ಎನ್ನುತ್ತಾರೆ. ಬಸವ ಧರ್ಮ ಎಂಬುದು, ಲಿಂಗಾಯತ ಧರ್ಮ ಎಂಬುದು 'ಭಕ್ತಿ' ಮತ್ತು 'ಕ್ರೀ' (ಕಾಯಕ) ಎರಡನ್ನೂ ಕೂಡಿದ್ದಾಗಿದೆ. 'ಕ್ರೀ' ಅಥವಾ ಕಾಯಕವಿಲ್ಲದೆ ಲಿಂಗಾಯತವಿಲ್ಲ. ಇದೇ ಧರ್ಮ.



ಪ್ರೊ. ಟಿ.ಆರ್.ಚಂದ್ರಶೇಖರ
ವಿಶ್ರಾಂತ ಪ್ರಾಧ್ಯಾಪಕ, 2ನೆ ಮೇನ್, 4ನೆಯ ಕ್ರಾಸ್, ಬೇಗೂರು ಮುಖ್ಯರಸ್ತೆ. ಹೊಂಗಸಂದ್ರ–560 068, ಬೆಂಗಳೂರು.

ಪ್ರಭುಗಳ ಪ್ರಕಾರ ಮನುಷ್ಯ ಸತ್ತ ಮೇಲೆ ಅವನ/ಳ ಜೀವವು ಪ್ರಕೃತಿಯಲ್ಲಿ ವಾಯುವಿನಲ್ಲಿ ಲೀನವಾಗುತ್ತದೆ ಅಥವಾ ಒಂದಾಗಿ ಬಿಡುತ್ತದೆ. ಜೀವನ ಎಂಬುದು ಇಷ್ಟೇ! ಸನಾತನ ಧರ್ಮವು ಇಲ್ಲಿ ಸ್ವರ್ಗ–ನರಕಗಳೆಂಬ ಕಥೆ ಕಟ್ಟಿ, ಇನ್ನೊಂದು ಲೋಕದ ಭ್ರಮೆಯನ್ನು ಮೂಡಿಸಿ ಜನರನ್ನು ಮೂರ್ಖರನ್ನಾಗಿ ಮಾಡುತ್ತಿದೆ. ಶರಣರಿಗೆ ಇರುವುದೊಂದೇ ಲೋಕ. ಅನೇಕ ಶರಣರು ವಿವಿಧ ರೀತಿಯಲ್ಲಿ ಇದನ್ನು ತಮ್ಮ ವಚನಗಳಲ್ಲಿ ಹೇಳುತ್ತಿದ್ದಾರೆ. ಶರಣರು ತಾವು ಮಾಡುವ ಕಾಯಕದಲ್ಲಿಯೇ ತಮ್ಮ ಗುರುವನ್ನು (ದೇವರನ್ನಲ್ಲ) ಕಂಡುಕೊಳ್ಳುತ್ತಾರೆ(ಕಾಣುತ್ತಾರೆ ಅಲ್ಲ). ಮಾದಾರ ಧೂಳಯ್ಯನವರು 'ಅಟ್ಟೆಯ ಚುಚ್ಚುವ ಉಳಿಯ ಮೊನೆಯಲ್ಲಿ' ಅಂದರೆ ತಮ್ಮ ಕಾಯಕದಲ್ಲಿ ವೃತ್ತಿಯಲ್ಲಿ ದುಡಿಮೆಯಲ್ಲಿ ಪರಮೇಶ್ವರನ್ನು ಕಾಣುತ್ತಾರೆ.

ಸಿದ್ಧರಾಮಣ್ಣನವರು ಕಾಯಕ ಮೀಮಾಂಸೆಯನ್ನು (ಕಾಯಕವೇ ಕೈಲಾಸ ಎಂಬುದನ್ನು) ಸರಳವಾಗಿ ಕೆಳಗಿನ ವಚನದಲ್ಲಿ ಮಂಡಿಸಿದ್ದಾರೆ.

ಮಾಡಿದ ಕಾರ್ಯದಿಂದ ಜ್ಞಾನ ಸಾಧನೆಯಾಗಬೇಕು
ಮಾಡಿದ ಕಾರ್ಯದಿಂದ ಸತ್ಪುರುಷರ ಹರ್ಷ ನಿರ್ಭರವಾಗಬೇಕು
ಮಾಡಿದ ಕಾರ್ಯದಿಂದ ಪ್ರಮಥರು ಅಹುದಹುದೆನ್ನಬೇಕು
ಅದು ಕಾರಣ ಮಾಡಿಸಿ ಜ್ಞಾನ ಪ್ರಾಪ್ತಿಯಾಗಲಿಲ್ಲ ಮಾಡಿಸಿ ಪ್ರಮಥರ ಮನೋಹ್ಲಾದವಾಗಲಿಲ್ಲ ಕಪಿಲಸಿದ್ಧಮಲ್ಲಿಕಾರ್ಜುನಯ್ಯನ ಸಾಕ್ಷಾತ್ಕಾರವಾಗಲಿಲ್ಲ ಕೇಳಾ ಕೇದಾರಯ್ಯಾ

'ಮಾಡಿದ' ಮತ್ತು 'ಮಾಡಿಸಿದ' ಎನ್ನುವ ನುಡಿಗಳ ಮೂಲಕ ಸಿದ್ಧರಾಮಣ್ಣ ಕಾಯಕದ ಮಹತ್ವವನ್ನು ಇಲ್ಲಿ ಹೇಳುತ್ತಿದ್ದಾರೆ. ಜ್ಞಾನದ ಸಾಧನೆಯಾಗಬೇಕೆಂದರೆ ಅದು ಮಾಡುವ ಕಾಯಕದಿಂದ–ಶ್ರಮದಿಂದ ಸಾಧ್ಯವೇ ವಿನಾ ಮಾಡಿಸಿದ ಕಾರ್ಯದಿಂದ ಸಾಧ್ಯವಿಲ್ಲ. ಕಪಿಲಸಿದ್ಧಮಲ್ಲಿಕಾರ್ಜುನನ ಸಾಕ್ಷಾತ್ಕಾರವಾಗಬೇಕಾದರೆ ಅದು ಸ್ವಂತ ದುಡಿಮೆಯಿಂದ ಮಾತ್ರ ಸಾಧ್ಯ. ಸನಾತನದಲ್ಲಿ ಅರ್ಚಕ/ಪೂಜಾರಿ/ಪುರೋಹಿತರ ಮೂಲಕ ಭಕ್ತರು ದೇವರನ್ನು ಕಾಣಲು ಪ್ರಯತ್ನಿಸುತ್ತಾರೆ. ಲಿಂಗಾಯತದಲ್ಲಿ ನೇರವಾಗಿ ಭಕ್ತರು

ಗುರುವನ್ನು ಕಾಣುತ್ತಾರೆ. ಇಲ್ಲಿ 'ಅರ್ಚಕ' ಎಂಬ ಶೋಷಣಾತ್ಮಕ ವ್ಯವಸ್ಥೆಗೆ ಅವಕಾಶವಿಲ್ಲ. ಅರ್ಚಕ ವ್ಯವಸ್ಥೆಯಿಲ್ಲದೆ 'ಸನಾತನ'ಕ್ಕೆ ಅಸ್ತಿತ್ವೇ ಇಲ್ಲ. ಅರ್ಚಕ ವ್ಯವಸ್ಥೆಯು ಕುಳಿತುಣ್ಣುವ ಸಂಸ್ಕೃತಿಯಾಗಿದ್ದರೆ ಕಾಯಕವು ದುಡಿದುಣ್ಣುವ ಸಂಸ್ಕೃತಿಯಾಗಿದೆ.

ಸನಾತನ ಧರ್ಮವು ಸಮಾಜದ ಸಕಲರನ್ನೂ 'ಒಳಗೊಳ್ಳುವ' ಧರ್ಮವಲ್ಲ. ಲಿಂಗಾಯತವು ಇನ್‌ಕ್ಲೂಸಿವ್ ಧರ್ಮವಾಗಿದೆ. ಸನಾತನದಲ್ಲಿ ಅಸ್ಪೃಶ್ಯರಿದ್ದಾರೆ. ಲಿಂಗಾಯತದಲ್ಲಿ ಅಸ್ಪೃಶ್ಯರಿಲ್ಲ. ಸಿದ್ಧರಾಮಣ್ಣನವರು ಹೇಳಿರುವಂತೆ 'ತಟ್ಟುವ ಮುಟ್ಟುವ ಭೇದವುಳ್ಳನ್ನಬರ ಶರಣನಲ್ಲ'. ಮುಟ್ಟಿಸಿಕೊಳ್ಳುವ ಮುಟ್ಟಿಸಿಕೊಳ್ಳದಿರುವ ಅಮಾನವೀಯ ಕ್ರೂರ ಆಚರಣೆಗೆ ಲಿಂಗಾಯತದಲ್ಲಿ ಸ್ಥಾನವಿಲ್ಲ. ಅಂಗ ಮತ್ತು ಲಿಂಗ ಒಂದೇ ಆಗಿರುವ ಲಿಂಗಾಯತದಲ್ಲಿ ಅಸಮಾನತೆಗೆ ತಾರತಮ್ಯಕ್ಕೆ ಅವಕಾಶವಿಲ್ಲ. ಕಾಯಕವೇ ಕೈಲಾಸ ಎಂಬ ನುಡಿ ಬಸವಣ್ಣನವರ ವಚನಗಳಲ್ಲಿ ಇಲ್ಲ. ಆದರೆ ಬಸವಣ್ಣನವರೇ ಕಾಯಕಜೀವಿಗಳಾಗಿದ್ದರು. ಅವರು ಪುರೋಹಿತರಾಗಿರಲಿಲ್ಲ. ಪಂಚಾಂಗ ಬರೆಯುತ್ತಿರಲಿಲ್ಲ. ಅವರು ದೇವರನ್ನು 'ಕಾಣಿಸುವ' ಅರ್ಚಕರಾಗಿರಲಿಲ್ಲ. ಪ್ರತಿಯೊಬ್ಬರಿಗೂ ಅವರವರದೇ ದೈವ ಇಷ್ಟಲಿಂಗವನ್ನು ಅವರು ನೀಡಿದ್ದರು. ಅಲ್ಲಿ ಹೆಣ್ಣು ಗಂಡು ಎಂಬ ಭೇದವಿರಲಿಲ್ಲ. ಅಲ್ಲಿ ವರ್ಗ–ವರ್ಣ ಭೇದಗಳಿರಲಿಲ್ಲ. ಸನಾತನದಲ್ಲಿ ಬ್ರಾಹ್ಮಣರು ಮಾತ್ರ ಪುರೋಹಿರಾಗಬಹುದು. ಶೂದ್ರರಿಗೆ ಇದನ್ನು ನಿಷೇಧಿಸಲಾಗಿತ್ತು. ದಲಿತರಿಗೆ ಚಾತುರ್ವರ್ಣದಲ್ಲಿ ಸ್ಥಾನವೇ ಇಲ್ಲ. ಹೀಗೆ ಸನಾತನವು ಅಸಮಾನತೆಯ ಮಹಾಕೂಪವಾಗಿದೆ. ಮನುಸ್ಮೃತಿಯಲ್ಲಿ ಶೂದ್ರರಿಗೆ–ದಲಿತರಿಗೆಗೆ ಅಕ್ಷರದ ಹಕ್ಕಿರಲಿ ಸಂಸ್ಕೃತ ವೇದಗಳ ಮಂತ್ರಗಳನ್ನು ಕೇಳುವ ಹಕ್ಕೂ ಇರಲಿಲ್ಲ. ಇದು ನಮ್ಮ ಸಂವಿಧಾನವಾಗುವುದು ಹೇಗೆ ಸಾಧ್ಯ? ಅದನ್ನು ನಮ್ಮ ಶಾಲೆಗಳಲ್ಲಿ ಮಕ್ಕಳಿಗೆ ಬೋಧಿಸುವುದು ಹೇಗೆ? 'ಸ್ವಧರ್ಮ ನಿಧನಃ ಶ್ರೇಯಃ' ಎನ್ನುತ್ತದೆ ಭಗವದ್ಗೀತೆ. ಅಂದರೆ ಅದರ ಪ್ರಕಾರ ಕೂಲಿ ಮಾಡುವವನು ಮತ್ತು ಅವರ ಮಕ್ಕಳು ಕೂಲಿಕಾರರಾಗೇ ಇರಬೇಕು. ಕಸ ಬಳಿಯುವವರು ಮತ್ತು ಅವರ ಮಕ್ಕಳು ಕಸ ಬಳಿಯುವರಾಗೇ ಇರಬೇಕು. ಅವರು ಶಿಕ್ಷಕರು ಅಥವಾ ಸರ್ಕಾರಿ ನೌಕರರು ಆಗಬಾರದು. ಮಂತ್ರಿಗಳಾಗಬಾರದು. ಅವರು ತಮ್ಮ ಸ್ವಧರ್ಮವನ್ನೇ ಅಂದರೆ ಸ್ವಂತ ಕಸುಬನ್ನು ಪಾಲಿಸಬೇಕು. ಇಲ್ಲದಿದ್ದರೆ ಅದು ಅಧರ್ಮ. ಹೀಗೆ ಸನಾತನವು ಒಂದು ಪ್ರತಿಗಾಮಿ ಧರ್ಮ. ಅಲ್ಲಿ ಪ್ರಗತಿಗೆ, ಬದಲಾವಣೆಗೆ, ಮೇಲ್ಮುಖಿ ಚಲನೆಗೆ ಅವಕಾಶವಿಲ್ಲ. ವಚನ ಪರಿಭಾಷೆಯಲ್ಲಿ ಅದು ಸ್ಥಾವರ ಧರ್ಮ. ಕಾಯಕ ಮೀಮಾಂಸೆಯನ್ನು ಒಳಗೊಂಡ ಲಿಂಗಾಯತವು ಗತಿಶೀಲ ಧರ್ಮ. ಅದು ಕುಲಹದಿನೆಂಟು ಜಾತಿಗಳನ್ನು ಒಳಗೊಳ್ಳುವ ಧರ್ಮ. ಭಾರತದಲ್ಲಿ ಮಹಿಳೆಯನ್ನು 'ಜಗದ್ಗುರು'ವನ್ನಾಗಿ ಮಾಡಿದ್ದು ಲಿಂಗಾಯತ ಧರ್ಮ. ಉಂಡ ತಾಟಿನಲ್ಲಿ ಒಂದಗುಳು ಇಲ್ಲದಂತೆ ಉಣ್ಣುವ ಆಹಾರ ಸಂಸ್ಕೃತಿಯ ಧರ್ಮ ಇದಾಗಿದೆ. ಇಲ್ಲಿ ದಕ್ಷಿಣೆಗಾಗಿ–ದಾನಕ್ಕಾಗಿ 'ಹುಂಡಿ'ಗಳನ್ನಿಡುವ ಕ್ರಮ ಲಿಂಗಾಯತ ಧರ್ಮದಲ್ಲಿಲ್ಲ. ಅಂದಮೇಲೆ ಹುಂಡಿಯಿಂದ ಚಿನ್ನದ ಒಡವೆಗಳನ್ನು, ವಜ್ರ–ವೈಡೂರ್ಯಗಳನ್ನು, ಹಣವನ್ನು ಕಳವು ಮಾಡುವ ಪ್ರಶ್ನೆಯೇ ಇಲ್ಲ. ಸನಾತನದಲ್ಲಿ ದೇವರುಗಳು ಹಣವನ್ನು, ಬಂಗಾರವನ್ನು ಕೇಳುತ್ತವೆ. ಲಿಂಗಾಯತದಲ್ಲಿ ದೇವರಿಲ್ಲದ ಕಾರಣ ಹುಂಡಿಯಿಲ್ಲದ ಕಾರಣ ಯಾರೂ ಇಲ್ಲಿ ಹಣವನ್ನು, ಬಂಗಾರವನ್ನು ಕೇಳುವುದಿಲ್ಲ. ವಜ್ರದ, ಬಂಗಾರದ ರಥಗಳು ಲಿಂಗಾಯತಕ್ಕೆ ಬೇಕಾಗಿಲ್ಲ. ಲಿಂಗಾಯತದಲ್ಲಿ ಅಕ್ಷರವೇ ದೇವರು ಎಂದು ತಿಳಿದುಕೊಂಡು ನಮ್ಮ ಹಿರಿಯರು ಸ್ವಾತಂತ್ರ್ಯಪೂರ್ವದಲ್ಲಿಯೇ ಶಾಲೆಗಳನ್ನು ಕಟ್ಟಿದರು, ಪ್ರಸಾದ ನಿಲಯಗಳನ್ನು ಸ್ಥಾಪಿಸಿದರು. ವಿದ್ಯಾರ್ಥಿ ವೇತನಗಳನ್ನು ನೀಡುವ ಕ್ರಮ ತೆಗೆದುಕೊಂಡರು. ಸನಾತನದಲ್ಲಿದ್ದಂತೆ ವಿದ್ಯಾರ್ಥಿ ನಿಲಯಗಳಲ್ಲಿ "ಪಕ್ತಿಭೇದ" ಮಾಡಲಿಲ್ಲ. ಸಮಾನತೆಯು ಲಿಂಗಾಯತ ಧರ್ಮದ ಅಡಿಪಾಯವಾಗಿದೆ.

ಈ ಧರ್ಮದ ಅನುಯಾಯಿಗಳಾಗಿರುವ, ಸಿದ್ಧರಾಮಣ್ಣನವರ ಸಂತತಿಯಾಗಿರುವ ನೊಳಂಬ ಲಿಂಗಾಯತರು ಸನಾತನದ ಭ್ರಮೆಗೆ ಮರುಳಾಗದೆ ಲಿಂಗಾಯತದ ಸಮಾನತೆ, ಕಾಯಕ, ಮಹಿಳೆಯರಿಗೆ ಗೌರವ, ದಾಸೋಹ, ಎಲ್ಲರನ್ನು ಒಳಗೊಳ್ಳುವ ಮೌಲ್ಯಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು. ಕುಂಭಮೇಳ, ತೀರ್ಥಸ್ನಾನ, ತೀರ್ಥಯಾತ್ರೆ, ದಾನ–ದಕ್ಷಿಣೆ, ಇಟ್ಟಿಗೆ ಹೊರುವ, ಮಂಡೆ ಕೊಡುವ ಮುಂತಾದ ಕ್ರಮಗಳನ್ನು ಬಿಟ್ಟು ವಚನ ಮೌಲ್ಯಗಳಲ್ಲಿ ಬದುಕಬೇಕು. ಕಾಯಕವೇ ನಮ್ಮ ಧರ್ಮ. ಕಾಯಕದಿಂದಲೇ ನಮ್ಮ ಸಮಾಜವನ್ನು ಸಮೃದ್ಧ ಮಾಡಲು ಸಾಧ್ಯ. ಗುಡಿಗಳನ್ನು ಮಂದಿರಗಳನ್ನು ಕಟ್ಟಿ, ಇಂತಹ ಪೂಜೆಗೆ ಇಷ್ಟು ಹಣ ಎಂದು ಹೇಳಿ ಹಣಸಂಗ್ರಹ ಮಾಡುವುದರಿಂದ ದೇಶವನ್ನು ಕಟ್ಟುವುದು ಸಾಧ್ಯವಿಲ್ಲ. ಸಿದ್ಧರಾಮಣ್ಣನವರು ಬಸವಣ್ಣನವರನ್ನು 'ತಾಯಿ, ತಂದೆ, ಪರಮ ಬಂದು' ಎಂದು ಕರೆದು ಬಸವಣ್ಣನ ಧರ್ಮವೇ ನಮ್ಮ ಧರ್ಮ ಎಂದಿದ್ದಾರೆ. ಆದ್ದರಿಂದ ನೊಳಂಬ ಲಿಂಗಾಯತ ಸಂಘವು ಸಿದ್ಧರಾಮಣ್ಣನವರ ಜಯಂತಿಯನ್ನು ವಿಜೃಭಣೆಯಿಂದ ಆಚರಿಸುವಂತೆ ಬಸವ ಜಯಂತಿಯನ್ನು ಆಚರಿಸುವ ಸಂಪ್ರದಾಯವನ್ನು ಹುಟ್ಟು ಹಾಕಬೇಕು.

ನೊಳಂಬವಾಣಿ

ಪ್ರಸಾದದ ಅಪರಿಮಿತತೆ

ನಮ್ಮ 12ನೇ ಶತಮಾನದ ಶರಣರ ಮಹಾನ್ ಕ್ರಾಂತಿಯಲ್ಲಿ ಭಾಷಾ ಕ್ರಾಂತಿಯೂ ಪ್ರಮುಖವಾದದ್ದು. ಸಾಮಾಜಿಕ, ಧಾರ್ಮಿಕ, ಆರ್ಥಿಕ ಸಮಾನತೆಯ ಮೇಲೆ ಮಾಡಿದ ಹಲವು ಪ್ರಯೋಗಗಳ ಹೊಸತನಗಳನ್ನು ಮೈಗೂಡಿಸಿಕೊಂಡು ವಿಚಾರಪ್ರದವಾದ ಚಿಂತನೆಗಳು ಅನುಷ್ಠಾನಗೊಂಡು ಸಮಾಜದಲ್ಲಿ ಹೊಸತನದ ಸುಳಿಗಾಳಿಯ ಬೆಳಕು ಹರಿದಾಡುವಂತಾಗಿದ್ದು ಭಾಷಾ ಕ್ರಾಂತಿಯಿಂದ. ಶರಣರ ವಿಚಾರಗಳು, ಮಾರ್ಗಸೂಚಿಗಳು ಸಮಾಜದ ಜನರಿಗೆ ತಲುಪಬೇಕೆಂದರೆ ಭಾಷೆ ಪ್ರಮುಖವಾದದ್ದು. ಕ್ಲಿಷ್ಟವಾದ ಸಂಸ್ಕೃತಭಾಷೆಯಿಂದ ಸಮಾಜದ ಸುಧಾರಣೆ ಮಾಡಲು, ಸಾಮಾನ್ಯ ಜನರನ್ನು ತಲುಪಲು ಕಷ್ಟವಾಗಿದ್ದ ಕಾಲಘಟ್ಟದಲ್ಲಿ ಶರಣರು ತಮ್ಮ ಅಚ್ಚ ಕನ್ನಡ ಭಾಷೆಯಲ್ಲಿ ಸರಳವಾಗಿ, ನೇರವಾಗಿ ಜನರಿಗೆ ತಲುಪುವಂತೆ ಮಾಡಿದರು. ಅತ್ಯಂತ ಸರಳ ಭಾಷಾ ಪ್ರಯೋಗದಲ್ಲಿ ಬಳಕೆಯಾದ ಪಾರಿಭಾಷಿಕ ಪದಗಳು, ನುಡಿಗಟ್ಟುಗಳ ಪ್ರಯೋಗದಿಂದ ಭಾಷಾ ಸಾಮರ್ಥ್ಯ ಹೆಚ್ಚಲು ಕಾರಣವಾಗುವುದರ ಜೊತೆಗೆ ಅರ್ಥದಲ್ಲಿ ವಿಶೇಷತೆಯನ್ನು ಪಡೆದುಕೊಂಡು ಪದಗಳ ಮೌಲ್ಯ ಹೆಚ್ಚಾಗಲು ಕಾರಣವಾಯಿತು. ಉದಾ–ಪ್ರಸಾದ, ಅರಿವು, ಜಂಗಮ, ಅನುಭಾವ, ಶೂನ್ಯ, ಶರಣ, ಭವಿ ಇಂತಹ ಬಹಳಷ್ಟು ಪದಗಳು ಸಾಮಾನ್ಯ ಅರ್ಥವನ್ನು ಮೀರಿದ ವಿಶೇಷತೆಯನ್ನು ಪಡೆದು, ಊಟವು ಪ್ರಸಾದವಾಗಿ ಅದಕ್ಕೆ ಗೌರವ, ಘನತೆ ತಂದು ಕೊಟ್ಟಿತು. ಇಹದ ಬದುಕಿಗೆ ಭಾಷೆಯ ವಿಶೇಷತೆಯಿಂದ ಹೊಸ ವರ್ಚಸ್ಸನ್ನು ಪಡೆದು ಪರಮಾತ್ಮನಿಗೆ ಕಾಯ ಒಪ್ಪಿತವಾಗುವ ಹಾಗೆ ಮಾರ್ಪಾಡಾಯಿತು.

ನಾವು ದೇವರು ಕೊಟ್ಟ ಈ ಶರೀರವನ್ನು ಜೀವಂತವಾಗಿಸಿಕೊಳ್ಳುವುದಕ್ಕೆ ಮಾಡುವ ಊಟ ಸಾಮಾನ್ಯವಾದುದ್ದಲ್ಲ. ಅದು ಶ್ರೇಷ್ಠವಾದದ್ದು. ಅನ್ನ ಬರೀ ಅನ್ನವಾಗದೆ ದೇವರ ನೈವೇದ್ಯದಿಂದ ಪ್ರಸಾದವಾಗಿ ರೂಪಾಂತರವಾಗುತ್ತದೆ. ಪ್ರಸಾದವೆಂದರೆ ಪ್ರಸನ್ನತೆಯನ್ನು ನೀಡುವುದು ಎಂದರ್ಥ. ಬಾಹ್ಯ ವಸ್ತುವಿನ ಪದಾರ್ಥದಿಂದ ಅಂತರಿಕವಾಗಿ ಮನಸ್ಸಿಗೆ ಶುದ್ಧ ಭಾವವನ್ನು ಮೂಡಿಸುವುದು. ಇದರಿಂದ ಸಿಗುವ ಶುದ್ಧ ಪ್ರಸನ್ನತೆಯೇ ಆನಂದ. ಈ ಆನಂದವು ಚಿತ್ ಸ್ವರೂಪವಾದರೆ ಚಿದಾನಂದವಾಗುವುದು. ಆನಂದವೇ ಪರಮ ಸ್ಥಿತಿ. ದೇವರು ಕೊಟ್ಟ ಈ ದೇಹದ ಪೋಷಣೆಗೆ ಆಹಾರ ಬಹಳ ಮಹತ್ವದ್ದು. ನಾವು ಸೇವಿಸುವ ಆಹಾರದಿಂದ ನಮ್ಮ ನಡೆ–ನುಡಿಯು ನಿರ್ಧರಿತವಾಗುತ್ತದೆ. ನಾವು ಇಹದಲ್ಲಿ ಶ್ರೇಷ್ಠತೆಯನ್ನು ಕಂಡುಕೊಳ್ಳಬೇಕೆಂದರೆ ನಮ್ಮ ಊಟವು ಶ್ರೇಷ್ಠವಾಗಬೇಕು. ಪ್ರಸಾದವಾಗಬೇಕು. ಅದು ದೇವರಿಂದ ದೊರಕಿದ ಭಕ್ತಿಯ ಪ್ರಸಾದವಾಗಬೇಕು. 'ಪ್ರಸಾದ' ಎಂಬ ಪದ ಪ್ರಯೋಗವೇ ಶ್ರೇಷ್ಠತೆಯನ್ನು, ಭಕ್ತಿಯಿಂದ ಮೈತಾಳಿದ ಅನನ್ಯವಾದ ಗೌರವವನ್ನು ಕೊಡುತ್ತದೆ.

ಶರಣ ಧರ್ಮ ಸಿದ್ಧಾಂತಗಳಲ್ಲಿ ಮೊದಲನೆಯದು ಅಷ್ಟಾವರಣ. ಅದರಲ್ಲಿ ಬರುವ ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ಮಂತ್ರ, ವಿಭೂತಿ, ರುದ್ರಾಕ್ಷಿಗಳಲ್ಲಿ ಪ್ರಸಾದವೂ ಒಂದು. ದೇವರಿಗೆ ತೋರಿಸುವ ನೈವೇದ್ಯವೇ ಪ್ರಸಾದವಾಗಿ, ಭಕ್ತಿಯಿಂದ ಪ್ರಸಾದವಾದ ಅನ್ನ ದೇಹದ ಹಸಿವನ್ನು ಹಿಂಗಿಸಿ ಭಕ್ತಿ, ಶಾಂತಿ, ಚೈತನ್ಯಮಯವಾದ ಪ್ರಸನ್ನತೆಯನ್ನು ತಂದುಕೊಡುತ್ತದೆ. ದೈಹಿಕವಾಗಿ ಬದುಕಿಸುವುದರ ಜೊತೆಗೆ ಅಂತರಂಗದಲ್ಲಿ ಪ್ರಸನ್ನತೆಗೆ ಪ್ರಸಾದವಾಗುತ್ತದೆ. ನಾವು ಉಣ್ಣುವ ಪ್ರತಿ ತುತ್ತು ಪ್ರಸಾದವಾಗಬೇಕು ಪ್ರಸಾದವಾಗಿಸಿಕೊಂಡು ಸ್ವೀಕರಿಸಿದಾಗ ಮಾತ್ರ ಅದುದೈವ ಸ್ವರೂಪವಾಗುತ್ತದೆ. ತಾವೇ ಸ್ವಂತ ಕಾಯಕ ಮಾಡಿ ಸಂಪಾದಿಸಿದ ದುಡಿಮೆಯಿಂದ ಅಡುಗೆಯನ್ನು ತಯಾರಿಸಿ ಗುರು, ಲಿಂಗ, ಜಂಗಮಕ್ಕೆ ಆರ್ಪಿಸಿದ ಪದಾರ್ಥ ಪ್ರಸಾದದ ರೂಪವಾಗುತ್ತದೆ. ಪ್ರಸಾದಕ್ಕೂ ಗುರು, ಲಿಂಗ, ಜಂಗಮವೇ ತ್ರಿಕೂಟ ಶಕ್ತಿಗಳಾಗಿರುತ್ತಾರೆ. ಇದರ ಮಾನಸಿಕ ಸ್ವರೂಪವನ್ನು 'ಆದಯ್ಯನ' ಒಂದು ವಚನವು ಈ ರೀತಿಯಾಗಿ ಹೇಳುತ್ತದೆ. 'ಘನಲಿಂಗಕ್ಕೆ ಶುದ್ಧ ನಿರ್ಮಲವಾದ ಸಕಲ ಕರಣಂಗಳೇ ಭಜನ, ನಿಜಾನಂದವೇ ಭೋಜನ, ಪರಿಣಾಮವೇ ಪ್ರಸಾದ'. ಇದರಿಂದ ಪ್ರಸಾದ ತ್ರಿಮುಖ ರೂಪಿಯಾಗಿ ಬದಲಾಗುತ್ತದೆ. ಶುದ್ಧ ಪ್ರಸಾದ, ಸಿದ್ಧ ಪ್ರಸಾದ, ಪ್ರಸಿದ್ಧ ಪ್ರಸಾದವೆಂಬ ಮೂರು ವಿಧವನ್ನು ಚನ್ನಬಸವಣ್ಣನವರು ಹೇಳುತ್ತಾರೆ. ಶುದ್ಧ ಭಕ್ತಿಯಿಂದ ಆರ್ಪಿತವಾದ ಪದಾರ್ಥ ಪ್ರಸಾದವಾಗಿ ವ್ಯಕ್ತಿಯ ಮಾನಸಿಕ, ದೈಹಿಕ ಆರೋಗ್ಯಕ್ಕೆ ಕಾರಣವಾಗುತ್ತದೆ.



ಸುಶೀಲಾ ಸದಾಶಿವಯ್ಯ
'ಪ್ರಣವಂ' ಟೂಡಾಕಛೇರಿ ಹಿಂಭಾಗ
1ನೇ ಬ್ಲಾಕ್, 3ನೇ ಮೈನ್,
ಕುವೆಂಪುನಗರ, ತುಮಕೂರು.
ಮೊ : 7019843776

ಶುದ್ಧಸಿದ್ಧ ಪ್ರಸಿದ್ಧ ಪ್ರಸಾದವೆಂಬುವರು ನೀವು ಕೇಳಿರೇ
ಶುದ್ಧ ಪ್ರಸಾದ ಗುರು ಮುಖದಿಂದ

ಬಂದುದುಸಿದ್ಧ ಪ್ರಸಾದ ಲಿಂಗ ಮುಖದಿಂದ ಬಂದುದು
ಪ್ರಸಿದ್ಧ ಪ್ರಸಾದ ಜಂಗಮ ಮುಖದಿಂದ ಬಂದುದು
ಇದರೊಳಗೆ ಅವುದು ಘನವೆಂಬೆ ಆವುದು ಕಿರಿದೆಂಬೆ?
ಮಹಕ್ಕೆ ಮಹ, ಘನಕ್ಕೆ ಘನ ಮಹಾಘನಪ್ರಸಾದ
ಗುರು ಪ್ರಸಾದದಿಂದ ತನು ಶುದ್ಧವಾಯಿತ್ತು
ಲಿಂಗ ಪ್ರಸಾದದಿಂದ ಮನ ಶುದ್ಧವಾಯಿತ್ತು
ಜಂಗಮ ಪ್ರಸಾದದಿಂದ ಪ್ರಾಣ ಶುದ್ಧವಾಯಿತ್ತು
ಶರಣರ ಸಂಗದಿಂದ ಪ್ರಸಾದ ಸಾಧ್ಯವಾಯಿತ್ತು
ಕೂಡಲಚೆನ್ನ ಸಂಗಮದೇವಯ್ಯಾ
ಈ ತ್ರಿವಿಧ ಪ್ರಸಾದವ ಕಂಡೆನ್ನ ಭವಂ ನಾಸ್ತಿಯಾಯಿತ್ತು.

ನಾವು ಸ್ವೀಕರಿಸುವ ಆಹಾರ ಕೇವಲ ಶರೀರ ಪೋಷಣೆ ಮಾತ್ರವಲ್ಲ, ದೇಹವನ್ನು ಶಕ್ತಿಯುತವಾಗಿಸಿ ಮನಸ್ಸನ್ನು ಸಶಕ್ತಗೊಳಿಸುವುದು ಪ್ರಸಾದವಾಗುತ್ತದೆ. ಗುರುವಿಗೆ ಅರ್ಪಿಸಿದುದು ಶುದ್ಧ, ಲಿಂಗಕ್ಕೆ ಅರ್ಪಿಸಿದುದು ಸಿದ್ಧ, ಜಂಗಮಕ್ಕೆ ಅರ್ಪಿಸಿದುದು ಪ್ರಸಿದ್ಧ ಪ್ರಸಾದ ಎಂದು ಭಾವಿಸುತ್ತಾರೆ. ಹೀಗೆ ಗುರುವಿಗೆ, ದೇವರಿಗೆ ಜಂಗಮಕ್ಕೆ ಅರ್ಪಿಸಿದ ನಂತರ ಉಳಿಯುವುದೇ ಪ್ರಸಾದ. ಲಿಂಗ ಮುಖದಿಂದ ಬಂದ ಪ್ರಸಾದವಲ್ಲದೆ ಬೇರೇನನ್ನೂ ತೆಗೆದುಕೊಳ್ಳುವುದಿಲ್ಲ ಎಂಬ ಬಸವಣ್ಣನ ನಿಲುವು 'ನಂಬಿದಡೆ ಪ್ರಸಾದ. ನಂಬದಿದ್ದರೆ ವಿಷವು' ಎನ್ನುವ ಅವರ ನಿಷ್ಠೆಯೊಂದಿಗೆ ಪ್ರಸಾದದ ಮಹತ್ವ ಅರಿವಿಗೆ ಬರುತ್ತದೆ. 'ಪ್ರಸಾದ' ವೆಂದರೆ, ದೇವರು ನಮಗೆ ನೀಡಿದ್ದನ್ನು ಮತ್ತೆ ಗುರು, ಲಿಂಗ, ಜಂಗಮವೆಂಬ ದೇವರಿಗೆ ಅರ್ಪಿಸಿ ನಂತರ ಅದನ್ನು ಸಮಾಜಕ್ಕೆ, ತನ್ನ ಸುತ್ತಲಿನವರಿಗೆ ನೀಡಿ ಉಳಿದಿದ್ದನ್ನು ತನಗೆ ಎಂದು ಅತ್ಯಂತ ಗೌರವದಿಂದ, ಭಕ್ತಿ ಶ್ರದ್ಧೆಯಿಂದ ಪ್ರಸಾದವನ್ನು ಸ್ವೀಕರಿಸುವುದು ಶರಣನಾದವನ ಅಧ್ಯತೆಯಾಗಬೇಕು.

'ಲಿಂಗಮುಖದಿಂದ ಬಂದಪ್ರಸಾದವಲ್ಲದೆ ಕೊಂಡೆನಾದಡೆ
ನಿಮ್ಮಾಣೆ, ನಿಮ್ಮ ಪ್ರಮಥರಾಣೆ
ಲಿಂಗಾರ್ಪಿತವಲ್ಲದೆ ಉದಕವ ಮುಕ್ಕಳಿಸಿದಡೆ
ಸಲ್ಲೆನು ನಿಮ್ಮ ಗಣಾಚಾರಕ್ಕಯ್ಯಾ'
ಎಂಬುದು ಅವರ ವೀರ ನಿಷ್ಠೆ.

'ಗುರು ಲಿಂಗ ಜಂಗಮದಿಂದ
ಪಾದೋದಕ ಪ್ರಸಾದವಾಯಿತ್ತು
ಆ ಭಾವವೇ ಮಹಾ ಪ್ರಸಾದವಾಗಿ
ಎನಗೆ ಮತ್ತೆ ಬೇರೆ ಪ್ರಸಾದವೆಂಬುದಿಲ್ಲ
ಕೂಡಲಸಂಗಮದೇವಾ'

ನಾವು ಸ್ವೀಕರಿಸುವ ಆಹಾರವೆಲ್ಲ ಶಿವನ ಪ್ರಸಾದ. ಆತನ ಕೃಪೆಯಿಂದ ಬೆಳೆದು ಬಂದುದು ನಮ್ಮ ಸಾಧನೆಯ ಸಾಕ್ಷಾತ್ಕಾರವನ್ನು ಪಡೆಯಲು ಸಾಧಕವಾಗಿ ಈ ದೇಹಕ್ಕೆ ಚೈತನ್ಯವಾಗುವ ದಿವ್ಯ ಶಕ್ತಿ ನಮ್ಮ ಆಹಾರ. ನಮ್ಮ ದೇಹವನ್ನು ತಣಿಸುವ ಆಹಾರವನ್ನು ನಾವು ಪವಿತ್ರ ಭಾವದಿಂದ ಸ್ವೀಕರಿಸಬೇಕು. ತಟ್ಟೆಗೆ ಬಂದ ಅನ್ನ ಪ್ರಸಾದವಾಗಿರುವುದರಿಂದ ಅದನ್ನು ಹೊರಗೆ ಚೆಲ್ಲಿ ನಷ್ಟಮಾಡಬಾರದು. ಗುರು, ಲಿಂಗ ಜಂಗಮಕ್ಕೆ ಅರ್ಪಿಸಿ ಪ್ರಸಾದವಾಗಿಸಿಕೊಂಡು ದಾಸೋಹ ಮಾಡುವುದು ಉಳಿದ ಪ್ರಸಾದವನ್ನು ನಾವು ಸೇವಿಸುವುದರಿಂದ ನಾವು ವಿಶ್ವವನ್ನು, ನಮ್ಮ ಇಹದ ಬದುಕನ್ನು ನೋಡುವ ನೋಟವೇ ಬೇರೆಯಾಗುತ್ತದೆ. ಅನ್ನದ ಮೌಲ್ಯ ಹೆಚ್ಚು ಮಾಡಿದ ಪ್ರಸಾದವನ್ನು ಶಿವಾರ್ಪಣ ಭಾವದಿಂದ ಮಾಡಬೇಕು. ಆಗ ಅದು ಪ್ರಸಾದಕ್ಕೆ ಕಾರಣವಾಗುತ್ತದೆ.

ಚೆನ್ನಬಸವಣ್ಣ
'ಬೇಕೆನ್ನಲಾಗದು ಶರಣಂಗೆ
ಬೇಡವೆನ್ನಲಾಗದು ಶರಣಂಗೆ
ಬಂದ ಸುಖವನತಿಗಳೆಯಲಾಗದು ಶರಣಂಗೆ
ಇದು ಕಾರಣ ಕೂಡಲಚೆನ್ನಸಂಗಯ್ಯ ನಿಮ್ಮ ಶರಣರು
ಉಂಡು ಉಪವಾಸಿಗಳು ಬಳಸಿ ಬ್ರಹ್ಮಚಾರಿಗಳು'.

ಪ್ರಸಾದದ ಸಂತೃಪ್ತಿ ಹಾಗೂ ಮಹದಾನಂದ ಸ್ಥಿತಿಯೇ ಲಿಂಗಾಂಗ ಸಾಮರಸ್ಯದ ಅಂತಿಮ ನಿಲುವು. ಜಂಗಮನು ಇಂತಹ ಆನಂದದ ಸ್ಥಿತಿಯ ಆಚರಣೆಯನ್ನು ಸಕಲ ಜೀವರಾಶಿಗೆ ದಾಸೋಹ ಮಾಡುವುದೇ ಪ್ರಸಾದ ತತ್ವದ ರೂಪ. ಜಂಗಮ ಪ್ರಸಾದವೇ ಎಲ್ಲದಕ್ಕಿಂತ ಹಿರಿದು. ಸಮಾಜಕ್ಕೆ ಅರ್ಪಿಸುವ ದಾಸೋಹ ತತ್ವದಿಂದ ಸಮಾನತೆಯ ಭಾವ ಮೂಡುತ್ತದೆ. ಜನಸೇವೆಯನ್ನೇ ಉದ್ದೇಶ ಮಾಡಿಕೊಂಡು ಶರಣನಾದವನು ಕಾಯಕದಿಂದ ಬಂದ ಫಲವನ್ನು ಜಂಗಮಕ್ಕೆ ಅರ್ಪಿಸಿ ಪ್ರಸಾದವಾಗಿಸಿಕೊಂಡು ಸ್ವೀಕರಿಸಿದರೆ ಆತನು ಎಲ್ಲವೂ ಇದ್ದು ಇಲ್ಲದ ನಿರ್ಮೋಹದ ಭಾವ ಅವನಲ್ಲಿ ನೆಲೆಯಾಗುತ್ತದೆ.

ಶರಣನಾದವನು ತಾನು ಉಣ್ಣುವ ಅನ್ನವನ್ನು ಪ್ರಸಾದವಾಗಿಸಿಕೊಂಡಂತೆ ಸಕಲ ಜೀವಾತ್ಮವೂ, ಸೃಷ್ಟಿಯ ಚರಾ ಚರವು ದೈವದ ಕೃಪೆಯ ಪ್ರಸಾದ. ಹಾಗೆ 'ಕೊಡಲಸಂಗನ ಪ್ರಸಾದ ಕಾಯವ ಕೆಡಿಸಲಾಗದು' ಎಂದು ಹೇಳುವ ಬಸವಣ್ಣನವರು ಈ ಜೀವವನ್ನು ಒಪ್ಪ ಮಾಡಿಕೊಂಡು ಆರೋಗ್ಯಯುತವಾಗಿ ಇಟ್ಟುಕೊಳ್ಳುವುದಕ್ಕೆ

ಆಹಾರವನ್ನು ಗೌರವಿಸುವ ಭಕ್ತಿ, ವಿನಯವಂತಿಕೆ ನೆಲೆಯಾದಾಗ ಎಲ್ಲವನ್ನೂ ದೇವರು ಕೊಟ್ಟ ಪ್ರಸಾದ ಎಂದು ತಿಳಿದು ನಡೆದಾಗ, ಪ್ರಕೃತಿಯಿಂದಾದ ಯವುದನ್ನು ಅನ್ಯತಾ ನಾಶಮಾಡದೇ ಮುಂದಿನ ಪೀಳಿಗೆಗೆ ಉಳಿಸಿ ಹೋಗುವಂತ ಸದ್ಬಳಕೆಯ ಮನಸ್ಸು ಬರುತ್ತದೆ.

ಶರಣರು ಬಳಸಿದ ವಿಶೇಷಪದಗಳು ತನ್ನ ಅರ್ಥ ವ್ಯಾಪ್ತಿ ವಿಸ್ತರಿಸಿಕೊಂಡು ಸಾಮಾನ್ಯವೂ ಅಸಾಮಾನ್ಯವಾಯಿತು. ಅಲ್ಪವೂ ಮಹತ್ವವಾಯಿತು. ಕಿರಿದು ಹಿರಿದಾಯಿತು. ಶರಣರು ನೀರಿಗೂ ಸಂಸ್ಕಾರ ಕೊಟ್ಟು ಪಾದೋದಕವನ್ನಾಗಿಸಿದರು. ಪದಾರ್ಥಕ್ಕೆ ಸಂಸ್ಕಾರ ಕೊಟ್ಟು ಪ್ರಸಾದವನ್ನಾಗಿಸಿದರು. ತನು–ಮನದ ಮಲಿನತೆಯನ್ನು ತೊಲಗಿಸಿ ಸಂಪತ್ತಿನ ಸದ್ಬಳಕೆಯನ್ನು, ಸಾರ್ಥಕ ಜೀವನದ ಮೌಲ್ಯವನ್ನು ಹೆಚ್ಚು ಮಾಡಲು ಕಾಯಕ ದಾಸೋಹದ ಜೊತೆಗೆ ಪ್ರಸಾದವು ಸೇರಿ ಸಮಾಜದಲ್ಲಿ ಸರ್ವ ಸಮಾನತಾ ಭಾವದಲ್ಲಿ ಶ್ರೇಷ್ಠತೆಯು ನೆಲೆಯಾಯಿತು. ಇಲ್ಲಿ ಎಲ್ಲವೂ ಒಂದಕ್ಕೊಂದು ಪೂರಕವಾಗಿ ವ್ಯಕ್ತಿಯನ್ನು, ಸಮಾಜವನ್ನು ಮಹೋನ್ನತವಾಗಿಸುವಲ್ಲಿ ಸಫಲತೆಯನ್ನು ಪಡೆಯಿತು.

ಹಸಿವು, ಆನಂದ ಎರಡನ್ನೂ ನೀಗಿಸುವ ಪ್ರಸಾದ ಮರ್ತ್ಯದ ಸಕಲವನ್ನು ಪೊರೆಯುತ್ತದೆ. ದೇಹದ ಹಸಿವಿಗೆ ಅನ್ನವನ್ನು, ಇದರಿಂದ ಆತ್ಮಕ್ಕೆ ಆನಂದವನ್ನು ನೀಡುವುದೇ ಪ್ರಸಾದ. ಆತ್ಮದ ಅಹಂಕಾರವನ್ನು ನಿರಸನಮಾಡುವುದೇ ಪ್ರಸಾದದ ಅರ್ಪಣೆಯ ಹಿಂದಿರುವ ತತ್ವ. ಭಕ್ತಿಯಿಂದ ಏನನ್ನು ಅರ್ಪಿಸಿದರೂ ಅದು ಪ್ರಸಾದವಾಗುತ್ತದೆ. ಕಾಯ, ಕರಣ ಭಾವಾರ್ಪಣಗಳಿಂದ ಸರ್ವಾಂಗ ಲಿಂಗಿಯಾದ ಶರಣನಿಗೆ ಪ್ರಸಾದವಲ್ಲದೆ ಇನ್ನಾವುದು ಇಲ್ಲ. ಅಖಂಡಾನಂದ ಸ್ಥಿತಿಯನ್ನು ಪಡೆದ ಜಂಗಮಭಕ್ತ ಸ್ಥಲಕ್ಕೆ ಇಳಿದು ತನ್ನ ಆನಂದದ ಅನುಭವನ್ನು ಸಕಲ ಜೀವ ರಾಶಿಗೆ ದಾಸೋಹ ಮಾಡುವುದೇ ಪ್ರಸಾದದ ಅಂತಿಮ ನಿಲುವು ಆಗಿದೆ.

'ಪ್ರಸಾದ' ಎಂಬ ಭಾವದಲ್ಲಿ ವಿನಮ್ರತೆಯನ್ನು, ಭಕ್ತಿಯ ಸಮರ್ಪಣತೆಯನ್ನು, ವಿಶಾಲ ದೃಷ್ಟಿಯನ್ನು ನಮ್ಮಲ್ಲಿ ಮೈತಳೆಯುವಂತೆ ಮಾಡುವ ಆಹಾರಕ್ಕೆ ಘನತೆ, ಗೌರವವನ್ನು ಕೊಟ್ಟು, ವ್ಯಕ್ತಿಯ ಅಹಂ, ನಾನು, ನನ್ನದು ಎಂಬ ಈಗೋವನ್ನು ಇಲ್ಲವಾಗಿಸಿ, ಎಲ್ಲರೊಳಗೆ ಒಂದಾಗಿ ಬದುಕುವ ಸಾಮಾಜಿಕ ಸ್ನೇಹಪರವಾದ ಗುಣವನ್ನು ನೀಡಿ, ಉಳ್ಳವರು ಇಲ್ಲದವರಿಗೆ ನೀಡಿ ಸಂತೃಪ್ತವಾಗುವ, ಸಮಾಜವನ್ನು ಜೊತೆಯಲ್ಲಿ ಸಂತುಷ್ಟ ಗೊಳಿಸುವ ಉದಾರ ಚಿಂತನಾ ಭಾವವೇ ಪ್ರಸಾದದ ಹಿಂದಿರುವ ಮೂಲತತ್ವ.

ಸದ್ಭಕ್ತ ಸಮಾಜ ಬಾಂಧವರಲ್ಲಿ ಮನವಿ

ನೊಳಂಬ ಲಿಂಗಾಯತ ಸಂಘ (ರಿ), ಬೆಂಗಳೂರು ವತಿಯಿಂದ ಚಿಕ್ಕಮಗಳೂರು ಜಿಲ್ಲೆ, ಕಡೂರು ಪಟ್ಟಣದಲ್ಲಿ "ಶ್ರೀಗುರು ಸಿದ್ಧರಾಮೇಶ್ವರ ಸಮುಧಾಯ ಭವನ"ದ ನಿರ್ಮಾಣ ಕಾರ್ಯ ಆರಂಭವಾಗಿದ್ದು, ಕಾಮಗಾರಿ ಭರದಿಂದ ಸಾಗುತ್ತಿದೆ. ಈ ಸದುದ್ದೇಶಕ್ಕಾಗಿ ಸದ್ಭಕ್ತರಾದ ಸಮಾಜ ಬಾಂಧವರು ಭಾವ ಶುದ್ಧಿಯಿಂದ ತನು–ಮನ–ಧನವನ್ನು ನೀಡುವುದರ ಮುಖೇನ ಸಮಾಜದ ಏಳಿಗೆಗೆ ತಾವು ಕೈ ಜೋಡಿಸಿ ಶ್ರೀಗುರು ಸಿದ್ಧರಾಮೇಶ್ವರರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ ಮಾಡಿಕೊಳ್ಳುತ್ತೇವೆ.

ದೇಣಿಗೆ ನೀಡುವ ದಾನಿಗಳು ಈ ಕೆಳಕಂಡ ಖಾತೆ ಜಮಾ ಮಾಡಿ ನಮಗೆ ಮಾಹಿತಿ ನೀಡತಕ್ಕದ್ದು:

(ಮೊ. : 94480 61972/94486 39121)

ಬ್ಯಾಂಕಿನ ಹೆಸರು : ಚಿಕ್ಕಮಗಳೂರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ (ಕೆ.ಎಸ್.ಸಿ.ಬಿ)

ಖಾತೆಯ ಹೆಸರು : ನೊಳಂಬ ಲಿಂಗಾಯತ ಸಂಘ (ರಿ) ಉಪಸಮಿತಿ, ಕಡೂರು

ಖಾತೆಯ ಸಂಖ್ಯೆ : 120003461358

ಐ.ಎಫ್.ಎಸ್.ಸಿ.ಕೋಡ್ : ಕೆಎಸ್‌ಸಿಬಿ0012001

ಶಾಖೆಯ ಹೆಸರು : ಕಡೂರು

ಇಂತಿ,

ಅಧ್ಯಕ್ಷರು ಹಾಗೂ ಗೌರವಾನ್ವಿತ ಸದಸ್ಯರು, ಉಪಸಮಿತಿ ಕಡೂರು.

ಸಿದ್ದರಾಮರ ವಚನಗಳಲ್ಲಿ ಶೈಕ್ಷಣಿಕ ಮೌಲ್ಯಗಳು ಮತ್ತು ಕಲಿಕೆ

ಒಂದು ಕಾಲಕ್ಕೆ ಸರಿಯೆನಿಸಿದ ಮೌಲ್ಯಗಳು ಆಶಯಗಳು, ಅವಶ್ಯಕತೆಗಳು, ಆಕಾಂಕ್ಷೆಗಳು ಮತ್ತೊಂದು ಕಾಲದಲ್ಲಿ ನೀರಸವೆನಿಸಿ, ಅರ್ಥ ಕಳೆದುಕೊಳ್ಳಬಹುದು. ಆದರೆ ಒಂದೊಂದು ಯುಗದಲ್ಲಿಯ ಮಹಾನ್ ಪುರುಷರು ತೋರಿದ ಮಾನವೀಯ ಮೌಲ್ಯಗಳು ಜೀವಪರ ನಿಲುವುಗಳು ಅರ್ಥ ಕಳೆದುಕೊಳ್ಳುವುದಿಲ್ಲ ಇಂತಹವರು ಸಮಾಜದಲ್ಲಿ ಸರ್ವಕಾಲಕ್ಕೂ ಸರ್ವರಿಗೂ ಸೂಕ್ತವೆನಿಸುವ ಒಳ್ಳೆಯದನ್ನು ಸಮಾಜಕ್ಕೆ ನೀಡಿರುತ್ತಾರೆ.

12ನೇ ಶತಮಾನದ ಪೂರ್ವದಲ್ಲಿ ಅಂದರೆ ಚಂಪೂ ಶೈಲಿಯ ಕಾಲದಲ್ಲಿ ರಾಜರನ್ನು ಓಲೈಸುವ ಸಾಹಿತ್ಯವಿತ್ತು. ಕಾವ್ಯದ ಹೆಗ್ಗಳಿಕೆ ಛಂದಸ್ಸು ಅಲಂಕಾರಗಳನ್ನು ಇದರಲ್ಲಿ ತಂದರು. ಇವು ಜನ ಮನವನ್ನು ಗೆಲ್ಲುವಲ್ಲಿ ಸೋತು ಪಾಂಡಿತ್ಯ ಪೂರ್ಣತೆಗೆ ಮೀಸಲಾದವು. ಮನುಕುಲಕ್ಕೆ ಬೇಕಾದ ಜೀವನ ಮೌಲ್ಯಗಳು ಜನ ಮನಕ್ಕೆ ಮುಟ್ಟಿಸುವಲ್ಲಿ ಶರಣರು ರಚಿಸಿದ ವಚನಗಳು ಆಡು ಭಾಷೆಯ ಸರಳ ರೂಪದಲ್ಲಿದ್ದು ಸರ್ವರೂ ಅರ್ಥೈಸಿಕೊಳ್ಳಬಹುದಾಗಿತ್ತುವಚನಕಾರರು ಬದುಕನ್ನು ಅರ್ಥೈಸಿರುವ ರೀತಿಯೇ ಬಹು ವಿಶಿಷ್ಟವಾದುದು. ಮಾನವ ಹಿತ ಸಾಧನೆಗೆ ವಚನಕಾರರು ಕೊಟ್ಟ ಕೊಡುಗೆ ಅಪಾರವಾದದ್ದು. ಇವರು ಅಂದು ಬೆಳಗಿದ ಬೆಳಕಿನ ಕಿರಣಗಳು ಸರ್ವಕಾಲಕ್ಕೂ ಮಾರ್ಗದೀವಿಗೆಗಳಾಗಿವೆ .

12ನೇ ಶತಮಾನದ ಪೂರ್ವದಲ್ಲಿದ್ದ ಪಾಂಡಿತ್ಯಪೂರ್ಣ ಪ್ರದರ್ಶನ ಪರಂಪರೆಯನ್ನು ಸಿದ್ದರಾಮರು ಒಪ್ಪುವುದಿಲ್ಲ. ಶರಣರಲ್ಲಿ ವಚನಕಾರ ಸಿದ್ದರಾಮರು ಕೊಟ್ಟ ಲೋಕ ಸಂದೇಶಗಳಲ್ಲಿ ಅವರ ಜೀವನ ಮತ್ತು ಸಾಧನೆಗಳನ್ನು ಕಾಣಬಹುದು. ವಚನಕಾರ ಸಿದ್ದರಾಮರು ಲೋಕ ಹಿತ ಬಯಸಿದವರು. ಸಕಲ ದೇವರಲ್ಲಿ ಅನುಕಂಪೆ ತೋರಿದವರು. ಮಾನವ ಪ್ರಗತಿಯನ್ನು ಆಶಿಸಿದವರು. ಆ ಪ್ರಗತಿಗಾಗಿಯೇ ಇರುವ ಅಂಶಗಳಲ್ಲಿ ಶಿಕ್ಷಣವು ಒಂದು ಎಂಬುದನ್ನು ತಮ್ಮ ವಚನಗಳ ಮೂಲಕ ಅರುಹಿದ್ದಾರೆ. ವಚನಕಾರ ಸಿದ್ದರಾಮರು ಪ್ರಮುಖ ಶರಣರಲ್ಲಿ ಒಬ್ಬನಾಗಿ ಈತ ಉಳಿದಿರುವುದು ಮಾತ್ರವಲ್ಲದೆ ಅವರಿಂದ ಸ್ವಲ್ಪ ಮಟ್ಟಿಗೆ ಬೇರೆಯಾಗಿಯೂ ನಿಲ್ಲುತ್ತಾರೆ. ಶರಣರ ಕಾಯಕ ನಿಷ್ಠೆ, ಸರ್ವಸಮಾನತೆ, ಧಾರ್ಮಿಕ ಆಚರಣೆ, ಸಾಮಾಜಿಕ ಅಭಿವೃದ್ಧಿ ಈ ಮೊದಲಾದ ವಿಚಾರಧಾರೆಯಲ್ಲಿಯೇ ಶಿಕ್ಷಣ ಮತ್ತು ವಿದ್ಯೆಗಳಲ್ಲಿಯೂ ಆತನ ಸಂದೇಶದ ಎಳೆಗಳು ಹರಡಿಕೊಳ್ಳುತ್ತವೆ.



ಸುಶೀಲ ಸೋಮಶೇಖರ್
ಚೈತ್ರೋದಯ, ಪ್ರೆಸಿಡೆನ್ಸಿ ಕಾಲೇಜು
ಹಿಂಭಾಗ, ಸಾಲಗಾಮೆ ರಸ್ತೆ,
ಹಾಸನ–573201
ಮೊ : 9448997084

ಶಿಕ್ಷಣವು ವ್ಯಕ್ತಿ ಸಮಾಜ ದೇಶದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾದದ್ದು. ಅಂತೆಯೇ ಒಂದು ನಾಡಿನ ಶ್ರೇಷ್ಠತೆಗೆ ಕಾರಣವಾದದ್ದು. ಶಿಕ್ಷಣವು ಜ್ಞಾನ ಕೌಶಲ್ಯಗಳನ್ನು ಹೊರ ತರುವ ನಿರಂತರ ಪ್ರಕ್ರಿಯೆ. ವಿದ್ಯೆಯೆಂಬುದು ಶಿಕ್ಷಣ ಕ್ಷೇತ್ರದಲ್ಲಿ ಒಂದು ಕಲಿಕಾ ಮಾರ್ಗ. ಹಿರಿಯರಿಂದ, ಬಲ್ಲವರಿಂದ, ಸುಜ್ಞಾನದಿಂದ, ಸ್ವ ಅಧ್ಯಯನದಿಂದ, ಶಾಸ್ತ್ರಗಳಿಂದ ಹೀಗೆ ನಾನಾ ಮಾರ್ಗಗಳಿಂದ ಪಡೆಯಬಹುದು. ಶಿಕ್ಷಣದಿಂದ ವಿದ್ಯೆ ಲಭಿಸುತ್ತದೆ. ವಿದ್ಯೆಯಿಂದ ವ್ಯಕ್ತಿತ್ವ ವಿಕಸನವಾಗುತ್ತದೆ ವಿದ್ಯೆಯೆಂಬುದು ಅಭ್ಯಾಸಿ ಗನ ಕೈವಶ ಎನ್ನುತ್ತಾರೆ ಸಿದ್ದರಾಮರು. ಓದು ಮತ್ತು ಶಿಕ್ಷಣದ ನಿಟ್ಟಿನಲ್ಲಿಯೂ ಸಿದ್ದರಾಮರ ವಚನ ಪ್ರೀತಿ ಬಹುದೊಡ್ಡದು.

ಎಮ್ಮ ವಚನದೊಂದು ಪಾರಾಯಣಕ್ಕೆ ವ್ಯಾಸನದೊಂದು ಪುರಾಣ ಸಮಬಾರದಯಯ್ಯಾ
ಎಮ್ಮ ವಚನದ ನೂರೆಂಟಧ್ಯಯನಕ್ಕೆ ಶತ ರುದ್ರಿಯ ಯಾಗ ಸಮಬಾರದಯ್ಯಾ
ಎಮ್ಮ ವಚನದ ಸಾಸಿರ ಪಾರಾಯಣಕ್ಕೆ ಗಾಯತ್ರಿ ಲಕ್ಷ ಜಪ ಸಮಬಾರದಯ್ಯ
ಕಪಿಲಸಿದ್ಧ ಮಲ್ಲಿಕಾರ್ಜುನ.

ವಚಿಸಿ ಅನುಭವಿಯಾದವ ಪಂಡಿತನಯ್ಯ ವಚಿಸಿ ಅನುಭವಿಯಾಗದವ ಪಿಶಾಚಿಯಯ್ಯ ವಿದ್ಯೆಯೆಂಬುದು ಅಭ್ಯಾಸಿಗನ ಕೈವಶ ಅವಿದ್ಯೆಯೆಂಬುದು ಸರ್ವರಲ್ಲಿ ವಶ ವಿದ್ಯಾ ವಿದ್ಯೆಯನರಿತು ಜಗದ್ವೇದ್ಯನಾಗಬಲ್ಲಡೆ ಮಹಾ ಪಂಡಿತ ನೋಡ ಕಪಿಲಸಿದ್ಧಮಲ್ಲಿಕಾರ್ಜುನ

ವಿದ್ಯೆಯೆಂಬುದು ವಿತ್ ಎಂಬ ಧಾತುವಿನಿಂದ ಉತ್ಪತ್ತಿಯಾಗಿದೆ. ವಿದ್ ಎಂದರೆ ತಿಳಿಯುವುದು ಅರಿತುಕೊಳ್ಳುವುದು ಎಂದರ್ಥ. ತಿಳಿಯುವುದೆಂದರೆ ಅನ್ಯರ ಅನುಭವವನ್ನು ಕೇಳಿ ಅಥವಾ ಪುಸ್ತಕಗಳನ್ನು ಓದಿ ಅರಿತುಕೊಳ್ಳುವುದು.

ಹಾಗಾಗಿ 'ದೇಶ ಸುತ್ತು ಕೋಶ ಓದು' ಎನ್ನುತ್ತಾರೆ. ವಚನಕಾರರ ಮಾತಿನಲ್ಲಿ ಹೇಳುವುದಾದರೆ ಸ್ವಯಂಭುವಾಗಿ ತನ್ನನ್ನು ತಾನೇ ಅರಿತುಕೊಳ್ಳುವುದು. ತನ್ನ ವಿವೇಕವನ್ನು ತಾನೇ ಓರೆಗೆ ಹಚ್ಚಿ ನೋಡಿಕೊಳ್ಳುವುದು. ಅರಿವು ಎಂದರೆ ಜ್ಞಾನ ಬೆಳಕು, ತಿಳುವಳಿಕೆ ವಿವೇಕ ಎಂಬರ್ಥಗಳು ಉಂಟು. ಶರಣರ ಮಾತಿನಲ್ಲಿ 'ಅರಿವೇ ಗುರು ನುಡಿ ಜ್ಯೋತಿರ್ಲಿಂಗ'. ಈ ಅರಿವಿನ ಬೆಳಕೆ ವಿದ್ಯೆ. ಅರಿವೆಂಬ ಬೆಳಕನ್ನು ಯಾರು ನೀಡುತ್ತಾರೋ ಅವರೇ ಆಚಾರ್ಯರು, ಗುರುಗಳು ಹಿರಿಯರು.

ಗುರುಗಳ ಹಿರಿಯರ ಅಥವಾ ಉತ್ತಮ ಗ್ರಂಥಗಳನ್ನು ಓದಿದ ಮೇಲೊ, ಕೇಳಿದ ಮೇಲೊ ಅನುಭವ ತಾನಾಗಿ ಅವರಿಗೆ ಸಿದ್ಧಿಸುತ್ತದೆ. ವಚಿಸಿ ಅಂದರೆ ಮಾತನಾಡಿ ಅನುಭವ ಪಡೆಯಬೇಕು. ಈ ಅನುಭವ ಅನುಭಾವವಾದಾಗ ಮಹಾ ಪಂಡಿತನಾಗುತ್ತಾನೆ. ತಾನು ಪಡೆದ ವಿವೇಕ ಎಂಬ ಬೆಳಕನ್ನ ಅನ್ಯರ ವ್ಯಕ್ತಿತ್ವಕ್ಕೂ ಬೀರುತ್ತಾನೆ. ಇಲ್ಲಿ ಬೌದ್ಧಿಕ ಕಸರತ್ತು ನಡೆದಿರುತ್ತದೆ. ಯಾರೇ ಆಗಲಿ ತಮ್ಮ ನಿರಂತರ ಸುಜ್ಞಾನ ಗಳಿಕೆಗಾಗಿ ಓದುವುದು ಬರೆಯುವುದು ಸಂವಾದದಲ್ಲಿ ಭಾಗವಹಿಸುವುದು. ವಿಷಯಾನುಕ್ರಮಣಿಕೆಯಲ್ಲಿ ಪರಸ್ಪರ ಸ್ಪಂದಿಸುವುದು ಇವು ನಿರಂತರವಿದ್ದಾಗ ವಿದ್ಯೆಯೆಂಬುದು ಅವರ ಕೈವಶವಾಗುತ್ತದೆ. ಕಲಿತ ವಿದ್ಯೆಯಿಂದ ಸಕಲವನ್ನು ಸಕಲರನ್ನು ತನ್ನ ಕೈವಶ ಮಾಡಿಕೊಳ್ಳುತ್ತಾರೆ. ಪರಿಪಕ್ವ ಅನುಭವಿಯು ತನ್ನ ಮಾತುಗಳಿಂದ ಎಲ್ಲರನ್ನೂ ಗೆಲ್ಲುತ್ತಾನೆ.

ಓದಿದಷ್ಟು ಜ್ಞಾನ ಮನದೊಳಗೆ ತುಂಬುತ್ತಾ ಹೋಗುತ್ತದೆ. ಈ ರೀತಿ ಜ್ಞಾನ ಗಳಿಸುವಲ್ಲಿ ಓದಿನ ಕುರಿತು ಪ್ರಾಮಾಣಿಕತೆ ಶ್ರದ್ಧೆ ನಿಷ್ಠೆ ಬಹು ಮುಖ್ಯ. ವಿದ್ಯೆಯನ್ನು ಕೈವಶ ಮಾಡಿಕೊಂಡವರು ಲೋಕ ಚಿಂತಕರಾಗುತ್ತಾರೆ ವಿಶ್ವ ಪ್ರೇಮಿ ಆಗುತ್ತಾರೆ. ಈ ಜ್ಞಾನವೆಂಬ ರತ್ನವನ್ನು ತಮ್ಮೊಳಗೆ ತುಂಬಿಕೊಂಡು ಜಗದೊಳಗೆ ಮೌಲ್ಯಯುತ ಎನಿಸಿಕೊಳ್ಳಲು ಪಂಚೇಂದ್ರಿಯಗಳನ್ನು ತನ್ನ ಸೇವಕರನ್ನಾಗಿ ಮಾಡಿಕೊಳ್ಳಬೇಕು. ಪಂಚೇಂದ್ರಿಯಗಳು ಜ್ಞಾನ ಗಳಿಕೆಯ ಬಾಗಿಲು ಎನ್ನುತ್ತಾರೆ. ನಮ್ಮಲ್ಲಿರುವ ಭೌತಿಕ ಸಾಧನಗಳನ್ನು ಬೇರೆಯವರು ಕದಿಯಬಹುದು. ಆದರೆ ನಮ್ಮೊಳಗಿನ ವಿದ್ಯೆಯನ್ನು, ಜ್ಞಾನವನ್ನು, ಕಲಿಕೆಯ ಮನಸ್ಸನ್ನು, ಪಡೆದ ಅನುಭವಗಳನ್ನು ಯಾರು ಅಪಹರಿಸಲಾರರು ಎಂಬ ಕಟು ಸತ್ಯ ವಚನಕಾರ ಸಿದ್ದರಾಮರದು. ಶಿಕ್ಷಣವು ಕಲಿಕೆಯನ್ನು ವೃದ್ಧಿಸುತ್ತದೆ. ತ್ಯಾಗ, ಪ್ರೀತಿ, ಸಹನೆ, ಸಹಬಾಳ್ವೆ, ಸಹಕಾರ, ನೀತಿ, ನ್ಯಾಯ ಇವೆ ಮುಂತಾದ ಜೀವನ ಮೌಲ್ಯಗಳನ್ನು ಬೆಳೆಸುತ್ತದೆ. ಅಂದ ಮಾತ್ರಕ್ಕೆ ಶಿಕ್ಷಣ ಕಲಿಯದವರು ಅನನುಭವಿಗಳು ಎನ್ನಲು ಸಾಧ್ಯವಿಲ್ಲ. ಪುಸ್ತಕ ವಿದ್ಯೆಯೇ ವಿದ್ಯೆ ಎಂಬುದನ್ನು ಸಿದ್ದರಾಮರು ಒಪ್ಪುವುದಿಲ್ಲ. ಅವಿದ್ಯಾವಂತರು ಎಂದ ಮಾತ್ರಕ್ಕೆ ಅವರಲ್ಲಿ ಮೌಲ್ಯಗಳಿಲ್ಲ ಎಂದು ಹೇಳಲಾಗುವುದಿಲ್ಲ. ಶರಣರೆಂದರೆ ತಾನು ವಚಿಸಿದ ನುಡಿಗಳನ್ನು ತನ್ನ ಅನುಭವದಲ್ಲಿ ಅಳವಡಿಸಿಕೊಳ್ಳುವವನೇ ನಿಜವಾದ ಶರಣಾಗುತ್ತಾನೆ. ಆದರೆ ಓದಿಯು ಈ ರೀತಿಯ ಅನುಭವ ಪಡೆಯದಿರುವುದು ನಿಷ್ಪಯೋಜಕ. ಪುಸ್ತಕ ಪಾಂಡಿತ್ಯ ಪ್ರದರ್ಶನದ ಪರಂಪರೆಯನ್ನು ಸಿದ್ದರಾಮರು ಒಪ್ಪುವುದಿಲ್ಲ. ಪುಸ್ತಕ ಓದುವ ವಿದ್ಯೆಯೇ ವಿದ್ಯೆ ಎಂಬುದನ್ನು ಇವನು ಒಪ್ಪದೇ 'ವಚಿಸಿ ವಚಿಸಿ ಅನುಭವಿಯಾಗದವ ಪಿಶಾಚಿಯಯ್ಯ' ಎನ್ನುತ್ತಾನೆ. ಜೀವನಾನುಭವೆಂಬ ವಿದ್ಯೆಯು ಸರ್ವರ ವಶವಾಗಿರುತ್ತದೆ.

ವಚಿಸುವುದರಿಂದ ವ್ಯಕ್ತಿತ್ವ ಗಟ್ಟಿಗೊಳ್ಳುತ್ತದೆ. ವಿದ್ಯೆ ಕಲಿಯಲು ಅವರಿವರೆಂಬ ಭೇದವಿಲ್ಲ. ಅನುಭವಿಯಾದವ ತಾನು ಕಲಿತ ವಿದ್ಯೆಯನ್ನು ತನ್ನ ಬದುಕಿನಲ್ಲಿ ಅಳವಡಿಸಿಕೊಳ್ಳದೆ ಹೋದಲ್ಲಿ ಯಾರಿಗೂ ಬೇಡದ ಪಿಶಾಚಿಯಂತಾಗುತ್ತಾನೆ. ವಚಿಸಿ ಅನುಭವ ಪಡೆದವರು ತಾವಾಡಿದ ನುಡಿಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡರೆ ಅಂಥವರ ಮಾತಿಗೆ ಜಗತ್ತಿನಲ್ಲಿ ಬಹು ಮಾನ್ಯತೆ ದೊರಕುತ್ತದೆ. ನುಡಿದಂತೆ ನಡೆದ ಅಮೂಲ್ಯವಾದ ವಿದ್ಯೆಯುಳ್ಳ ವ್ಯಕ್ತಿತ್ವ ಎಲ್ಲರಿಂದಲೂ ಗೌರವಿಸಲ್ಪಡುತ್ತಾನೆ. ವಿದ್ಯೆಯೆಂಬುದು ಸಾಧಕರ ಸ್ವತ್ತು. ವಿದ್ಯೆ ಕಲಿಯಲು ಏಕಾಗ್ರತೆ ಬೇಕು, ಛಲವಿರಬೇಕು. ವಿದ್ಯೆಯು ನರಿತೊಡೆ ಲೋಕ ಜ್ಞಾನಿಯಾಗುತ್ತಾನೆ ಮಹಾ ಪಂಡಿತನಾಗುತ್ತಾನೆ. ವಿದ್ಯೆಯನ್ನು ಕೈವಶ ಮಾಡಿಕೊಂಡವನು ಲೋಕ ಚಿಂತಕನಾಗುತ್ತಾನೆ ವಿಶ್ವ ಪ್ರೇಮಿಯಾಗುತ್ತಾನೆ.

ಚರಿತ್ರೆಗಳನೋದುವುದೆ ವಾಕ್ಸಿದ್ದಿ
ಭಾವವಳಿದು ಭಾಷಣೆಯ ಮಾಡುವುದೇ ವಾಕ್ಸಿದ್ದಿ
ನಮ್ಮ ಕಪಿಲಸಿದ್ಧ ಮಲ್ಲಿಕಾರ್ಜುನನ ಪಾದೋದಕ ಪ್ರಸಾದವ
ಸ್ವೀಕರಿಸುವುದೇ ವಾಕ್ಸಿದ್ದಿ ಕಂಡಯ್ಯ
ಅಣ್ಣ ಮಡಿವಾಳ ಮಾಚಯ್ಯ

ಚರಿತ್ರೆಗಳನ್ನು ಓದುವುದರಿಂದ, ಭಾವಗಳ ಸಂವಹನ ಕ್ರಿಯೆಯಿಂದ ವಾಕ್ಸಿದ್ದಿಯನ್ನು ಗಳಿಸಬಹುದು. ಆದರೆ ತಮ್ಮ ನಡೆ ನುಡಿಯನ್ನೆ ಹೆಗ್ಗಳಿಕೆ ಎಂದು ಲೋಕ ಪ್ರದರ್ಶನ ಮಾಡಬಾರದು. ಗುರು ಲಿಂಗ ಜಂಗಮ ವಿಭೂತಿ ರುದ್ರಾಕ್ಷಿ ಮಂತ್ರ ಪ್ರಸಾದ ಪಾದೋದಕಗಳೇ ಶರಣ

ಸಂಸ್ಕೃತಿಯಲ್ಲಿ ಬರುವ ಅಷ್ಟಾವರಣಗಳು. ಈ ಅಷ್ಟಾವರಣಗಳಲ್ಲಿ ಪ್ರಸಾದ ಪಾದೋದಕ ಸ್ವೀಕಾರವೇ ಶ್ರೇಷ್ಠ ವಾಕ್ ಸಿದ್ಧಿಯಾಗುತ್ತದೆ. ಇವು ನಮ್ಮ ಅಂತರಂಗಕ್ಕೆ ಸಂಬಂಧ ಪಟ್ಟವು. ಅಂತರಂಗ ಶುದ್ದಿಗೆ ಇವು ಪ್ರೇರಕವಾದವು.

ಓದಿದ ಫಲ ಕೂಚು ಭಟ್ಟನಂತಾಗಬಾರದು
ಓದಿದ ಫಲ ಪರಾಶರ ನಂತಾಗಬಾರದು
ಓದಿದ ಫಲ ಮಯೂರ ನಂತಾಗಬಾರದು
ಓದಿದ ಫಲ ನಮ್ಮ ಹಾವಿನ ಹಾಳ ಕಲ್ಲಯ್ಯನ ಮನೆಯ ಶ್ವಾನದಂತಾಗಬೇಕು ಕಾಣಾ ಕಪಿಲಸಿದ್ಧಮಲ್ಲಿಕಾರ್ಜುನ

ಓದು ಎಂಬುದು ಪರಾಶರ ಮುನಿಯಂತಾಗ ಬಾರದು. ಪರಾಶರ ಮುನಿ ಶಕ್ತಿ ಮಹರ್ಷಿಗಳ ಮಗ. ವಸಿಷ್ಠರ ಮೊಮ್ಮಗ. ಇವನು ತಾಯಿಯ ಗರ್ಭದಲ್ಲಿರುವಾಗಲೇ ಇವನ ತಂದೆ ಕಲ್ಯಾಶಪಾದ ಎಂಬ ರಾಕ್ಷಸನಿಂದ ಹತನಾಗುತ್ತಾನೆ. ಈ ಸುದ್ದಿಯನ್ನು ತನ್ನ ತಾಯಿಯಿಂದ ತಿಳಿದು ಇಡೀ ರಾಕ್ಷಸ ಕುಲವನ್ನೇ ನಿರ್ಮೂಲನೆ ಮಾಡುತ್ತೇನೆ ಎಂದು ಶಪಥ ಮಾಡಿದ. ಮೂರು ರೀತಿಯ ರಾಕ್ಷಸ ಅಗ್ನಿಯನ್ನು ಸೃಷ್ಟಿಸಿ ಅದರ ನಡುವೆ ಕುಳಿತು ರಾಕ್ಷಸರನ್ನು ಕೊಲ್ಲುತ್ತಿರುತ್ತಾನೆ. ಇದು ಅವನ ತಾತ ವಸಿಷ್ಠರಿಗೆ ತಿಳಿದು ಅವನಿಗೆ ಬುದ್ಧಿವಾದ ಹೇಳುತ್ತಾರೆ. ಈ ವಿಚಾರ ಪುಲಸ್ತ್ಯ ಮುಂತಾದ ಋಷಿಗಳಿಗೆ ತಿಳಿದು ಅವರು ಸಮಾಧಾನಿಸುತ್ತಾರೆ. 'ನಿನ್ನ ತಂದೆ ತನ್ನ ಶಾಪದಿಂದಲೇ ಕಲ್ಯಾಶಪಾದ ಎಂಬ ರಾಕ್ಷಸನಿಂದ ಹತನಾಗಿರುವಾಗ ಇಡೀ ಲೋಕವನ್ನೇ ವಿನಾಶ ಮಾಡುವ ಈ ಅಗ್ನಿ ಯಾಗ ನಿಷ್ಪ್ರಯೋಜಕವಾದದ್ದು. ಇದು ನಿನ್ನ ಪಾಪ ಕಾರ್ಯವಾಗುತ್ತದೆ' ಎಂದು ಸಮಾಧಾನಿಸುತ್ತಾರೆ. ಸಮಾಧಾನಗೊಂಡ ಪರಾಶರರು ರಾಕ್ಷಸ ಯಾಗವನ್ನು ನಿಲ್ಲಿಸಿದರು. ತಾವು ಸೃಷ್ಟಿಸಿದ ಅಗ್ನಿಯನ್ನು ಹಿಮವತ್ ಪರ್ವತದಲ್ಲಿ ವಿಸರ್ಜಿಸಿದರು. ಅದೇ ಇಂದು ಕಾಳ್ಗಿಚ್ಚಿನ ರೂಪದಲ್ಲಿ ಆಗಾಗ ಕಾಣಿಸಿಕೊಳ್ಳುತ್ತದೆ ಎಂದು ಹೇಳುತ್ತಾರೆ. ಹಾವಿನ ಹಾಳ ಕಲ್ಲಯ್ಯ ಸಿದ್ದರಾಮರ ಆಪ್ತಮಿತ್ರ. 12ನೇ ಶತಮಾನದ ಶರಣ. ಅಕ್ಕಸಾಲಿಗ ವೃತ್ತಿಯಲ್ಲಿದ್ದು ಅನುಭವ ಮಂಟಪದ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದ ಶ್ರೇಷ್ಠ ಶರಣ.

ಓದುವುದು ಸದ್ಗುಣಕ್ಕಲ್ಲದೆ ಕಿವಿಯನೂದುವುದಕ್ಕೇನೋ ಅಯ್ಯಾ
ಮಾಡುವ ಭಕ್ತಿ ಮೋಕ್ಷ ಕ್ಕಲ್ಲದೆ ಡಂಬಾಚಾರಕ್ಕೆನೋ ಅಯ್ಯಾ
ಆಡುವ ವೇಷ ದ್ರವ್ಯಕಲ್ಲದೆ ಜನರಾ ಡಂಬರಕ್ಕೆನೋ ಅಯ್ಯಾ
ಎಲೆ ಕಪಿಲಸಿದ್ಧಮಲ್ಲಿಕಾರ್ಜುನ

ಓದು ಎಂಬುದು ಕೇವಲ ಬೋಧನೆಗೆ ಮಾತ್ರ ಸೀಮಿತವಲ್ಲ. ಬದುಕನ್ನು ಬೆಳಗುವ ಸದ್ಗುಣಗಳನ್ನು ಅರಿತು ಬಾಳುವುದು. ಭಕ್ತಿ, ಭಕ್ತನ ವೇಷಭೂಷಣವಾಗಲಿ ಆಡುವ ಮಾತುಗಳಾಗಲಿ ಲೋಕದ ತೋರಿಕೆಗಾಗಿ ಆಡಂಬರಕ್ಕಾಗಿ ಇರಬಾರದು ಎನ್ನುತ್ತಾರೆ ಸಿದ್ದರಾಮರು. ಓದು ಎಂಬುದು ಕೂಚು ಭಟ್ಟನಂತಾಗಬಾರದು. ಸದ್ಗುಣ ಕಲಿಕೆಗೆ ಓದು ಪೂರಕವಾಗಿರಬೇಕು.

ಸಿದ್ದರಾಮೇಶ್ವರರದ್ದು ಕವಿಹೃದಯ. ಭಾವನೆಗಳನ್ನು ಮನಮುಟ್ಟುವಂತೆ ಹೇಳುವುದೇ ಅವರ ವಚನಗಳ ಪ್ರಮುಖ ಶೈಲಿ. ಕಿರಿದಾದ ವಾಕ್ಯಗಳಲ್ಲಿ ಹಿರಿದಾದ ಅರ್ಥವನ್ನು ನೀಡುತ್ತಾರೆ. ಪದಬಂಧಗಳು ಉಪಮಾನಗಳು, ಅಲಂಕಾರಗಳು ಪರಿಣಾಮಕಾರಿಯಾಗಿ ಬಂದಿವೆ. ಪುಸ್ತಕ ಪಾಂಡಿತ್ಯದ ಶೈಕ್ಷಣಿಕ ಚಿಂತನೆಯು ಇದೆ. ಭಾಷೆಯ ಬಳಕೆಯಲ್ಲೂ ಈತನ ಮನ ಜಾಗೃತವಾಗಿ ನಿರೂಪಿಸಿದೆ. ಅರ್ಥಪೂರ್ಣ ಮಾತುಗಳನ್ನು ಸಂದರ್ಭೋಚಿತವಾಗಿ ಬಳಸಿದ್ದಾರೆ. ವ್ಯಾಸನ ಪುರಾಣ, ಗಾಯತ್ರಿ ಮಂತ್ರದ ಲಕ್ಷ ಜಪ ಇವೆಲ್ಲವೂ ವಚನಕ್ಕೆ ಸಮಬಾರದು ಎಂಬ ಪ್ರೀತಿ ತೋರಿದ್ದಾರೆ. ವಚನಕಾರ ಸಿದ್ದರಾಮರು ಪುರಾಣ ಮಹಾಕಾವ್ಯ ಇತಿಹಾಸಗಳನ್ನು ವೇದ ಶಾಸ್ತ್ರಗಳನ್ನು ಚೆನ್ನಾಗಿ ಅಧ್ಯಯನ ಮಾಡಿದ್ದರು ಎಂಬುದಕ್ಕೆ ಈ ವಚನಗಳಿಂದ ಪುರಾವೆ ಸಿಗುತ್ತದೆ.

ವಚನಾನುಭವ ವಾಗ್ರಚನೆಯಲ್ಲ ವಚನಾನುಭವ ವಾಗ್ರಚನೆಯಲ್ಲ
ವಚನಾನುಭವ 'ವಚೋನ" ಎಂಬುದು ಶ್ರುತಿ ಸ್ಥಿತಿ ನೋಡ ಕಪಿಲಸಿದ್ಧಮಲ್ಲಿಕಾರ್ಜುನ...

'ವಚನಾನುಭವ ವಚೋನ' ಎಂಬ ಮಾತು ಅರ್ಥಪೂರ್ಣವಾದದ್ದು. ವಚನಗಳು ಕೇವಲ ಮಾತಿನ ಚಟವುಳ್ಳವಲ್ಲ. ಅಂತರಂಗದ ಅನುಭವದ ಅಭಿವ್ಯಕ್ತಿಯೇ ವಚನ. ಅನುಭವ ಅನುಭಾವವಾದುದನ್ನು ನಾಲಿಗೆಯ ಮೂಲಕ ವಿವರಿಸುವುದು ಕಷ್ಟ. ಇದೊಂದು ಇಂದ್ರಿಯಾತೀತವಾದ ಗಮ್ಯ ಸ್ಥಿತಿ. ಸೃಷ್ಟಿಕರ್ತನನ್ನು ಇಂದ್ರಿಯಗಳ ಮೂಲಕ ಗ್ರಹಿಸಲಾಗದು. ವಚನಗಳು ನಾಲಗೆಯ ಚಪಲವಲ್ಲ ಎನ್ನುತ್ತಾನೆ.

12ನೇ ಶತಮಾನದ ಮತ್ತೊಬ್ಬ ವಚನಕಾರ ಆದಯ್ಯ ಸೌರಾಷ್ಟ್ರ ಸೋಮೇಶ್ವರ ಎಂಬ ಅಂಕಿತದ ಒಂದು ವಚನದಲ್ಲಿ ವಚನ ಶ್ರೇಷ್ಠತೆಯನ್ನು ಹೀಗೆ ಹೇಳಿದ್ದಾರೆ.

ನೊಳಂಬವಾಣಿ

ಹಿಂದಣ ಕಥೆಯ ಮುಂದೆ ಹೇಳುವ ಕಾವ್ಯವಲ್ಲ
ಮುಂದಣ ಕಥೆಯನಿಂದು ಹೇಳುವ ನಾಟಕವಲ್ಲ
ಬಂದ ಶಬ್ದವ ಸಂದಿಲ್ಲದು ಸುರುವುನೆಂಬ ಅಭ್ಯಾಸಿಯಲ್ಲ
ಛಂದ ವಿಚ್ಛಂದವೆಂಬ ಸಂದೇಹಿಯಲ್ಲ
ಸೌರಾಷ್ಟ್ರ ಸೋಮೇಶ್ವರ ನಿಮ್ಮ ಶರಣರ
ಸ್ವಯಾನುಭಾವದ ಪರಿ ಬೇರೆ

ವಚನಕಾರರು ತಮ್ಮ ಬದುಕಿನ ಅನುಭವಗಳನ್ನು ಅನುಭಾವಿಕ ನೆಲೆಯಲ್ಲಿ ನಿಂತು ಅದರ ಮೌಲ್ಯಗಳನ್ನು ಪುಷ್ಟೀಕರಿಸಿದ್ದಾರೆ. ವಚನಗಳು ಲೋಕೋಕ್ತಿಗಳು ವಚನಗಳು ಕಲ್ಪನೆಯ ಕಥೆಯಲ್ಲ, ಪ್ರದರ್ಶನದ ನಾಟಕವಲ್ಲ, ಬಂದ ಶಬ್ದವನ್ನು ತಕ್ಷಣವೇ ಉಸಿರುವೆನೆಂಬ ಅಭ್ಯಾಸವಿಲ್ಲದ್ದು. ಛಂದಸ್ಸು ವಿಚ್ಛಂದಸು ಎಂಬ ಸಂದೇಹವಿಲ್ಲದ್ದು. ವಚನಗಳೆಲ್ಲವೂ ಶರಣರ ಸ್ವ ಅನುಭವದ ನುಡಿಗಳಾಗಿ ಅವುಗಳ ಮೌಲ್ಯವೇ ಬೇರೆ ತರನಾದದು ಎನ್ನುತ್ತಾನೆ ಆದಯ್ಯ.

ವಚನಕಾರ ಸಿದ್ದರಾಮರ ಮತ್ತೊಂದು ವಚನವು ಕಾವ್ಯ ದ ಗುಣಗಳನ್ನು ತಿಳಿಸುವಂಥದ್ದು.

ವ್ಯಾಕರಣವ ಓದಿದಲ್ಲಿ ಶಬ್ದ ಶುದ್ಧಿಯಲ್ಲದೆ
ಮನ ಶುದ್ಧವಾಗಿ ಜ್ಞಾನ ಶುದ್ಧಿಯಾಗದು
ಛಂದಸ್ಸನ್ನು ಸಾಧಿಸಿದಲ್ಲಿ ಕವಿತಾ ಶುದ್ಧಿಯಲ್ಲದೆ
ಕವಿತೆಯ ಸಾಧಿಸಿ ವ್ಯಾಸನಂತೆ ಚಿರಂಜೀವಿಯಾಗನು
ಅಷ್ಟಾದಶ ಪುರಾಣವ ಸಾಧಿಸಿದಲ್ಲಿ ವಾಕ್ಶುದ್ಧಿ ಅಲ್ಲದೆ
ಕಪಿಲಸಿದ್ಧ ಮಲ್ಲಿಕಾರ್ಜುನ ಮಹದೇವ ದೇಹ ಸ್ವಭಾವ
ಶುದ್ಧಿಯಾಗದು ನೋಡ ಮಡಿವಾಳ ಮಾಚಯ್ಯ

ಮಹಾಮನೆಯಲ್ಲಿ ನಡೆಯುತ್ತಿದ್ದ ಪರಸ್ಪರರ ಭಾವಗಳೇ ಅಪರೂಪವಾದವು. ಸಿದ್ದರಾಮರು ಮಡಿವಾಳ ಮಾಚಯ್ಯನೊಂದಿಗೆ ವ್ಯಾಕರಣ ಶುದ್ಧಿಯ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದಾರೆ. ಕಾವ್ಯ ಬಹಿರಂಗದ ವಿಷಯವಾದರೂ ಅಂತರಂಗದ ಕ್ರಿಯೆ. ಅಲೌಕಿಕತೆ ಇಲ್ಲಿಯ ಗುಣಾತ್ಮಕ ವಿಚಾರ. ಕಾವ್ಯದಲ್ಲಿ ವ್ಯಾಕರಣಾದಿ ಛಂದಸ್ಸು ಇವೆಲ್ಲವನ್ನು ಮೀರಿದ ಭಾವಪೂರ್ಣ ಸಂವೇದನೆಗಳಿರುತ್ತವೆ. ಕಾವ್ಯ ರಚನೆಗೆ ಪುರುಷತ್ವ ಸ್ತ್ರೀತ್ವ ಎಂಬುದು ತಾರತಮ್ಯ ಇಲ್ಲ. ಕಾವ್ಯ ಸುಂದರಿ ನಿರಾಭರಣಗಳು. ಹೌದು ಕಾವ್ಯಕ್ಕೆ ಭಾಷಾ ಶಾಸ್ತ್ರದ ಹಂಗಿಲ್ಲ ಅಲಂಕಾರದ ಒತ್ತಾಸೆಯೂ ಇಲ್ಲ. ಛಂದಸ್ಸು ವ್ಯಾಕರಣ ಅಲಂಕಾರಗಳನ್ನು ಮೀರಿದ ಧ್ವನಿ ಇರುತ್ತದೆ. ಕಾವ್ಯ ಪ್ರಕಾರದಲ್ಲಿ ಧ್ವನಿಯೇ ಸರ್ವಜೀವಾಳ. ಅಂತರಂಗದಲ್ಲಿಯ ಅನುಭವಗಳು ಅನುಭಾವಗಳಾಗಿ ಶುದ್ಧ ಸತ್ಯದ ಆಂತರಿಕ ಹೊಳಹುಗಳು ಇರುತ್ತವೆ. ವ್ಯಾಕರಣವೆಂಬುದು ಶಬ್ದ ಶುದ್ಧಿಗಷ್ಟೇ ಸೀಮಿತವಾದದ್ದು. ಕಾವ್ಯದ ಪ್ರಮುಖ ಗುಣವಾದ ಛಂದಸ್ಸು ಕವಿತೆಯ ಮೌಲ್ಯವನ್ನು ಮಾತ್ರ ಹೆಚ್ಚಿಸುವಂಥದ್ದು. ಮಹಾಕಾವ್ಯಗಳಲ್ಲಿ ಬರುವ ಅಷ್ಟಾದಶ ವರ್ಣನೆಯಿಂದ ಕೂಡಿದ ಕಾವ್ಯಸಾಧನೆ ಕೇವಲ ವಾಕ್ ಶುದ್ಧಿಗಷ್ಟೇ. ಗಣ, ಯತಿ ಅಲಂಕಾರ, ರಾಗಬದ್ಧತೆಗಷ್ಟೇ ಕವಿತೆಯ ಸಿದ್ಧಿ. ಇವುಗಳ ಸಾಧನೆ ಕವಿತೆಯ ಸಿದ್ಧಿ ಸಾಧಿಸಿದ ವ್ಯಾಸಸಿದ್ಧಿಯಷ್ಟೇ. ಇಲ್ಲಿ ಸೂಚ್ಯಾರ್ಥವೇ ಪ್ರಮುಖ. ಆದರೆ ಸಿದ್ದರಾಮರು ಅವರು ಹೇಳುವಂತೆ ಇವುಗಳಿಂದ ದೇಹ ಮನಸ್ಸುಗಳ ಅಂದರೆ ಸ್ವಭಾವಗಳ ಶುದ್ಧಿಯಾಗದು.

ಸಿದ್ಧಾಂತಿಯ ಜ್ಞಾನ ಸಾಧನೆಯಲ್ಲಿ ಹೋಯಿತ್ತು
ವೇದಾಂತಿಯ ಜ್ಞಾನ ವಾದದಲ್ಲಿ ಹೋಯಿತು
ಕ್ರಿಯಾವಂತನ ಜ್ಞಾನ ನುಡಿಯಲ್ಲಿ ಹೋಯಿತು
ವ್ಯವಹಾರಿಕ ಜ್ಞಾನ ದ್ರವ್ಯಾರ್ಜನೆಯಲ್ಲಿ ಹೋಗಿತ್ತು
ಇವೆಲ್ಲ ಭವದ ಕಾರಣವಲ್ಲದೆ
ಭವರಹಿತ ಜ್ಞಾನವು ಸಾಧ್ಯವಾಗುವುದು ದುರ್ಲಭವಯ್ಯ
ಕಪಿಲಸಿದ್ಧಮಲ್ಲಿಕಾರ್ಜುನ

ವಚನ ಸಾಹಿತ್ಯದ ಪೂರ್ವದಲ್ಲಿದ್ದ ಸಿದ್ಧಾಂತ ವೇದಾಂತಗಳು ಜ್ಞಾನ ಸಂಪಾದನೆಗೆ ಮೂಲವಾಗಿರುವವು. ಇವು ಕೇವಲ ಲೌಕಿಕ ಜ್ಞಾನಕ್ಕೆ ಮೀಸಲಾದವು. ಅರಮನೆ ಗುರುಮನೆಗಳಿಗೆ ಮಾತ್ರ ಸಂಬಂಧಪಟ್ಟವು. ಇವೆಲ್ಲಾ ಪ್ರಖರ ಪಂಡಿತರ ಸಂಸ್ಕೃತ ಬಲ್ಲವರ ಸ್ವತ್ತು. ಇವುಗಳಿಂದ ಭವ ರಹಿತ ಬದುಕನ್ನು ಸಾಧಿಸಲು ಸಾಧ್ಯವಾಗದು ಎನ್ನುತ್ತಾನೆ.

ಶಾಸ್ತ್ರವೆಂಬುದು ಮನ್ಮಥ ಶಾಸ್ತ್ರವಯ್ಯ
ವೇದಾಂತವೆಂಬುದು ಮೂಲ ಮನೋವ್ಯಾಧಿಯಯ್ಯಾ
ಪುರಾಣವೆಂಬುದು ಮೃತವಾದವರ ಗಿರಾಣವಯ್ಯ
ತರ್ಕವೆಂಬುದು ಮರ್ಕಟಾಟವಯ್ಯ
ಆಗಮವೆಂಬುದು ಯೋಗದ ಘೋರವಯ್ಯ
ಇತಿಹಾಸವೆಂಬುದು ರಾಜರ ಕಥಾ ಭಾಗವಯ್ಯ
ಸ್ಮೃತಿ ಎಂಬುದು ಪಾಪ ಪುಣ್ಯ ವಿಚಾರವಯ್ಯ
ಆದ್ಯರ ವಚನವೆಂಬುದು ಬಹು ವೇದ್ಯವಯ್ಯ
ನಮ್ಮ ಕಪಿಲಸಿದ್ಧಮಲ್ಲಿಕಾರ್ಜುನ.

ಶಾಸ್ತ್ರ ವೇದಾಂತ ಪುರಾಣ ತರ್ಕ ಇತಿಹಾಸ ಸ್ಮೃತಿ ಇವೆಲ್ಲವೂ ಕೇವಲ ಪಂಡಿತರ ಸ್ವತ್ತು ಸಂಸ್ಕೃತ ಬಲ್ಲವರ ಆಸ್ತಿ ಆದರೆ ಇವು ಜನಸಾಮಾನ್ಯರ ಮನ ಮುಟ್ಟುವುದು

ಅಂದಿನ ದಿನಗಳಲ್ಲಿ ಅಸಾಧ್ಯದ ಮಾತಾಗಿತ್ತು. ಶೂದ್ರರು ಮತ್ತು ಕೆಳವರ್ಗದವರಿಗೆ ವೇದ ಶಾಸ್ತ್ರ ಅಧ್ಯಯನಕ್ಕೆ ಅವಕಾಶ ಇರಲಿಲ್ಲ. ಇವೆಲ್ಲ ಕೇವಲ ಒಂದು ವರ್ಗಕ್ಕೆ ಮಾತ್ರ ಸೀಮಿತವಾಗಿದ್ದವು. ಅಂದಿನ ದಿನಗಳಲ್ಲಿ ಸರ್ವರ ಬದುಕಿನ ಒಳಿತಿಗೆ ವ್ಯಕ್ತಿತ್ವ ವಿಕಾಸಕ್ಕೆ ಇವು ನಿಲುಕುವಂತಿರಲಿಲ್ಲ. ಆದರೆ ಸಾಮಾನ್ಯ ಜನರಿಂದಲೇ ಜನರಿಗಾಗಿ ಜನರಿಗೋಸ್ಕರ ರಚಿತವಾದ ವಚನಗಳು ಆಡು ಭಾಷೆಯಿಂದ ಕೂಡಿದ್ದು ಯಾರು ಬೇಕಾದರೂ ಓದಿ ಅರ್ಥಕ್ಕೆ ನಿಲುಕುವ ಗುಣವನ್ನು ಹೊಂದಿವೆ. ಇಲ್ಲೂ ಕೂಡ ಸಿದ್ದರಾಮಯ್ಯನವರ ವಚನ ಪ್ರೀತಿ ಎದ್ದು ಕಾಣುತ್ತದೆ.

ರೇಖೆ ರೇಖೆ ಕೂಡಿದಲ್ಲಿ ಅಕ್ಷರಗಳಾದವು
ಅಕ್ಷರ ಅಕ್ಷರ ಕೂಡಿದಲ್ಲಿ ಶಬ್ದವಾಯಿತು
ಶಬ್ದ ಶಬ್ದ ಕೂಡಿದಲ್ಲಿ ಗ್ರಂಥಾನ್ವಯವಾಗಿತ್ತು
ಅಕ್ಷರದಲ್ಲಿಲ್ಲ ಶಬ್ದದಲ್ಲಿಲ್ಲ ಗ್ರಂಥಾನ್ವಯದಲ್ಲಿಲ್ಲ
ಏನೆಂಬುದಿಲ್ಲ ಮೊದಲೇ ಇಲ್ಲ
ಇಲ್ಲೆಂಬುವ ಅಹುದೆಂಬುವ ಉಭಯ ಶಬ್ದಕ್ಕೆ ಲೋಪವಿಲ್ಲ
ನೋಡಾ ಕಪಿಲಸಿದ್ಧಮಲ್ಲಿಕಾರ್ಜುನ ಮಹಾಮಹಿಮನು

ಅಕ್ಷರಗಳಿಗೆ ಮೂಲ ಗೆರೆಯೇ. ಇಂತಹ ಅಕ್ಷರಗಳಿಂದ ರೂಪಗೊಳ್ಳುವುದೇ ಶಬ್ದ. ಶಬ್ದ ಶಬ್ದ ಕೂಡುವುದೇ ವಾಕ್ಯ ಎಂದು ಹೇಳಿದ ಸಿದ್ದರಾಮರು ನಾಲ್ಕನೆ ಸಾಲಿನಲ್ಲಿ ಮಾತ್ರ ಅಕ್ಷರಗಳು ಇಲ್ಲ, ಶಬ್ದಗಳು ಇಲ್ಲ, ವಾಕ್ಯಗಳು ಇಲ್ಲ ಎನ್ನುತ್ತಾರೆ. ಇಲ್ಲ ಎಂಬುದು ನಿಷೇಧ ರೂಪ. ಇದಕ್ಕೆ ಪೂರಕವಾಗಿ ನಿಷೇಧ ರೂಪದಲ್ಲೆ ಏನೆಂಬುದು ಇಲ್ಲ ಮೊದಲೆಂಬುದು ಇಲ್ಲ ಎಂದು ಐದನೇ ಸಾಲಿನಲ್ಲಿ ತಿಳಿಸುತ್ತಾರೆ. ಆದರೆ ಇಲ್ಲ ಮತ್ತು ಅಹುದು ಎಂಬ ಸಕಾರಾತ್ಮಕ ಚಿಂತನೆ ಮುಂದಿನ ಸಾಲಿನಲ್ಲಿ ಬಂದಿದೆ. ಇವೆಲ್ಲವುಗಳು ಆ ಭಗವಂತ ಕಪಿಲಸಿದ್ಧಮಲ್ಲಿಕಾರ್ಜುನನೇ ಆಗಿದ್ದಾನೆ. ಇಲ್ಲೆಂಬುದಾಗಲಿ ಅಹುದು ಎಂಬುವುದಾಗಲಿ ಈ ಎರಡು ಅರ್ಥಗಳಿಗೂ ಲೋಪವಿಲ್ಲವೆಂಬ ತನ್ನ ಚಿಂತನೆಯನ್ನು ಇಲ್ಲಿ ರೂಪಿಸಿದ್ದಾನೆ. ಭಾಷೆಯ ಶಕ್ತಿ ಮತ್ತು ದೌರ್ಬಲ್ಯ ಎರಡನ್ನು ಧ್ವನಿ ಪೂರ್ಣವಾಗಿ ಚಿತ್ರಿಸಿದ್ದಾನೆ. ಭಾಷೆಯ ಪರಿಮಿತಿಯೆಂಬುದು ಸಿದ್ಧರಾಮರಿಗೆ ವಚನ ರಚನೆ ಕ್ರಿಯೆಯಲ್ಲಿ ಪ್ರಜ್ಞಾಪೂರ್ಣವಾಗಿ ಬಂದಿದೆ.

ವಚನಕಾರ ಸಿದ್ದರಾಮರು ಸೊನ್ನಲಿಗೆಯ ಅಭಿವೃದ್ಧಿಗೆ ತಮ್ಮನ್ನು ತಾವು ತೊಡಗಿಸಿಕೊಂಡಂತೆ ಶೈಕ್ಷಣಿಕವಾಗಿಯೂ ತಮ್ಮ ಆಲೋಚನೆಗಳನ್ನು ವಚನಗಳಲ್ಲಿ ಹರಿಯ ಬಿಟ್ಟಿದ್ದಾರೆ ಶಿಕ್ಷಣ ಕೂಡ ಮನುಷ್ಯ ಪ್ರಗತಿಗೆ ಮೂಲ. ಶಿಕ್ಷಣವಿದ್ದರೆ ಮೌಡ್ಯಾಚರಣೆಗಳು ಕಡಿಮೆ. ಶಿಕ್ಷಣವೆಂಬುದು ಒಂದು ಸಾಮಾಜಿಕ ಚಿಂತನೆಯಾಗಿ 12ನೇ ಶತಮಾನದಲ್ಲಿ ಹೊರಹೊಮ್ಮಿದೆ.

ಗಂಡ ಹೆಂಡತಿ : ಬದುಕಿನ ಕೊನೆಯ ಸಂಗಾತಿಗಳು ??

ದಾಂಪತ್ಯ ಎಂದರೆ ಫೋಟೋಗಳಲ್ಲಿ ನಗುವ ಎರಡು ಮುಖಗಳ ಕಥೆಯಲ್ಲ. ಅದು ಒಂದೇ ಮನೆಯೊಳಗೆ ಸಾವಿರ ಬಾರಿ ಮುರಿದುಕೊಂಡರೂ, ಹೊರಗಿನವರಿಗೆ ಗೊತ್ತಾಗದಂತೆ ಮತ್ತೆ ಮತ್ತೆ ಜೋಡಿಸಿಕೊಳ್ಳುವ ಎರಡು ಜೀವಗಳ ಕಥೆ.

ಗಂಡ–ಹೆಂಡತಿಯ ನಡುವೆ ಪ್ರೀತಿ ಮಾತ್ರ ಇರುವುದಿಲ್ಲ. ಕೋಪ ಇರುತ್ತದೆ. ಅಹಂಕಾರ ಇರುತ್ತದೆ. ಬೇಸರ ಇರುತ್ತದೆ. ದಿನಗಟ್ಟಲೆ ಮಾತಾಡದ ಮೌನ ಇರುತ್ತದೆ. **"ಇವನು ಬದಲಾಗಲ್ಲ"** ಎನ್ನುವ ಹೆಂಡತಿಯ ನೋವು ಇರುತ್ತದೆ. **"ಇವಳು ನನ್ನನ್ನು ಅರ್ಥಮಾಡಿಕೊಳ್ಳಲ್ಲ"** ಎನ್ನುವ ಗಂಡನ ಒಳತಾಪ ಇರುತ್ತದೆ. ಆದರೂ ವಿಚಿತ್ರ ನೋಡಿ, ಅದೇ ಹೆಂಡತಿ ಗಂಡ ತಡವಾಗಿ ಮನೆಗೆ ಬಂದರೆ ಬಾಗಿಲು ತೆರೆದ ಶಬ್ದಕ್ಕೆ ಎಚ್ಚರವಾಗುತ್ತಾಳೆ. ಅದೇ ಗಂಡ ಹೆಂಡತಿ ಊಟ ಮಾಡಿಲ್ಲವೆಂದು ತಿಳಿದರೆ, ಕೋಪದಲ್ಲಿದ್ದರೂ ತಟ್ಟೆ ಮುಂದೆ ಇಡುತ್ತಾನೆ. ಇದನ್ನೇ ದಾಂಪತ್ಯ ಎನ್ನುತ್ತಾರೆ.

ಮಕ್ಕಳು ಚಿಕ್ಕವರಿದ್ದಾಗ ಮನೆ ತುಂಬಿರುತ್ತದೆ. ಅವರ ಓದು, ಮದುವೆ, ಕೆಲಸ, ಮಕ್ಕಳು ಎಲ್ಲದರಲ್ಲೂ ತಂದೆ–ತಾಯಿ ಕರಗಿಹೋಗುತ್ತಾರೆ. ಆದರೆ ಒಂದು ದಿನ ಮಕ್ಕಳು ತಮ್ಮ ತಮ್ಮ ಜೀವನದಲ್ಲಿ ಮುಂದಕ್ಕೆ ಹೋಗುತ್ತಾರೆ. ಮನೆ ನಿಧಾನವಾಗಿ ಖಾಲಿಯಾಗುತ್ತದೆ. ಆಗ ಉಳಿಯುವುದು ಇಬ್ಬರೇ. ಅದೇ ಗೊರಕೆ, ಒಮ್ಮೆ ಕಿರಿಕಿರಿ ಆಗಿದ್ದದ್ದು, ಒಂದು ದಿನ ಕೇಳಿಸದೆ ಹೋದರೆ ಕಣ್ಣೀರು ಬರುತ್ತದೆ. ಅದೇ **"ಬೇಡ ಅಷ್ಟು ಮಾತನಾಡಬೇಡ"** ಎಂದು ಗದರಿಸಿದ್ದ ಧ್ವನಿ, ಒಂದು ದಿನ ಶಾಶ್ವತವಾಗಿ ನಿಂತುಹೋದರೆ, ಮನೆಯ ಗೋಡೆಗಳೇ ಖಾಲಿ ಎನಿಸುತ್ತವೆ.

41ನೇ ಪುಟಕ್ಕೆ.....

ಸಿದ್ಧರಾಮೇಶ್ವರರ ವಚನಗಳಲ್ಲಿ ಲಿಂಗಾನುಭವ ಮತ್ತು ಸತ್ಸಂಗ

ಹನ್ನೆರಡನೆಯ ಶತಮಾನದ ಶರಣ ಚಳವಳಿಯು ಧರ್ಮವನ್ನು ಬಾಹ್ಯ ಆಚರಣೆಗಳ ಚೌಕಟ್ಟಿನಿಂದ ಹೊರತಂದು ಅನುಭವದ ನೆಲೆಯಲ್ಲಿ ಸ್ಥಾಪಿಸಿದ ಮಹತ್ವದ ಆಧ್ಯಾತ್ಮಿಕ ಚಳವಳಿಯಾಗಿದೆ. ಈ ಚಳವಳಿಯ ಪ್ರಮುಖ ವಚನಕಾರರಾದ ಸಿದ್ಧರಾಮೇಶ್ವರರು ತಮ್ಮ ವಚನಗಳಲ್ಲಿ ಲಿಂಗಾನುಭವ, ಸದಾಚಾರ, ಸತ್ಸಂಗ ಮತ್ತು ಆತ್ಮಶುದ್ಧಿಗೆ ವಿಶೇಷ ಮಹತ್ವ ನೀಡಿದ್ದಾರೆ. ಅವರ ದೃಷ್ಟಿಯಲ್ಲಿ ಇಷ್ಟಲಿಂಗವು ಕೇವಲ ಧರಿಸುವ ಒಂದು ಧಾರ್ಮಿಕ ಸಂಕೇತವಲ್ಲ. ಅದು ಜೀವ ಮತ್ತು ಶಿವನ ನಡುವಿನ ನೇರ ಅನುಭವದ ಸೇತುವೆಯಾಗಿದೆ. ಲಿಂಗಧಾರಣೆಯ ನಿಜವಾದ ಅರ್ಥವು ಬಾಹ್ಯವಾಗಿ ಲಿಂಗವನ್ನು ಧರಿಸುವುದರಲ್ಲಿ ಮಾತ್ರವಿಲ್ಲ. ಅಂತರಂಗದಲ್ಲಿ ಶಿವತತ್ವವನ್ನು ಅರಿತು, ಅದಕ್ಕೆ ಅನುಗುಣವಾದ ಜೀವನವನ್ನು ನಡೆಸುವುದರಲ್ಲಿ ಇದೆ. ಸಿದ್ಧರಾಮೇಶ್ವರರ ಚಿಂತನೆಯ ಪ್ರಕಾರ ಮುಕ್ತಿಯ ಮಾರ್ಗವು ಕೇವಲ ವೇದ, ಶಾಸ್ತ್ರ ಪುರಾಣ ಅಥವಾ ತಾತ್ವಿಕ ಚರ್ಚೆಗಳಿಂದ ದೊರೆಯುವುದಿಲ್ಲ. ಅವು ಜ್ಞಾನಕ್ಕೆ ಸಹಾಯಕವಾಗಬಹುದು. ಆದರೆ ಅವುಗಳ ಸಾರವು ಜೀವನದಲ್ಲಿ ಆಚರಣೆಯಾಗಿ ವ್ಯಕ್ತವಾಗಬೇಕು. ಸದಾಚಾರವಿಲ್ಲದ ಲಿಂಗಧಾರಣೆ, ಅನುಭವವಿಲ್ಲದ ಜ್ಞಾನ ಮತ್ತು ಸತ್ಸಂಗವಿಲ್ಲದ ಸಾಧನೆ ಆಧ್ಯಾತ್ಮಿಕ ಪ್ರಗತಿಗೆ ಕಾರಣವಾಗುವುದಿಲ್ಲ.

ಈ ಹಿನ್ನೆಲೆಯಲ್ಲಿ ಸಿದ್ಧರಾಮೇಶ್ವರರು ಲಿಂಗಾನುಭವವನ್ನು ವ್ಯಕ್ತಿಯ ಅಂತರಂಗದ ಪರಿವರ್ತನೆಯೊಂದಿಗೆ ಜೋಡಿಸುತ್ತಾರೆ. ಅವರ ದೃಷ್ಟಿಯಲ್ಲಿ ಶರಣರ ಸಂಗವು ಸಾಧಕನ ಮನಸ್ಸನ್ನು ಶುದ್ಧಗೊಳಿಸುವ ಮತ್ತು ಶಿವಾನುಭವದ ಕಡೆಗೆ ಕರೆದೊಯ್ಯುವ ಮಹತ್ವದ ಸಾಧನವಾಗಿದೆ. ಸತ್ಸಂಗದ ಮೂಲಕ ಸದಾಚಾರ, ವಿನಯ, ಭಕ್ತಿ ಮತ್ತು ಅನುಭವದ ಬೆಳವಣಿಗೆ ಸಾಧ್ಯವಾಗುತ್ತದೆ. ಈ ಕಾರಣದಿಂದಲೇ ಅವರು ಬಾಹ್ಯ ಜ್ಞಾನಕ್ಕಿಂತ ಅನುಭವ, ವಾದಕ್ಕಿಂತ ಆಚರಣೆ ಮತ್ತು ಪ್ರದರ್ಶನಕ್ಕಿಂತ ಅಂತರಂಗದ ಶುದ್ಧತೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಾರೆ. "ಭವಿಯೆಂದಡೆ ಲಿಂಗವಿಲ್ಲದವ ಭವಿಯೇ? ಅಲ್ಲಲ್ಲ", ''ಮಾಡಬೇಕು ಮಾಡಬೇಕು, ಮಹಾನುಭಾವರ ಸಂಗವ...", "ಶಾಸ್ತ್ರದ ರಂಜನೆ ಲೋಕಕ್ಕಲ್ಲದೆ..." ಮತ್ತು "ವೇದ ವೇದಾಂತವನೋದಿದಡೇನು ಮನಸ್ಸೂತಕವಳಿಯದನ್ನಕ್ಕ?" ಎಂಬ ವಚನಗಳ ಆಧಾರದ ಮೇಲೆ ಸಿದ್ಧರಾಮೇಶ್ವರರ ಲಿಂಗಾನುಭವ, ಸದಾಚಾರ ಮತ್ತು ಸತ್ಸಂಗದ ಕುರಿತ ತಾತ್ವಿಕ ಚಿಂತನೆಗಳನ್ನು ವಿಶ್ಲೇಷಿಸಬಹುದು. ಈ ವಚನಗಳು ಶರಣಧರ್ಮದ ಮೂಲತತ್ವವಾದ ಅನುಭವವೇ ಪರಮ ಪ್ರಮಾಣ ಎಂಬ ಸತ್ಯವನ್ನು ಪ್ರತಿಪಾದಿಸುತ್ತವೆ.



ಡಾ. ಜಿ.ವಿ.ಮಂಜುನಾಥ
ಇತಿಹಾಸ ಉಪನ್ಯಾಸಕರು
ಕೊಟ್ರೆ ನಂಜಪ್ಪ ಪ.ಪೂ.ಕಾಲೇಜು
ಹೊಳಲ್ಕೆರೆ, ಚಿತ್ರದುರ್ಗ ಜಿಲ್ಲೆ – 577526. ಮೊ : 9945727746

ಲಿಂಗಧಾರಣೆ ಮತ್ತು ಅಂತರಂಗದ ಅನುಭವ

ಸಿದ್ಧರಾಮೇಶ್ವರರು ಒಂದು ವಚನದಲ್ಲಿ ಹೀಗೆ ಹೇಳುತ್ತಾರೆ.

ಭವಿಯೆಂದಡೆ ಲಿಂಗವಿಲ್ಲದವ ಭವಿಯೇ? ಅಲ್ಲಲ್ಲ.
ಭವಿಯೆಂದಡೆ ವೇದವೇದಾಂತರವನೋದಿ,
ಲಿಂಗವ ಧರಿಸದವ ಭವಿಯೆ? ಅಲ್ಲಲ್ಲ.
ಅಂಗದ ಸ್ಥಿತಿಯನರಿದಡೇನಾಯಿತ್ತು?
ಗುಣ ತಿಳಿದು ಲಿಂಗವ ಕೊಡುವ ಗುರುವಿಲ್ಲ.
ಬಹಿರಂಗದಲ್ಲಿ ಲಿಂಗವಿರಹಿತ,
ಅಂತರಂಗದಲ್ಲಿ ಲಿಂಗಲೋಲುಪ್ತ.
ಹೊಲಬುಳ್ಳವನಾದಡೇನು,
ತಿಳಿಯದವರಿಲ್ಲದನ್ನಕ್ಕ?
ಸತ್ಕ್ರಿಯಾಸಾಮರಸ್ಯಕ್ಕೆ ಭವಿಯಲ್ಲದೆ
ಅನುಭವಗೋಷ್ಠಿಗೆ ಭವಿಯೆ? ಅಲ್ಲಲ್ಲ.
ಭವಿಯೆಂದಡೆ ಮದ್ಯಪಾನ
ಮಾಂಸಭಕ್ಷಣ ಪರಸ್ತ್ರೀಸಂಗ
ಪರಧನಚೋರತ್ವ ನಿಜವಸ್ತು
ಅಂತರತ್ವವಿದ್ದವನೆ ಭವಿಯಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ.

ಈ ವಚನದಲ್ಲಿ ಸಿದ್ಧರಾಮೇಶ್ವರರು ಲಿಂಗಧಾರಣೆಯ ನಿಜವಾದ ಅರ್ಥವನ್ನು ಅತ್ಯಂತ ಗಹನವಾಗಿ ವಿವರಿಸುತ್ತಾರೆ. ಅವರ ದೃಷ್ಟಿಯಲ್ಲಿ ಲಿಂಗವು ಕೇವಲ ಹೊರಗಿನ ಧಾರ್ಮಿಕ ಗುರುತು ಅಥವಾ ದೇಹದ ಮೇಲೆ ಧರಿಸುವ ಒಂದು ಸಂಕೇತವಲ್ಲ. ಅದು ಜೀವ ಮತ್ತು ಶಿವನ ನಡುವಿನ ಅನುಭವ ಸಂಬಂಧವನ್ನು ಸೂಚಿಸುವ ಆಧ್ಯಾತ್ಮಿಕ ಸಾಧನವಾಗಿದೆ. ವೇದವೇದಾಂತಗಳನ್ನು ಓದಿದರೂ,

ಹೊರಗಿನಿಂದ ಲಿಂಗವನ್ನು ಧರಿಸಿದರೂ ಅಂತರಂಗದಲ್ಲಿ ಶಿವಭಾವ ಮೂಡದಿದ್ದರೆ ಅಂತಹ ಸಾಧನೆ ಅಪೂರ್ಣವಾಗುತ್ತದೆ. ಲಿಂಗಧಾರಣೆಯ ಉದ್ದೇಶವು ವ್ಯಕ್ತಿಯ ಮನಸ್ಸು, ಚಿಂತನೆ ಮತ್ತು ನಡತೆಯಲ್ಲಿ ಪರಿವರ್ತನೆಯನ್ನು ಉಂಟುಮಾಡುವುದಾಗಿದೆ. ಆದ್ದರಿಂದ ಸಿದ್ಧರಾಮೇಶ್ವರರು ಬಾಹ್ಯ ಲಿಂಗಧಾರಣೆಗಿಂತ ಅಂತರಂಗದ ಲಿಂಗಾನುಭವಕ್ಕೆ ಹೆಚ್ಚಿನ ಮಹತ್ವ ನೀಡುತ್ತಾರೆ.

"ಬಹಿರಂಗದಲ್ಲಿ ಲಿಂಗವಿರಹಿತ, ಅಂತರಂಗದಲ್ಲಿ ಲಿಂಗಲೋಲುಪ್ತ" ಎಂಬ ಸಾಲಿನ ಮೂಲಕ ಅವರು ಲಿಂಗದ ಆಂತರಿಕ ಸ್ವರೂಪವನ್ನು ಸ್ಪಷ್ಟಪಡಿಸುತ್ತಾರೆ. ನಿಜವಾದ ಶರಣತ್ವವು ಹೊರಗಿನ ವೇಷದಲ್ಲಿ ಇಲ್ಲ, ಒಳಗಿನ ಶುದ್ಧತೆಯಲ್ಲಿ ಇದೆ. ಅಹಂಕಾರ, ಆಸೆ, ದುರ್ಗುಣ ಮತ್ತು ಅನೈತಿಕತೆಯನ್ನು ತ್ಯಜಿಸಿ ಶಿವತತ್ವದಲ್ಲಿ ಮನಸ್ಸನ್ನು ಸ್ಥಿರಗೊಳಿಸುವುದೇ ನಿಜವಾದ ಲಿಂಗಾನುಭವವಾಗಿದೆ. ಈ ಕಾರಣದಿಂದಲೇ ಅವರು ಮದ್ಯಪಾನ, ಮಾಂಸಭಕ್ಷಣ, ಪರಸ್ತ್ರೀಸಂಗ ಮತ್ತು ಪರಧನದ ಅಪಹರಣದಂತಹ ದುರ್ಗುಣಗಳನ್ನು ಖಂಡಿಸುತ್ತಾರೆ. ಸದಾಚಾರವಿಲ್ಲದ ಲಿಂಗಧಾರಣೆ ಶರಣತ್ವಕ್ಕೆ ಅರ್ಹವಲ್ಲ ಎಂಬುದನ್ನು ಈ ವಚನ ತಿಳಿಸುತ್ತದೆ. ಸಿದ್ಧರಾಮೇಶ್ವರರ ಲಿಂಗತತ್ವವು ಕೇವಲ ಧಾರ್ಮಿಕ ಆಚರಣೆಯಲ್ಲ. ಅದು ವ್ಯಕ್ತಿಯ ನೈತಿಕ ಶುದ್ಧತೆ, ಆತ್ಮಪರಿವರ್ತನೆ ಮತ್ತು ಶಿವಸಾಮರಸ್ಯದ ಅನುಭವದ ಮಾರ್ಗವಾಗಿದೆ.

ಮಹಾನುಭಾವರ ಸಂಗ ಮತ್ತು ಅನುಭವದ ಮಹತ್ವ

ಸಿದ್ಧರಾಮೇಶ್ವರರು ತಮ್ಮ ಇನ್ನೊಂದು ವಚನದಲ್ಲಿ ಹೇಳುತ್ತಾರೆ

ಮಾಡಬೇಕು, ಮಾಡಬೇಕು,
ಮಹಾನುಭಾವರ ಸಂಗವ.
ನೋಡಬೇಕು, ನೋಡಬೇಕು,
ಸಿದ್ಧಾಂತವೇದಾಂತಂಗಳ.
ಹಾಡಬೇಕು, ಹಾಡಬೇಕು,
ಪರಶಿವಲಿಂಗವ.
ಕೂಡಬೇಕು, ಕೂಡಬೇಕು,
ಕಪಿಲಸಿದ್ಧಮಲ್ಲಿಕಾರ್ಜುನ ಲಿಂಗವ.

ಈ ವಚನದಲ್ಲಿ ಸಿದ್ಧರಾಮೇಶ್ವರರು ಸತ್ಸಂಗದ ಮಹತ್ವವನ್ನು ಅತ್ಯಂತ ಸರಳವಾದರೂ ಗಂಭೀರವಾದ ರೀತಿಯಲ್ಲಿ ಪ್ರತಿಪಾದಿಸಿದ್ದಾರೆ. ಶರಣ ಪರಂಪರೆಯಲ್ಲಿ ಸತ್ಸಂಗವು ಕೇವಲ ಸಾಧು–ಸಂತರ ಜೊತೆಗಿನ ಒಡನಾಟವಲ್ಲ. ಅದು ವ್ಯಕ್ತಿಯ ಅಂತರಂಗವನ್ನು ಪರಿವರ್ತಿಸುವ ಆಧ್ಯಾತ್ಮಿಕ ಶಕ್ತಿ ಎಂದು ಪರಿಗಣಿಸಲಾಗಿದೆ. "ಮಾಡಬೇಕು, ಮಾಡಬೇಕು, ಮಹಾನುಭಾವರ ಸಂಗವ" ಎಂಬ ಸಾಲಿನ ಮೂಲಕ ಸಿದ್ಧರಾಮೇಶ್ವರರು ಸದ್ಗುಣಿಗಳ, ಅನುಭವಿಗಳ ಮತ್ತು ಶಿವಾನುಭವವನ್ನು ಪಡೆದ ಶರಣರ ಸಂಗವು ಸಾಧಕನ ಜೀವನದಲ್ಲಿ ಅತ್ಯಂತ ಅಗತ್ಯವೆಂದು ತಿಳಿಸುತ್ತಾರೆ. ಮಹಾನುಭಾವರ ಸಂಗದಿಂದ ವ್ಯಕ್ತಿಯ ಮನಸ್ಸಿನ ಅಶುದ್ಧತೆ ದೂರವಾಗಿ, ಸತ್ಯದ ಅರಿವು ಮತ್ತು ಸದಾಚಾರದ ಮಾರ್ಗ ಬೆಳೆಯುತ್ತದೆ. ಕೇವಲ ಸ್ವಂತ ಜ್ಞಾನ ಮತ್ತು ಪ್ರಯತ್ನದಿಂದ ಸಾಧನೆ ಮಾಡುವುದು ಕಷ್ಟ, ಅನುಭವಿಗಳ ಮಾರ್ಗದರ್ಶನವು ಸಾಧಕನನ್ನು ಸರಿಯಾದ ದಿಕ್ಕಿನಲ್ಲಿ ಮುನ್ನಡೆಸುತ್ತದೆ ಎಂಬುದು ಈ ವಚನದ ಆಶಯವಾಗಿದೆ.

ವಚನದ ಮುಂದಿನ ಸಾಲುಗಳಲ್ಲಿ "ಸಿದ್ಧಾಂತವೇದಾಂತಂಗಳ ನೋಡಬೇಕು, ಪರಶಿವಲಿಂಗವ ಹಾಡಬೇಕು" ಎಂದು ಹೇಳುವ ಮೂಲಕ ಸಿದ್ಧರಾಮೇಶ್ವರರು ಜ್ಞಾನ ಮತ್ತು ಭಕ್ತಿಯ ಸಮನ್ವಯವನ್ನು ಪ್ರತಿಪಾದಿಸುತ್ತಾರೆ. ಸಿದ್ಧಾಂತ ಮತ್ತು ವೇದಾಂತಗಳನ್ನು ತಿಳಿದುಕೊಳ್ಳುವುದು ಅಗತ್ಯವಾದರೂ, ಅವು ಕೇವಲ ಬೌದ್ಧಿಕ ಜ್ಞಾನವಾಗಿ ಉಳಿಯಬಾರದು. ಅವುಗಳ ತತ್ವವನ್ನು ಅನುಭವಿಸಿ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಪರಶಿವಲಿಂಗದ ಸ್ಮರಣೆ ಮತ್ತು ಅನುಭವವು ಸಾಧಕನ ಅಂತರಂಗವನ್ನು ಶುದ್ಧಗೊಳಿಸುತ್ತದೆ. ಇಲ್ಲಿ ಲಿಂಗವು ಕೇವಲ ಪೂಜೆಯ ವಸ್ತುವಲ್ಲ. ಅದು ಶಿವತತ್ವದ ಅನುಭವದ ಸಂಕೇತವಾಗಿದೆ. ಸಿದ್ಧಾಂತದ ಅರಿವು ಮತ್ತು ಲಿಂಗಾನುಭವ ಎರಡೂ ಒಂದಾಗಿ ಬಂದಾಗ ಮಾತ್ರ ಆಧ್ಯಾತ್ಮಿಕ ಸಾಧನೆ ಪೂರ್ಣಗೊಳ್ಳುತ್ತದೆ.

ವಚನದ ಕೊನೆಯ ಸಾಲಿನಲ್ಲಿರುವ "ಕೂಡಬೇಕು, ಕೂಡಬೇಕು, ಕಪಿಲಸಿದ್ಧಮಲ್ಲಿಕಾರ್ಜುನ ಲಿಂಗವ" ಎಂಬ ಮಾತು ಜೀವ ಮತ್ತು ಶಿವನ ಸಾಮರಸ್ಯದ ಪರಮ ಸ್ಥಿತಿಯನ್ನು ಸೂಚಿಸುತ್ತದೆ. ಸತ್ಸಂಗ, ಜ್ಞಾನ, ಭಕ್ತಿ ಮತ್ತು ಅನುಭವದ ಮೂಲಕ ಸಾಧಕನು ಅಂತಿಮವಾಗಿ ಶಿವನೊಂದಿಗೆ ಏಕತ್ವವನ್ನು ಪಡೆಯುತ್ತಾನೆ ಎಂಬುದು ಸಿದ್ಧರಾಮೇಶ್ವರರ ನಂಬಿಕೆಯಾಗಿದೆ. ಹೀಗಾಗಿ ಈ ವಚನವು ಸತ್ಸಂಗವನ್ನು ಕೇವಲ ಸಾಮಾಜಿಕ ಸಂಪರ್ಕವಾಗಿ ನೋಡದೆ, ಆತ್ಮೋನ್ನತಿಯ ಮಾರ್ಗವಾಗಿ ಪರಿಗಣಿಸುತ್ತದೆ. ಮಹಾನುಭಾವರ ಸಂಗವು ಜ್ಞಾನವನ್ನು ನೀಡುತ್ತದೆ, ಲಿಂಗಾನುಭವವು ಅಂತರಂಗವನ್ನು ಶುದ್ಧಗೊಳಿಸುತ್ತದೆ ಮತ್ತು ಶಿವಸಾಮರಸ್ಯವು ಜೀವನದ ಪರಮ ಗುರಿಯಾಗುತ್ತದೆ ಎಂಬ ಶರಣ ತತ್ವವನ್ನು ಈ ವಚನ ಪ್ರತಿಪಾದಿಸುತ್ತದೆ.

ಗ್ರಂಥಜ್ಞಾನಕ್ಕಿಂತ ಅನುಭವ ಮತ್ತು ಸದಾಚಾರದ ಮಹತ್ವ

ಸಿದ್ಧರಾಮೇಶ್ವರರು ಮತ್ತೊಂದು ವಚನದಲ್ಲಿ ಹೀಗೆ ಹೇಳುತ್ತಾರೆ.

ವೇದ ವೇದಾಂತವನೋದಿದಡೇನು
ಮನಸ್ಸೂತಕವಳಿಯದನ್ನಕ್ಕ?
ಸಿದ್ಧ ಸಿದ್ಧಾಂತವ ಶ್ರಮಬಿಟ್ಟಡೇನು
ಸಾಧಿಸಿ ಕೀರ್ತಿಯ ಪಡೆಯದನ್ನಕ್ಕ?
ಇವೆಲ್ಲ ಹೊರಗಣ ಮಾತು.
ಮಾತೊಂದೆ ನಮ್ಮ ಕಪಿಲಸಿದ್ಧಮಲ್ಲೇಶನಲ್ಲಿ
ಸದಾಚಾರ ಸನ್ಮಾರ್ಗವಯ್ಯಾ

ಈ ವಚನದಲ್ಲಿ ಸಿದ್ಧರಾಮೇಶ್ವರರು ಕೇವಲ ಗ್ರಂಥಜ್ಞಾನ ಮತ್ತು ತಾತ್ವಿಕ ಚರ್ಚೆಗಳ ಮಿತಿಯನ್ನು ಸ್ಪಷ್ಟಪಡಿಸುತ್ತಾರೆ. ವೇದ, ವೇದಾಂತ, ಸಿದ್ಧಾಂತಗಳನ್ನು ಅಧ್ಯಯನ ಮಾಡುವುದು ಜ್ಞಾನಕ್ಕೆ ಸಹಾಯಕವಾದರೂ, ಅವು ವ್ಯಕ್ತಿಯ ಅಂತರಂಗವನ್ನು ಪರಿವರ್ತಿಸದಿದ್ದರೆ ಅವುಗಳ ಉದ್ದೇಶ ಸಾರ್ಥಕವಾಗುವುದಿಲ್ಲ. ''ವೇದ ವೇದಾಂತವನೋದಿದಡೇನು ಮನಸ್ಸೂತಕವಳಿಯದನ್ನಕ್ಕ?" ಎಂಬ ಪ್ರಶ್ನೆಯ ಮೂಲಕ ಅವರು ಓದಿನ ಜ್ಞಾನ ಮತ್ತು ಅನುಭವದ ಜ್ಞಾನದ ನಡುವಿನ ವ್ಯತ್ಯಾಸವನ್ನು ತೋರಿಸುತ್ತಾರೆ. ಮನಸ್ಸಿನ ಅಶುದ್ಧತೆ, ಅಹಂಕಾರ, ದ್ವೇಷ ಮತ್ತು ಆಸೆಗಳು ದೂರವಾಗದೆ ಕೇವಲ ಗ್ರಂಥಗಳನ್ನು ಓದುವುದರಿಂದ ಆಧ್ಯಾತ್ಮಿಕ ಪ್ರಗತಿ ಸಾಧ್ಯವಿಲ್ಲ. ನಿಜವಾದ ಜ್ಞಾನವು ಮನಸ್ಸಿನ ಪರಿವರ್ತನೆಗೆ ಕಾರಣವಾಗಬೇಕು ಎಂಬುದು ಅವರ ಆಶಯವಾಗಿದೆ.

ಅದೇ ರೀತಿ "ಸಿದ್ಧ ಸಿದ್ಧಾಂತವ ಶ್ರಮಬಿಟ್ಟಡೇನು ಸಾಧಿಸಿ ಕೀರ್ತಿಯ ಪಡೆಯದನ್ನಕ್ಕ?" ಎಂಬ ಸಾಲುಗಳ ಮೂಲಕ ಸಿದ್ಧರಾಮೇಶ್ವರರು ಕೇವಲ ಸಾಧನೆಯ ಪ್ರದರ್ಶನ ಮತ್ತು ಕೀರ್ತಿಯ ಹಂಬಲವನ್ನು ಪ್ರಶ್ನಿಸುತ್ತಾರೆ. ಆಧ್ಯಾತ್ಮಿಕ ಮಾರ್ಗವು ಬಾಹ್ಯ ಪ್ರಸಿದ್ಧಿಗಾಗಿ ಅಲ್ಲ. ಅದು ಆತ್ಮಶುದ್ಧಿ ಮತ್ತು ಶಿವಾನುಭವಕ್ಕಾಗಿ ಇರುವ ಮಾರ್ಗವಾಗಿದೆ. ಕೊನೆಯ ಸಾಲುಗಳಲ್ಲಿ "ಇವೆಲ್ಲ ಹೊರಗಣ ಮಾತು. ಮಾತೊಂದೆ ನಮ್ಮ ಕಪಿಲಸಿದ್ಧಮಲ್ಲೇಶನಲ್ಲಿ ಸದಾಚಾರ ಸನ್ಮಾರ್ಗವಯ್ಯಾ" ಎಂದು ಹೇಳುವ ಮೂಲಕ ಅವರು ತಮ್ಮ ತಾತ್ವಿಕ ನಿಲುವನ್ನು ಸ್ಪಷ್ಟಪಡಿಸುತ್ತಾರೆ. ವೇದ, ವೇದಾಂತ, ಸಿದ್ಧಾಂತ, ಉಪದೇಶ ಎಲ್ಲವೂ ಜೀವನದಲ್ಲಿ ಸದಾಚಾರ ಮತ್ತು ಸನ್ಮಾರ್ಗವಾಗಿ ವ್ಯಕ್ತವಾದಾಗ ಮಾತ್ರ ಅವುಗಳಿಗೆ ನಿಜವಾದ ಅರ್ಥ ಬರುತ್ತದೆ.

ಈ ವಚನವು ಸಿದ್ಧರಾಮೇಶ್ವರರ ಅನುಭವಪ್ರಧಾನ ಚಿಂತನೆಯ ಪ್ರಮುಖ ಉದಾಹರಣೆಯಾಗಿದೆ. ಅವರ ದೃಷ್ಟಿಯಲ್ಲಿ ಧರ್ಮವು ಮಾತಿನಲ್ಲಿ ಅಥವಾ ಗ್ರಂಥಗಳಲ್ಲಿ ಇರುವ ವಿಷಯವಲ್ಲ. ಅದು ವ್ಯಕ್ತಿಯ ನಡತೆ, ಗುಣ ಮತ್ತು ಜೀವನಕ್ರಮದಲ್ಲಿ ವ್ಯಕ್ತವಾಗಬೇಕು. ಸದಾಚಾರವಿಲ್ಲದ ಜ್ಞಾನವು ಅಪೂರ್ಣ, ಅನುಭವವಿಲ್ಲದ ಭಕ್ತಿಯು ನಿರರ್ಥಕ ಮತ್ತು ಸನ್ಮಾರ್ಗವಿಲ್ಲದ ಸಾಧನೆಯು ಫಲರಹಿತ ಎಂಬ ಸಂದೇಶವನ್ನು ಅವರು ನೀಡುತ್ತಾರೆ. ಹೀಗಾಗಿ ಸಿದ್ಧರಾಮೇಶ್ವರರು ಗ್ರಂಥಜ್ಞಾನವನ್ನು ನಿರಾಕರಿಸದೆ, ಅದನ್ನು ಅನುಭವ ಮತ್ತು ಸದಾಚಾರದ ಮೂಲಕ ಪರಿಪೂರ್ಣಗೊಳಿಸುವ ಅಗತ್ಯವನ್ನು ಒತ್ತಿ ಹೇಳುತ್ತಾರೆ. ಶರಣಧರ್ಮದಲ್ಲಿ ಜ್ಞಾನಕ್ಕಿಂತ ಜೀವನದ ಶುದ್ಧತೆ ಮುಖ್ಯ ಎಂಬ ತತ್ವವನ್ನು ಈ ವಚನ ಪ್ರತಿಪಾದಿಸುತ್ತದೆ.

ಶಾಸ್ತ್ರಜ್ಞಾನಕ್ಕಿಂತ ಆತ್ಮಾನುಭವದ ಶ್ರೇಷ್ಠತೆ

ಸಿದ್ಧರಾಮೇಶ್ವರರು ಮತ್ತೊಂದು ವಚನದಲ್ಲಿ ಹೀಗೆ ಹೇಳುತ್ತಾರೆ.

ಶಾಸ್ತ್ರದ ರಂಜನೆ ಲೋಕಕ್ಕಲ್ಲದೆ
ಲೋಕವಿರಹಿತಂಗೆಲ್ಲಿಹದೊ?
ವೇದ ವೇದಾಂತದ ರಂಜನೆ ಮುಮುಕ್ಷುಗಳಿಗಲ್ಲದೆ
ಮೋಕ್ಷವಿರಹಿತಂಗೆಲ್ಲಿಯದೊ?
ನಮ್ಮ ಕಪಿಲಸಿದ್ಧಮಲ್ಲಿಕಾರ್ಜುನನ
ಮಾಯಾಕೀಲವ ತಿಳಿವಡೆ,
ತಿಳಿವವರಿಗಲ್ಲದೆ ನಿಶ್ಯೂನ್ಯರಿಗೆಲ್ಲಿಹದೊ?

ಈ ವಚನದಲ್ಲಿ ಸಿದ್ಧರಾಮೇಶ್ವರರು ಶಾಸ್ತ್ರ, ವೇದ ಮತ್ತು ವೇದಾಂತಗಳ ನಿಜವಾದ ಉದ್ದೇಶವನ್ನು ವಿವರಿಸುತ್ತಾರೆ. ಅವರ ದೃಷ್ಟಿಯಲ್ಲಿ ಶಾಸ್ತ್ರಜ್ಞಾನವು ಕೇವಲ ಪಾಂಡಿತ್ಯ ಪ್ರದರ್ಶನಕ್ಕಾಗಿ ಇರುವುದಲ್ಲ. ಅದು ಜೀವನದ ಅರ್ಥವನ್ನು ತಿಳಿಸುವ ಮತ್ತು ಆತ್ಮೋನ್ನತಿಯ ಮಾರ್ಗವನ್ನು ತೋರಿಸುವ ಸಾಧನವಾಗಿದೆ. "ಶಾಸ್ತ್ರದ ರಂಜನೆ ಲೋಕಕ್ಕಲ್ಲದೆ ಲೋಕವಿರಹಿತಂಗೆಲ್ಲಿಹದೊ?" ಎಂಬ ಪ್ರಶ್ನೆಯ ಮೂಲಕ ಅವರು ಶಾಸ್ತ್ರವನ್ನು ಕೇವಲ ಬಾಹ್ಯ ಚರ್ಚೆ, ವಾದ–ವಿವಾದ ಮತ್ತು ಸಾಮಾಜಿಕ ಪ್ರತಿಷ್ಠೆಯ ಸಾಧನವನ್ನಾಗಿ ಬಳಸುವ ಪ್ರವೃತ್ತಿಯನ್ನು ವಿಮರ್ಶಿಸುತ್ತಾರೆ. ಶಾಸ್ತ್ರದ ನಿಜವಾದ ಪ್ರಯೋಜನವು ಮಾನವನ ಅಂತರಂಗದ ಪರಿವರ್ತನೆಯಲ್ಲಿ ಇರಬೇಕು. ಅದು ಲೋಕದ ಬಂಧನಗಳಿಂದ ಮುಕ್ತಿಯ ಕಡೆಗೆ ಕರೆದೊಯ್ಯುವ ಮಾರ್ಗದರ್ಶಕವಾಗಬೇಕು ಎಂಬುದು ಅವರ ಆಶಯವಾಗಿದೆ.

ಅದೇ ರೀತಿ "ವೇದ ವೇದಾಂತದ ರಂಜನೆ ಮುಮುಕ್ಷುಗಳಿಗಲ್ಲದೆ ಮೋಕ್ಷವಿರಹಿತಂಗೆಲ್ಲಿಯದೊ?" ಎಂಬ ಸಾಲುಗಳಲ್ಲಿ ಅವರು ವೇದಾಂತದ ಮೂಲ ಗುರಿಯನ್ನು ಸ್ಪಷ್ಟಪಡಿಸುತ್ತಾರೆ. ವೇದ ಮತ್ತು ವೇದಾಂತಗಳು ಕೇವಲ ಓದಿಗಾಗಿ ಅಥವಾ ವಾದಕ್ಕಾಗಿ ಇರುವುದಿಲ್ಲ. ಅವು ಮುಕ್ತಿಯನ್ನು ಬಯಸುವ ಸಾಧಕರಿಗೆ ಆತ್ಮಜ್ಞಾನದ ಮಾರ್ಗವನ್ನು ತೋರಿಸುವ ಸಾಧನಗಳಾಗಿವೆ. ಆದರೆ ಆ ಜ್ಞಾನವು ಮನಸ್ಸಿನ ಶುದ್ಧತೆ, ಸದಾಚಾರ ಮತ್ತು ಅನುಭವವಾಗಿ ರೂಪುಗೊಳ್ಳದಿದ್ದರೆ ಅದು ಕೇವಲ ಶಬ್ದಜ್ಞಾನವಾಗಿಯೇ ಉಳಿಯುತ್ತದೆ. ಸಿದ್ಧರಾಮೇಶ್ವರರ ಪ್ರಕಾರ ಜ್ಞಾನವು ವ್ಯಕ್ತಿಯ ಜೀವನದಲ್ಲಿ ಪರಿವರ್ತನೆಯನ್ನು ಉಂಟುಮಾಡಬೇಕು. ಅಹಂಕಾರವನ್ನು ಕಡಿಮೆ ಮಾಡಿ, ಶಿವತತ್ವದ ಅರಿವನ್ನು ಹೆಚ್ಚಿಸಬೇಕು.

ವಚನದ ಕೊನೆಯ ಭಾಗದಲ್ಲಿ "ನಮ್ಮ ಕಪಿಲಸಿದ್ಧಮಲ್ಲಿಕಾರ್ಜುನನ ಮಾಯಾಕೀಲವ ತಿಳಿವಡೆ" ಎಂದು ಹೇಳುವ ಮೂಲಕ ಅವರು ಪರಮಸತ್ಯದ ಅರಿವು ಅನುಭವಿಗಳಿಗಷ್ಟೇ ಸಾಧ್ಯವೆಂದು ಸೂಚಿಸುತ್ತಾರೆ. ಕೇವಲ ಗ್ರಂಥಗಳನ್ನು ಓದುವುದರಿಂದ ಅಥವಾ ಇತರರ ಮಾತುಗಳನ್ನು ಕೇಳುವುದರಿಂದ ಶಿವಾನುಭವ ದೊರೆಯುವುದಿಲ್ಲ. ಸ್ವತಃ ಸಾಧನೆ ಮಾಡಿ, ಅಂತರಂಗವನ್ನು ಶುದ್ಧಗೊಳಿಸಿ, ಅನುಭವದ ಮೂಲಕ ಸತ್ಯವನ್ನು ಅರಿಯಬೇಕು. ಹೀಗಾಗಿ ಈ ವಚನವು ಶಾಸ್ತ್ರ ಮತ್ತು ವೇದಾಂತಗಳ ನಿರಾಕರಣೆಯಲ್ಲ. ಅವುಗಳ ನಿಜವಾದ ಉದ್ದೇಶವನ್ನು ಪುನರ್‌ವ್ಯಾಖ್ಯಾನಿಸುವ ಪ್ರಯತ್ನವಾಗಿದೆ. ಸಿದ್ಧರಾಮೇಶ್ವರರ ದೃಷ್ಟಿಯಲ್ಲಿ ಶಾಸ್ತ್ರವು ಮಾರ್ಗ, ವೇದಾಂತವು ಜ್ಞಾನದ ದೀಪ, ಆದರೆ ಆತ್ಮಾನುಭವವೇ ಪರಮ ಗುರಿಯಾಗಿದೆ. ಈ ಕಾರಣದಿಂದ ಅವರ ವಚನಗಳಲ್ಲಿ ಗ್ರಂಥಜ್ಞಾನ ಮತ್ತು ಅನುಭವಜ್ಞಾನದ ನಡುವಿನ ಸಮನ್ವಯದ ದೃಷ್ಟಿಕೋನ ವ್ಯಕ್ತವಾಗುತ್ತದೆ.

ಸಿದ್ಧರಾಮೇಶ್ವರರ ಈ ವಚನಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿದಾಗ ಅವರ ಲಿಂಗಾನುಭವ, ಸತ್ಸಂಗ, ಸದಾಚಾರ ಮತ್ತು ಅನುಭವಪ್ರಧಾನ ಚಿಂತನೆಯ ಸ್ವರೂಪ ಸ್ಪಷ್ಟವಾಗುತ್ತದೆ. ಅವರ ದೃಷ್ಟಿಯಲ್ಲಿ ಲಿಂಗಧಾರಣೆಯು ಕೇವಲ ಬಾಹ್ಯ ಧಾರ್ಮಿಕ ಆಚರಣೆಯಲ್ಲ. ಅದು ಜೀವ ಮತ್ತು ಶಿವನ ನಡುವಿನ ಅಂತರಂಗದ ಸಂಬಂಧವನ್ನು ಅರಿಯುವ ಆಧ್ಯಾತ್ಮಿಕ ಸಾಧನೆಯಾಗಿದೆ. ಲಿಂಗವನ್ನು ಧರಿಸುವುದಕ್ಕಿಂತ ಅದರ ತತ್ವವನ್ನು ಅರಿತು ಜೀವನದಲ್ಲಿ ಅಳವಡಿಸಿಕೊಳ್ಳುವುದು ಮುಖ್ಯವೆಂದು ಅವರು ಪ್ರತಿಪಾದಿಸುತ್ತಾರೆ. ಅದೇ ರೀತಿ ಮಹಾನುಭಾವರ ಸಂಗವು ಸಾಧಕನ ಅಂತರಂಗವನ್ನು ಶುದ್ಧಗೊಳಿಸಿ ಶಿವಾನುಭವದ ಮಾರ್ಗದಲ್ಲಿ ಮುನ್ನಡೆಸುವ ಶಕ್ತಿಯಾಗಿದೆ. ಸತ್ಸಂಗದಿಂದ ಸದಾಚಾರ, ವಿನಯ, ಭಕ್ತಿ ಮತ್ತು ಅನುಭವದ ಬೆಳವಣಿಗೆ ಸಾಧ್ಯವಾಗುತ್ತದೆ. ಸಿದ್ಧರಾಮೇಶ್ವರರು ವೇದ, ವೇದಾಂತ, ಶಾಸ್ತ್ರ ಮತ್ತು ಸಿದ್ಧಾಂತಗಳನ್ನು ನಿರಾಕರಿಸುವುದಿಲ್ಲ. ಆದರೆ ಅವು ಅನುಭವ ಮತ್ತು ಸದಾಚಾರದಿಂದ ಬೇರ್ಪಟ್ಟಾಗ ಅವುಗಳ ಮೌಲ್ಯ ಕುಂದುತ್ತದೆ ಎಂದು ಎಚ್ಚರಿಸುತ್ತಾರೆ. ಗ್ರಂಥಜ್ಞಾನವು ಮನಸ್ಸಿನ ಪರಿವರ್ತನೆಗೆ ಕಾರಣವಾಗಬೇಕು. ಇಲ್ಲದಿದ್ದರೆ ಅದು ಕೇವಲ ಹೊರಗಿನ ಮಾತಾಗಿ ಉಳಿಯುತ್ತದೆ. ಅವರ ವಚನಗಳಲ್ಲಿ ಲಿಂಗಾನುಭವವು ಅಂತರಂಗದ ಶುದ್ಧತೆಯೊಂದಿಗೆ, ಸತ್ಸಂಗವು ಸದಾಚಾರದೊಂದಿಗೆ ಮತ್ತು ಜ್ಞಾನವು ಜೀವನಾನುಭವದೊಂದಿಗೆ ಬೆಸೆದುಕೊಂಡಿದೆ. ಹೀಗಾಗಿ ಸಿದ್ಧರಾಮೇಶ್ವರರ ತತ್ವದಲ್ಲಿ ಮುಕ್ತಿಯ ಮಾರ್ಗವು ಲಿಂಗಭಕ್ತಿ, ಮಹಾನುಭಾವರ ಸಂಗ, ಸದಾಚಾರ ಮತ್ತು ಆತ್ಮಾನುಭವಗಳ ಸಮನ್ವಯದಿಂದ ರೂಪುಗೊಳ್ಳುತ್ತದೆ. ಅನುಭವವೇ ಪರಮ ಪ್ರಮಾಣ, ಸದಾಚಾರವೇ ಸಾಧನೆಯ ಆಧಾರ ಮತ್ತು ಶಿವಸಾಮರಸ್ಯವೇ ಜೀವನದ ಪರಮ ಗುರಿ ಎಂಬ ಶರಣ ತತ್ವವನ್ನು ಅವರ ವಚನಗಳು ಶಾಶ್ವತವಾಗಿ ಪ್ರತಿಪಾದಿಸುತ್ತವೆ.

ಪ್ರೀತಿಯ ಚಂದದಾರ ಬಂಧುಗಳೇ,

ನೊಳಂಬವಾಣಿ ಪತ್ರಿಕೆಯು 16ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿದ್ದು ಈ ಸಂದರ್ಭದಲ್ಲಿ ನೊಳಂಬವಾಣಿ ಚಂದಾ ಹಣವನ್ನು 5 ವರ್ಷ, 10 ವರ್ಷಗಳಿಗೆ ಮಾಡಿಸಿರುತ್ತೀರಿ, ತಮ್ಮಗಳ ಅವಧಿಯು ಮುಗಿದಿದ್ದು 2000 ರೂಗಳನ್ನು ನೀಡಿ ಆಜೀವ ಸದಸ್ಯತ್ವವನ್ನು ನವೀಕರಿಸಬೇಕೆಂದು ಎಲ್ಲರಿಗೂ ಪ್ರೀತಿಪೂರ್ವಕವಾಗಿ ಸಂಪಾದಕ ಮಂಡಳಿ ಮತ್ತು ನೊಳಂಬ ಲಿಂಗಾಯಿತ ಸಂಘ (ರಿ.) ಬೆಂಗಳೂರಿನ ಪರವಾಗಿ ತಮ್ಮಲ್ಲಿ ವಿನಯಪೂರ್ವಕವಾಗಿ ಕೋರುತ್ತೇನೆ. ವಿಳಾಸ ಬದಲಾವಣೆ, ಪತ್ರಿಕೆ ಬಾರದಿದ್ದಲ್ಲಿ ಪಿನ್‌ಕೋಡ್ ಮತ್ತು ಫೋನ್ ನಂಬರ್ ಪೂರ್ಣ ಮಾಹಿತಿ ಸಹಿತ ಈ ಕೆಳಗಿನ ವಾಟ್ಸಪ್ ಸಂಖ್ಯೆಗೆ ಕಳುಹಿಸಿ.


ಮೊ : 9481910181 – ಸಂಪಾದಕ

ನೊಳಂಬ ದೇವಾಲಯಗಳು

ಬಲಗಡೆಯಲ್ಲಿ ಪ್ರಧಾನವಾಗಿ ನಟರಾಜನನ್ನು ಕೆತ್ತಲಾಗಿದೆ. ಇದರ ಕೆಳಗೆ ಎಡಗಡೆಯಲ್ಲಿ ಸೂರ್ಯನ ಶಿಲ್ಪವಿದೆ. ಬಲಗಡೆಯಲ್ಲಿ ಗಂಧರ್ವನೊಬ್ಬನ ಶಿಲ್ಪವಿದೆ. ಹಾಗೂ ಪಶ್ಚಿಮಮುಖದಲ್ಲಿ ವಾದ್ಯಗಾರನನ್ನು ಬಿಡಿಸಲಾಗಿದೆ

ಕಂಬ 3 : ಪ್ರವೇಶದ್ವಾರದಿಂದ ಗೂಢಮಂಟಪಕ್ಕೆ ಒಳಹೊಕ್ಕರೆ ಸಿಗುವ ಎಡಗಡೆಯ ಮೊದಲನೆಯ ಈ ಕಂಬದ ಪಶ್ಚಿಮ ಮುಖದಲ್ಲಿ ಶಂಖನಿಧಿ ಮತ್ತು ಪದ್ಮನಿಧಿಗಳನ್ನು ಕೆತ್ತಲಾಗಿದೆ. ದಕ್ಷಿಣಮುಖದಲ್ಲಿ ಲಕ್ಷ್ಮಿ ಮತ್ತು ವಿಷ್ಣುವನ್ನು ಕೆತ್ತಲಾಗಿದೆ. ಪೂರ್ವಮುಖದಲ್ಲಿ ಕೈಯಲ್ಲಿ ಗದೆಯನ್ನು ಹಿಡಿದಿರುವ ಗದಾಧಾರಿಯ ಶಿಲ್ಪವಿದ್ದರೆ, ಬಲಗಡೆಯಲ್ಲಿ ಸಿಂಹವಾಹನೆಯಾದ ದುರ್ಗೆಯ ಶಿಲ್ಪವಿದೆ. ಉತ್ತರ ಮುಖದಲ್ಲಿ ಇಬ್ಬರು ಗಂಧರ್ವರು ನರ್ತನದಲ್ಲಿ ತೊಡಗಿದ್ದಾರೆ. ಇದರಲ್ಲಿ ಒಬ್ಬನು ವಾದ್ಯಗಾರನಾಗಿಯೂ ನರ್ತಿಸುತ್ತಿದ್ದಾನೆ.

ಕಂಬ 4 : ಪ್ರವೇಶದ್ವಾರದಿಂದ ಗೂಢಮಂಟಪಕ್ಕೆ ಒಳಹೊಕ್ಕರೆ ಸಿಗುವ ಬಲಗಡೆಯ ಎರಡನೆಯ ಈ ಕಂಬದಲ್ಲಿ, ಪಶ್ಚಿಮ ಮುಖದಲ್ಲಿ ಬಹಳ ಅಸ್ಪಷ್ಟವಾಗಿರುವ ಶಿಲ್ಪವೊಂದಿದ್ದು ಇದನ್ನು ವರಾಹಾವತಾರದಲ್ಲಿರುವ ವಿಷ್ಣುವೆಂದು ತಿಳಿಯಬಹುದಾಗಿದೆ ಮತ್ತು ತ್ರಿವಿಕ್ರಮನ ಅವತಾರಗಳನ್ನು ಕೆತ್ತಲಾಗಿದೆ. ದಕ್ಷಿಣ ಮುಖದಲ್ಲಿ ಎಡಗಡೆಯಲ್ಲಿ ಶಿವ ಮತ್ತು ಬಲಗಡೆಯಲ್ಲಿ ವಿಷ್ಣುವನ್ನು ಬಿಡಿಸಲಾಗಿದೆ. ಪೂರ್ವಮುಖದಲ್ಲಿ ಎಡಗಡೆಯಲ್ಲಿ ವಾಮನನು ತನ್ನ ಛತ್ರಿಯು ಅಡಿಯಲ್ಲಿ ನಿಂತು ಬಲಗಡೆಯಲ್ಲಿರುವ ಬಲಿಚಕ್ರವರ್ತಿಯನ್ನು ಮೂರು ಪಾದದ ಭೂಮಿಯನ್ನು ಕೇಳುತ್ತಿರುವ ಶಿಲ್ಪವನ್ನು ಕೆತ್ತಲಾಗಿದೆ. ಬಲಗಡೆಯಲ್ಲಿ ದಾನವನ್ನು ನೀಡುವ ಬಲಿಚಕ್ರವರ್ತಿಯು ಕುಳಿತಿದ್ದಾನೆ. ಬಲಿಚಕ್ರವರ್ತಿಯ ಹಿಂದೆ ಇರುವ ವ್ಯಕ್ತಿಯು ಕಿವಿಯಲ್ಲಿ ಏನೋ ಹೇಳುತ್ತಿರುವಂತಿದೆ. ಇದು ಬಲಿಚಕ್ರವರ್ತಿಯ ಗುರುಗಳಾದ ಶುಕ್ರಾಚಾರ್ಯರಾಗಿದ್ದಾರೆ. ಉತ್ತರ ಮುಖದಲ್ಲಿ ಎಡಗಡೆಯಲ್ಲಿ ಮಹಾಬಲಿಯು ತನ್ನ ಅರ್ಧಾಂಗಿಯ ಜೊತೆ ವಾಮನನಿಗೆ ಭೂದಾನವನ್ನು ನೀಡಲು ನಿಂತಿದ್ದಾನೆ. ಬಲಗಡೆಯಲ್ಲಿ ದಾನವನ್ನು ಪಡೆದ ವಾಮನನು ವಿಸ್ಮಯ ಮುದ್ರೆಯಲ್ಲಿ ನಿಂತಿದ್ದಾನೆ. ಹಾಗೂ ಬಲಿ ಚಕ್ರವರ್ತಿಯನ್ನು ತನ್ನ ಕಾಲಿನಲ್ಲಿ ತುಳಿಯಲು ಹವಣಿಸುತ್ತಿರುವಂತಿದೆ. ಪಕ್ಕದಲ್ಲಿ ಬಲಿಚಕ್ರವರ್ತಿಯ ಹೆಂಡತಿಯೂ ಕೂಡ ನಿಂತಿದ್ದಾಳೆ.



ಡಾ. ಸುಂಕಂ ಗೋವರ್ಧನ
ಬೆಂಗಳೂರು
ಮೊ : 9535762464

ಅಷ್ಟದಿಕ್ಪಾಲಕರ ಶಿಲ್ಪಗಳು :

ಈಗಾಗಲೇ ನಮಗೆ ತಿಳಿದಿರುವಂತೆ ನೊಳಂಬರ ಎಲ್ಲಾ ಬಹಳ ಮುಖ್ಯ ದೇವಾಲಯಗಳ ಗೂಢಮಂಪಟದ ವಿತಾನಗಳಲ್ಲಿ ಮಧ್ಯದ ಬಹಳ ಪ್ರಧಾನವಾದ ವಿತಾನದಲ್ಲಿ ಅಷ್ಟದಿಕ್ಪಾಲಕರ ಶಿಲ್ಪಗಳನ್ನು ಕೆತ್ತಲಾಗಿರುತ್ತದೆ. ಭೋಗನಂದೀಶ್ವರ ದೇವಾಲಯದ ಗೂಢಮಂಟಪದ ವಿತಾನದ ಮಧ್ಯದಲ್ಲಿ ಕೂಡ ಇಂತಹ ಅಷ್ಟದಿಕ್ಪಾಲಕರ ಶಿಲ್ಪಗಳನ್ನು ಕೆತ್ತಲಾಗಿದೆ. ಮಧ್ಯದ ಅಂಕಣದಲ್ಲಿ ಉಮಾಮಹೇಶ್ವರರ ಶಿಲ್ಪಗಳಿವೆ. ಉಮೆಯು ಮಹೇಶ್ವರನ ಪಕ್ಕದಲ್ಲಿ ಕುಳಿತಿದ್ದಾಳೆ. ಉಮಾಮಹೇಶ್ವರರು ಒಂದು ಉನ್ನತವಾದ ಸರಳವಾದ ಪೀಠದ ಮೇಲೆ ಕುಳಿತಿದ್ದಾರೆ. ಶಿವನು ಲಲಿತಾಸನದಲ್ಲಿ ಕುಳಿತಿದ್ದು ಚತುರ್ಭುಜನಾಗಿದ್ದಾನೆ. ತನ್ನ ಮೇಲಿನ ಕೈಗಳಲ್ಲಿ ಶಿವನು ತ್ರಿಶೂಲ ಮತ್ತು ಜಿಂಕೆಯನ್ನು ಅಂದರೆ ಚಂದ್ರನನ್ನು ಹಿಡಿದಿದ್ದರೆ ತನ್ನ ಕೆಳಗಿನ ಎರಡು ಕೈಗಳಲ್ಲಿ ಎಡಗೈಯನ್ನು ತನ್ನ ಕಾಲಿನ ಬಳಿ ಇಟ್ಟುಕೊಂಡಿದ್ದರೆ ಬಲಗೈಯಲ್ಲಿ ಅಭಯವನ್ನು ದಯಪಾಲಿಸಿದ್ದಾನೆ. ಶಿವನ ಎಡಗಡೆಯಲ್ಲಿ ಶಿವನ ತೊಡೆಗೆ ತನ್ನ ತೊಡೆಯನ್ನು ತಾಗಿಸಿ ಕುಳಿತಿರುವ ಉಮೆಯ ಶಿಲ್ಪವಿದೆ. ಉಮೆಯು ತನ್ನ ಬಲಗಾಲನ್ನು ಪೀಠದ ಮೇಲೆ ಇಟ್ಟುಕೊಂಡು ಇನ್ನೊಂದು ಕಾಲನ್ನು ಪೀಠದಿಂದ ಇಳಿಬಿಟ್ಟಿದ್ದಾಳೆ. ಇವರೀರ್ವರು ಕುಳಿತಿರುವ ಪೀಠವು ಬೆತ್ತದ ಮಂಚದಂತೆ ಸರಳವಾಗಿದೆ. ಇಲ್ಲಿ ಅಚಾತುರ್ಯದ ಫಲವೋ ಅಥವಾ ವಿಶೇಷತೆಯನ್ನು ಉಂಟು ಮಾಡುವ ಉದ್ದೇಶದಿಂದಲೋ ನೊಳಂಬ ಶಿಲ್ಪಿಗಳು ಒಂದು ವಿಶೇಷತೆಯನ್ನು ಮೆರೆದಿದ್ದಾರೆ. ಶಿವ ಪಾರ್ವತಿಯರು ಕುಳಿತಿರುವ ಪೀಠದ ಕೆಳಗಡೆ ಅವರ ವಾಹನಗಳನ್ನು ಕೆತ್ತುವುದು ಪದ್ಧತಿ. ಇಲ್ಲಿ ಶಿವನ ಪಾರ್ಶ್ವದಲ್ಲಿ ಸಿಂಹವಾಹನವನ್ನು ಹಾಗೂ ಪಾರ್ವತಿಯ ಪಾರ್ಶ್ವದಲ್ಲಿ ನಂದಿವಾಹನವನ್ನು ಬಿಡಿಸಲಾಗಿದೆ.

ಬಹುತೇಕ ಕಡೆ ದಿಕ್ಪಾಲಕರು ತಮ್ಮ ತಮ್ಮ ಪತ್ನಿಯರೊಡನೆ ಇರುವರಾದರೂ

ಭೋಗನಂದೀಶ್ವರ ದೇವಾಲಯದಲ್ಲಿ ಕೇವಲ ದಿಕ್ಪಾಲಕರು ಮಾತ್ರ ಇದ್ದಾರೆ ಇದರಂತೆ ಅವನಿಯ ಲಕ್ಷ್ಮಣೇಶ್ವರ ದೇವಾಲಯದ ವಿತಾನದಲ್ಲಿ ಕೂಡ ಇಂತಹುದೇ ರೀತಿಯಲ್ಲಿ ಕೇವಲ ದಿಕ್ಪಾಲಕರು ಮಾತ್ರ ಕಂಗೊಳಿಸುತ್ತಾರೆ. ಯಾವ ಹೆಚ್ಚಿನ ಅಲಂಕರಣಗಳೂ ಇಲ್ಲದ ಈ ಶಿಲ್ಪಗಳು ಅತ್ಯಂತ ಸರಳ ಹಾಗೂ ಸುಂದರವಾಗಿ ಕಂಗೊಳಿಸುತ್ತವೆ. ಇಲ್ಲಿ ಅವರ ಸತಿಯರಿಲ್ಲ, ಉಮಾಮಹೇಶ್ವರರ ತಲೆದೆಸೆಯಿಂದ ಆರಂಭವಾಗುವಂತೆ ಅಷ್ಟದಿಕ್ಪಾಲಕರ ಶಿಲ್ಪಗಳು ಇಂತಿವೆ. ಪಶ್ಚಿಮ ದಿಕ್ಕಿನಲ್ಲಿ ವರುಣನು ತನ್ನ ವಾಹನವಾದ ಮಕರದ ಮೇಲೆ ಕುಳಿತಿದ್ದಾನೆ. ವಾಯುವ್ಯ ದಿಕ್ಕಿನಲ್ಲಿ ವಾಯುವು ತನ್ನ ವಾಹನವಾದ ಜಿಂಕೆಯ ಮೇಲೆ ಕುಳಿತಿದ್ದಾನೆ. ಉತ್ತರದಲ್ಲಿ ಕುಬೇರನು ತನ್ನ ವಾಹನವಾದ ಕುದುರೆಯ ಮೇಲೆ ಕುಳಿತಿದ್ದಾನೆ. ಈಶಾನ್ಯದಲ್ಲಿ ಈಶನು ತನ್ನ ವಾಹನವಾದ ನಂದಿಯ ಮೇಲೆ ಕುಳಿತಿದ್ದಾನೆ. ಪಾದದ ದೆಸೆಯಲ್ಲಿ ಪೂರ್ವದಲ್ಲಿ ಇಂದ್ರನು ತನ್ನ ವಾಹನವಾದ ಐರಾವತವೆಂಬ ಆನೆಯ ಮೇಲೆ ಕುಳಿತಿದ್ದಾನೆ. ಆಗ್ನೇಯದಲ್ಲಿ ಅಗ್ನಿಯು ತನ್ನ ವಾಹನವಾದ ಟಗರಿನ ಮೇಲೆ ಕುಳಿತಿದ್ದಾನೆ. ದಕ್ಷಿಣದಲ್ಲಿ ಯಮನು ತನ್ನ ವಾಹನವಾದ ಕೋಣದ ಮೇಲೆ ಕುಳಿತಿದ್ದಾನೆ. ನೈರುತ್ಯದಲ್ಲಿ ನಿರುತಿಯು ತನ್ನ ವಾಹನವಾದ ನರನ ಮೇಲೆ ಕುಳಿತಿದ್ದಾನೆ.

ಈ ಅಷ್ಟದಿಕ್ಪಾಲಕರು ತಮ್ಮ ತಮ್ಮ ಎಡಗೈಗಳನ್ನು ಪತಾಕ ಹಸ್ತ ಮುದ್ರೆಯಲ್ಲಿ ಇಟ್ಟುಕೊಂಡು ತಮ್ಮ ತಮ್ಮ ಬಲಗೈಯಲ್ಲಿ ತಮ್ಮ ತಮ್ಮ ಆಯುಧಗಳನ್ನು ಹಿಡಿದಿದ್ದಾರೆ. ಶಿಲ್ಪವು ಮಾತ್ರ ಮುಖ್ಯವಾದ ಭೂಮಿಕೆಯನ್ನು ವಹಿಸಿಕೊಂಡಿದ್ದು ಉಳಿದಂತೆ ಯಾವುದೇ ಅಲಂಕರಣಗಳನ್ನು ಹೊಂದಿಲ್ಲ. ಭೋಗನಂದೀಶ್ವರ ದೇವಾಲಯದ ಗೂಢಮಂಟಪದಲ್ಲಿ ಒಟ್ಟು ನಾಲ್ಕು ಬಿಡಿಶಿಲ್ಪಗಳನ್ನು ಇಡಲಾಗಿದೆ. ಅವುಗಳಲ್ಲಿ ನಮ್ಮ ಎಡಗಡೆಯಲ್ಲಿ ಅಂತರಾಳದ ಗೋಡೆಗೆ ಒರಗಿಸಿ ಗೂಢಮಂಪಟದಲ್ಲಿ ಇಟ್ಟಿರುವ ಗಣಪತಿಯ ಶಿಲ್ಪವು ವಿಶೇಷವಾಗಿದೆ. ಎರಡನೆಯದು ಗೂಢಮಂಟಪಕ್ಕೆ ಗಾಳಿ ಬೆಳಕುಗಳು ಬರಲು ಎಡಗಡೆಯಲ್ಲಿ ಒಂದು ಜಾಲಂಧ್ರವನ್ನು ಮಾಡಲಾಗಿದೆ. ಈ ಜಾಗದಲ್ಲಿ ಆಗಿರುವ ಗೂಡಿನಲ್ಲಿ ಒಂದು ವಿಶಿಷ್ಟವಾದ ಶಿಲ್ಪವನ್ನು ಇಡಲಾಗಿದೆ. ಇದನ್ನು ಬಹುತೇಕ ವಿದ್ವಾಂಸರು ಜೋಳರಾಜನ ಶಿಲ್ಪವೆಂದು ದಾಖಲಿಸುತ್ತಾರೆ.

ಇದೊಂದು ಪುರುಷ ಶಿಲ್ಪ, ರಾಜಶಿಲ್ಪದ ಯಾವ ಲಕ್ಷಣಗಳೂ ಕಾಣುತ್ತಿಲ್ಲ. ಪದ್ಮಾಸನದಲ್ಲಿ ಕುಳಿತಿರುವ ಈತನು ತನ್ನ ಎಡಗೈಯನ್ನು ತೊಡೆಯ ಮೇಲೆ ಇಟ್ಟುಕೊಂಡು ತನ್ನ ಬಲಗೈಯನ್ನು ತನ್ನ ಎದೆಯ ಮೇಲೆ ಇಟ್ಟುಕೊಂಡು ಧ್ಯಾನಸ್ಥ ಭಂಗಿಯಲ್ಲಿ ಕುಳಿತಿದ್ದಾನೆ. ತಲೆಯು ಬೋಳಾಗಿದ್ದು ಯಾವುದೇ ರೀತಿಯ ಆಭರಣಗಳನ್ನು ಹೊಂದಿಲ್ಲದ ಈ ಶಿಲ್ಪದ ಭುಜಗಳಿಗೆ ಮಾತ್ರ ಭುಜಪಟ್ಟಿಕೆಯನ್ನು ಅಳವಡಿಸಲಾಗಿದೆ. ಕಿವಿಗಳಲ್ಲಿರುವ ರಂಧ್ರವು ಆತನಿಗೆ ಕಿವಿಗೆ ಯಾವುದಾದರೂ ಆಭರಣಗಳನ್ನು ತೊಡಿಸಲು ಮಾಡಿರಬಹುದು. ಜನಿವಾರದ ಬದಲಿಗೆ ಒಂದು ಬಟ್ಟೆಯ ಪಟ್ಟಿಯನ್ನು ಧರಿಸಿದ್ದಾನೆ. ಬಹುಶಃ ಇದು ಯಾವುದೋ ಶೈವಯತಿಯಾಗಿರಬಹುದು. ಇದು ಚೋಳರಾಜನಾಗಿದ್ದಾನೆ ಎಂಬ ಕಥೆ ಎಂದಿನಿಂದ ಹುಟ್ಟಿಕೊಂಡಿತೋ ತಿಳಿದುಬರುವುದಿಲ್ಲ. ನೊಳಂಬವಾಡಿಯ ದೇವಾಲಯಗಳನ್ನು ನಾಶಗೊಳಿ ಅವುಗಳ ಅವಯವಗಳನ್ನು ಇಲ್ಲಿಂದ ರವಾನಿಸಿ ಚೋಳಮಂಡಲದಲ್ಲಿ ದೇವಾಲಯಗಳನ್ನು ರೂಪಿಸಿಕೊಂಡ ಪ್ರಾಯಶ್ಚಿತ್ತವಾಗಿ ಇಲ್ಲಿ ಆತನ ಪ್ರತಿಮೆಯನ್ನು ಪ್ರತಿಷ್ಠಾಪಿಸಲಾಗಿದೆ ಎಂಬ ವಾದದಲ್ಲಿ ಯಾವುದೇ ಅಧಿಕೃತತೆಯಾಗಲೀ ವಿಶೇಷತೆಯಾಗಲೀ ಕಂಡು ಬರುವುದಿಲ್ಲ. ಬದಲಿಗೆ ಇದೊಂದು ಶೈವ ಯತಿಯ ಶಿಲ್ಪವಾಗಿರಬಹುದು.

ನಮ್ಮ ಬಲಗಡೆಯಲ್ಲಿ ಕೆಳಗೆ ಇಟ್ಟಿರುವ ವಿಷ್ಣುವಿನ ಪ್ರತಿಮೆ ನೊಳಂಬರ ಕಾಲಕ್ಕೆ ಸೇರುವುದೋ ಅಥವಾ ನಂತರದ ಕಾಲದ್ದೋ ಎಂಬ ಪ್ರಶ್ನೆಯನ್ನು ಇಟ್ಟುಕೊಂಡೂ ಅದರ ಪ್ರತಿಮಾಲಕ್ಷಣಗಳನ್ನು ವಿವರಿಸುವುದಾದರೆ ಈ ವಿಷ್ಣುವು ಚತುರ್ಭುಜನಾಗಿದ್ದು ತನ್ನ ಮೇಲಿನ ಎರಡು ಕೈಗಳಲ್ಲಿ ಚಕ್ರ ಮತ್ತು ಶಂಖಗಳನ್ನು ಹೊಂದಿದ್ದರೆ ಕೆಳಗಿನ ಎಡಹಸ್ತವು ಕಟಿಹಸ್ತವಾಗಿದ್ದರೆ ಕೆಳಗಿನ ಬಲಗೈ ಅಭಯಹಸ್ತವಾಗಿದೆ. ಸರ್ವಾಭರಣ ಸುಂದರವಾಗಿರುವ ಈ ವಿಷ್ಣುಶಿಲ್ಪವು ಅತ್ಯಂತ ಸುಂದರವಾಗಿದೆ.

ಗೂಢಮಂಟಪದ ಬಲಗಡೆಯಲ್ಲಿ ದುರ್ಗೆಯ ಶಿಲ್ಪವನ್ನು ಇಡಲು ಮಾಡಿರುವ ಜಾಲಂಧ್ರದ ಗೂಡಿನಲ್ಲಿ ನೊಳಂಬರ ಕಾಲದ ಅತ್ಯಂತ ಸುಂದರವಾದ ಸೂರ್ಯನ ಶಿಲ್ಪವನ್ನು ಇರಿಸಲಾಗಿದೆ. ತನ್ನ ಎರಡೂ ಕೈಗಳಲ್ಲಿ ಕಮಲಪುಷ್ಪವನ್ನು ಹಿಡಿದಿರುವ ಸೂರ್ಯನ ಕೆಳಗೆ ಪೀಠದ ಭಾಗದಲ್ಲಿ ಸಪ್ತಾಶ್ವಗಳನ್ನು ಕೆತ್ತಲಾಗಿದೆ.

ಗೂಢಮಂಟಪದ ಬಾಗಿಲುವಾಡ

ಭೋಗನಂದೀಶ್ವರ ದೇವಾಲಯದ ಗೂಢ ಮಂಟಪದ ಬಾಗಿಲುವಾಡವು ಅತ್ಯಂತ ಸುಂದರವಾಗಿದೆ.

ಮುಂದುವರೆಯುವುದು.....

ಎಲ್ಲರೂ ಶಿಕ್ಷಣ ಪಡೆಯಬೇಕು

ಕ್ರಿ.ಶ. 12ನೇ ಶತಮಾನದ ಶಿವಶರಣರ ಪ್ರಕಾರ, ಲಿಂಗಾಯತ ಸಮುದಾಯವು ಸರ್ವಾಂಗೀಣ ಅಭಿವೃದ್ಧಿಯನ್ನು ಸಾಧಿಸಬೇಕಾದರೆ ಶಿಕ್ಷಣವು ಪ್ರತಿಯೊಬ್ಬರಿಗೂ ತಲುಪಬೇಕು. ಶಿಕ್ಷಣದ ಮೂಲಕವೇ ಸಮಾಜ ಮತ್ತು ಅದರ ಜನರ ಪ್ರಗತಿ ಹಾಗೂ ಉನ್ನತಿಯನ್ನು ಸಾಧಿಸಲು ಸಾಧ್ಯ. ಇದು ಕಲ್ಯಾಣದಲ್ಲಿ ಕ್ರಿ.ಶ. 12ನೇ ಶತಮಾನದ ಶಿವಶರಣರು ವ್ಯಕ್ತಪಡಿಸಿದ ಪ್ರಮುಖ ಅಭಿಪ್ರಾಯವಾಗಿದೆ. ಕವಿ ಸರ್ವಜ್ಞರು ಶಿಕ್ಷಣದ ಮಹತ್ವವನ್ನು ಸರಳವಾದರೂ ಪರಿಣಾಮಕಾರಿಯಾದ ಚಿಂತನೆಯ ಮೂಲಕ ವ್ಯಕ್ತಪಡಿಸಿದ್ದಾರೆ: ವಿದ್ಯಾವಂತ ವ್ಯಕ್ತಿಯ ಮುಖದಲ್ಲಿ ಘನತೆ ಪ್ರತಿಫಲಿಸುತ್ತದೆ; ಆದರೆ ಅನಕ್ಷರಸ್ಥ ವ್ಯಕ್ತಿಯ ಮುಖದಲ್ಲಿ ಆ ಆತ್ಮವಿಶ್ವಾಸ ಮತ್ತು ಕಳೆ ಕಾಣಿಸುವುದಿಲ್ಲ. ಶಿಕ್ಷಣದ ಮಹತ್ವವು ಇಂದು ಅಥವಾ ನಿನ್ನೆಯ ವಿಷಯವಲ್ಲ. ಪ್ಲೇಟೋನ ಗುರುವಾದ ಸಾಕ್ರಟೀಸನ ಕಾಲದಿಂದಲೂ ಹಾಗೂ ಕ್ರಿ.ಶ. 12ನೇ ಶತಮಾನದ ಶಿವಶರಣರ ಕಾಲದಿಂದಲೂ ಶಿಕ್ಷಣವು ಮಾನವ ಜೀವನದಲ್ಲಿ ಮಹತ್ವದ ಪಾತ್ರ ವಹಿಸಿದೆ. ಪ್ಲೇಟೋ ಅವರನ್ನು ಕೇವಲ ರಾಜಕೀಯ ಚಿಂತಕರಾಗಿ ಮಾತ್ರವಲ್ಲದೆ, ಶಿಕ್ಷಣದ ಕುರಿತಾದ ಮಹಾನ್ ಚಿಂತಕರಾಗಿಯೂ ಪರಿಗಣಿಸಲಾಗುತ್ತದೆ.

ಶಿಕ್ಷಣದಿಂದಲೇ ಸಮರ್ಥ ಆಡಳಿತಗಾರರು ಮತ್ತು ಉತ್ತಮ ನಾಗರಿಕರನ್ನು ರೂಪಿಸಬಹುದು ಹಾಗೂ ಅನೇಕ ರಾಜಕೀಯ ಮತ್ತು ಸಾಮಾಜಿಕ ಸಮಸ್ಯೆಗಳನ್ನು ಶಿಕ್ಷಣದ ಮೂಲಕ ಪರಿಹರಿಸಬಹುದು ಎಂದು ಶಿವಶರಣರು ನಂಬಿದ್ದರು. ಶಿಕ್ಷಣವು ಸಮಾಜದಲ್ಲಿ ಸಮಗ್ರ ಶಾಂತಿಯನ್ನು ಸೃಷ್ಟಿಸಬಲ್ಲದು. ಉತ್ತಮ ನಡವಳಿಕೆ ಮತ್ತು ನೈತಿಕ ಮೌಲ್ಯಗಳನ್ನು ಪ್ರದರ್ಶಿಸುವ, ಸರಿ ಮತ್ತು ತಪ್ಪನ್ನು ಗುರುತಿಸಿ ವಿಶ್ಲೇಷಿಸಬಲ್ಲ ನಾಗರಿಕರು ಸಮಾಜದ ಆಸ್ತಿಯಾಗಿದ್ದಾರೆ. ಇಂತಹ ಸಂಪೂರ್ಣ ಮತ್ತು ಜವಾಬ್ದಾರಿಯುತ ನಾಗರಿಕರ ಸೃಷ್ಟಿ ಶಿಕ್ಷಣದ ಮೂಲಕ ಸಾಧ್ಯ. ಶಿವಶರಣರು, "ಶಿಕ್ಷಣವೆಂದರೆ ಮಾನವ ಜೀವನದಲ್ಲಿನ ಪರಿಪೂರ್ಣ ತೆಯ ಅಭಿವ್ಯಕ್ತಿ" ಎಂದು ಹೇಳಿದ್ದಾರೆ. ಈ ಮಾತು ಎಲ್ಲ ಕಾಲಕ್ಕೂ, ಎಲ್ಲ ಸಮಾಜಗಳಿಗೂ ಸಾರ್ವತ್ರಿಕವಾಗಿ ಅನ್ವಯಿಸುತ್ತದೆ. ಲಿಂಗಾಯತ ಸಮುದಾಯವೂ ಇದಕ್ಕೆ ಹೊರತಾಗಿಲ್ಲ.



ಮಲ್ಲೇಶಪ್ಪ ಟಿ.ಎಸ್.
ತಮ್ಮಡಿಹಳ್ಳಿ ಚಿಕ್ಕನಾಯಕನಹಳ್ಳಿ
ತಾಲ್ಲೂಕು, ತುಮಕೂರು ಜಿಲ್ಲೆ.
ಮೊ : 8050074810, 9380939580

ಲಿಂಗಾಯತ ಸಮುದಾಯವನ್ನು, ವಿಶೇಷವಾಗಿ ಕರ್ನಾಟಕ, ಕೇರಳ, ತಮಿಳುನಾಡು ಮತ್ತು ಆಂಧ್ರಪ್ರದೇಶದ ದಕ್ಷಿಣ ರಾಜ್ಯಗಳಲ್ಲಿ ನೋಡಿದಾಗ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಔದ್ಯೋಗಿಕ ದೃಷ್ಟಿಯಿಂದ ಅದು ಐತಿಹಾಸಿಕವಾಗಿ ಹಿಂದುಳಿದ ಸಮುದಾಯವಾಗಿಯೇ ಉಳಿದಿದೆ. ಆದ್ದರಿಂದ ಸಮುದಾಯದ ಪ್ರತಿಯೊಬ್ಬ ಸದಸ್ಯರೂ ಶಿಕ್ಷಣದ ಮಹತ್ವವನ್ನು ಅರ್ಥಮಾಡಿಕೊಳ್ಳಬೇಕು. ಶಿಕ್ಷಣದ ಪ್ರಯೋಜನವು ಪ್ರತಿಯೊಂದು ಸಮಾಜ, ಪ್ರತಿಯೊಂದು ಮನೆ ಮತ್ತು ಪ್ರತಿಯೊಬ್ಬ ಕುಟುಂಬ ಸದಸ್ಯನಿಗೂ ತಲುಪಬೇಕು.

ವೈದಿಕ ಕಾಲದಲ್ಲಿ ಶಿಕ್ಷಣವು ಮುಖ್ಯವಾಗಿ ಸಮಾಜದ ಮುಂದುವರಿದ ವರ್ಗಗಳ, ವಿಶೇಷವಾಗಿ ಬ್ರಾಹ್ಮಣರ, ಸವಲತ್ತಾಗಿತ್ತು. ಆ ಕಾಲದಲ್ಲಿ ಜನರ ಸಾಮಾಜಿಕ ವರ್ಗೀಕರಣವು ಕೇವಲ ಜನ್ಮದ ಆಧಾರದ ಮೇಲೆ ಅಲ್ಲದೆ ಅವರು ಮಾಡುತ್ತಿದ್ದ ಕೆಲಸಕ್ಕೆ ಸಂಬಂಧಿಸಿದ್ದಾಗಿತ್ತು. ವೈದಿಕ ಅಧ್ಯಯನ ಮತ್ತು ಧಾರ್ಮಿಕ ಕರ್ತವ್ಯಗಳಲ್ಲಿ ತೊಡಗಿದ್ದವರನ್ನು ಬ್ರಾಹ್ಮಣ ವರ್ಗದವರು ಎಂದು ಗುರುತಿಸಲಾಗುತ್ತಿತ್ತು; ದೇಶವನ್ನು ರಕ್ಷಿಸುವ ಜವಾಬ್ದಾರಿ ಹೊಂದಿದ್ದವರು ಕ್ಷತ್ರಿಯರು; ವ್ಯಾಪಾರದಲ್ಲಿ ತೊಡಗಿದ್ದವರು ವೈಶ್ಯರು; ಸೇವಾ ಆಧಾರಿತ ಕೆಲಸಗಳನ್ನು ಮಾಡುತ್ತಿದ್ದವರನ್ನು ಶೂದ್ರ ವರ್ಗದಲ್ಲಿ ಇರಿಸಲಾಗುತ್ತಿತ್ತು. ಲಿಂಗಾಯತ ಸಮುದಾಯದ ಸದಸ್ಯರೂ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿದ್ದರೂ, ಕಾಲಕ್ರಮೇಣ ವ್ಯವಸ್ಥೆಯಲ್ಲಿ ಬದಲಾವಣೆಗಳು ಉಂಟಾಗಿ ವೃತ್ತಿ ವಿಭಾಗಗಳು ಹೆಚ್ಚು ಹೆಚ್ಚು ವಂಶ ಪಾರಂಪರ್ಯವಾಗುತ್ತಿದ್ದಂತೆ ಅವರು ಕೆಳಮಟ್ಟದ ಸಾಮಾಜಿಕ ಸ್ಥಾನಕ್ಕೆ ಸಂಬಂಧಿಸಲ್ಪಟ್ಟರು. ಇಂತಹ ಸಮುದಾಯಗಳ ಅನೇಕ ಪ್ರತಿಭಾವಂತರು ತಮ್ಮ ಸಾಮಾಜಿಕ ಸ್ಥಾನಮಾನದಿಂದಾಗಿ ಕಷ್ಟ ಮತ್ತು ತಾರತಮ್ಯವನ್ನು ಅನುಭವಿಸಬೇಕಾಯಿತು. ಹಿಂದಿನ ಕಾಲದಲ್ಲಿ ಸಮಾಜವು ಧಾರ್ಮಿಕ ಭಯ ಮತ್ತು ಕಟ್ಟುನಿಟ್ಟಿನ ಆಚರಣೆಗಳಿಂದ ಆಳವಾಗಿ ಪ್ರಭಾವಿತವಾಗಿದ್ದಾಗ, ಪುರೋಹಿತರು, ಸಾಂಪ್ರದಾಯಿಕ ಪದ್ಧತಿಗಳು ಮತ್ತು ಸಂಸ್ಥೆಗಳು ಸಾಮಾಜಿಕ ಜೀವನದ ಅನೇಕ ಅಂಶಗಳನ್ನು ನಿಯಂತ್ರಿಸುತ್ತಿದ್ದವು.

ಆದರೆ ಇಂದು ಹಿಂದೆ ಸಾಂಪ್ರದಾಯಿಕ ವೃತ್ತಿಗಳಿಗೆ ಸೀಮಿತವಾಗಿದ್ದ ಸಮುದಾಯಗಳ ಜನರು ಆಧುನಿಕ ವೃತ್ತಿಗಳಿಗೆ ಪ್ರವೇಶಿಸಿ ವಿಜ್ಞಾನಿಗಳು, ಇಂಜಿನಿಯರ್ಗಳು ಮತ್ತು ಆಡಳಿತಗಾರರಾಗುತ್ತಿದ್ದಾರೆ. ಜನಸಂಖ್ಯೆ ತುಲನಾತ್ಮಕವಾಗಿ ಕಡಿಮೆಯಿದ್ದರೂ ಅವರು ಮಹತ್ವದ ಹುದ್ದೆಗಳನ್ನೂ ಅಲಂಕರಿಸುತ್ತಿದ್ದಾರೆ.

ನಾವು ಕೇವಲ ನಮ್ಮ ಸಾಂಪ್ರದಾಯಿಕ ವೃತ್ತಿಗಳನ್ನೇ ಅವಲಂಬಿಸಿಕೊಂಡು ಮುಂದುವರಿದಿದ್ದರೆ ಇಂತಹ ಸಾಧನೆಗಳು ಸಾಧ್ಯವಾಗುತ್ತಿತ್ತೇ? ಇದನ್ನು ನಾವು ಗಂಭೀರವಾಗಿ ಪರಿಗಣಿಸಬೇಕು. ಇಂದಿನ ಕೃಷಿ ಉತ್ಪಾದನೆ ಮತ್ತು ವ್ಯಾಪಾರುಕಟ್ಟೆಯು ಸಾಂಪ್ರದಾಯಿಕ ವೃತ್ತಿಯನ್ನೇ ಅವಲಂಬಿಸಿಕೊಂಡು ಲಿಂಗಾಯತ ಸಮುದಾಯ ಉಳಿಯುಬಾರದು. ಪ್ರತಿಯೊಂದು ಕ್ಷೇತ್ರದಲ್ಲೂ ಉದ್ಯೋಗಾವಕಾಶಗಳನ್ನು ಸೃಷ್ಟಿಸಬೇಕು. ಒಂದು ವೃತ್ತಿ ಸಹಜವಾಗಿಯೇ ಕೀಳಾಗಿದೆ ಎಂಬುದು ವಿಚಾರವಲ್ಲ: ಚಮ್ಮಾರನಿಂದ ಹಿಡಿದು ವಿಜ್ಞಾನಿಯವರೆಗೆ, ಕೆಲಸವೇ ಪೂಜೆ ಮತ್ತು ಪ್ರತಿಯೊಂದು ಪ್ರಾಮಾಣಿಕ ಕೆಲಸಕ್ಕೂ ಗೌರವವಿದೆ. ಬಸವಣ್ಣನವರು ಬೋಧಿಸಿದಂತೆ, ನಾವು ಮಾಡುವ ಯಾವುದೇ ಕೆಲಸವನ್ನು ಸಮರ್ಪಣಾಭಾವದಿಂದ ಮಾಡಿದಾಗ ಅದು ಅರ್ಥಪೂರ್ಣವಾಗುತ್ತದೆ. ಅದೇ ಸಮಯದಲ್ಲಿ ಸಮಾಜವು ವೇಗವಾಗಿ ಬದಲಾಗುತ್ತಿದೆ. ಇಂದಿನ ಆಧುನಿಕ ಜಗತ್ತಿನಲ್ಲಿ ಸಾಂಪ್ರದಾಯಿಕ ಕೃಷಿಯನ್ನೇ ಅನಿರ್ದಿಷ್ಟವಾಗಿ ಅವಲಂಬಿಸುವುದರಿಂದ ಎಲ್ಲರಿಗೂ ಸುರಕ್ಷಿತ ಭವಿಷ್ಯವನ್ನು ಒದಗಿಸಲು ಸಾಧ್ಯವಿಲ್ಲ. ಆದ್ದರಿಂದ ಪರ್ಯಾಯ ಅವಕಾಶಗಳನ್ನು ಕಂಡುಕೊಳ್ಳುವ ಅಗತ್ಯ ಹೆಚ್ಚುತ್ತಿದೆ. ಉತ್ತಮ ಶಿಕ್ಷಣ ಮತ್ತು ಉತ್ತಮ ಚಿಂತನೆ ಇಂತಹ ಬದಲಾವಣೆಗೆ ಭದ್ರ ಬುನಾದಿಯನ್ನು ಒದಗಿಸಬಹುದು.

ಶಿಕ್ಷಣವೊಂದೇ ನಮ್ಮ ಸಮುದಾಯದ ದೃಷ್ಟಿಕೋನವನ್ನು ಬದಲಿಸಿ ಅದಕ್ಕೆ ಹೊಸ ದಿಕ್ಕನ್ನು ನೀಡುವ ಶಕ್ತಿಯನ್ನು ಹೊಂದಿದೆ. ನಮ್ಮ ಜನರನ್ನು ಮುಂದಕ್ಕೆ ಮುನ್ನಡೆಸಬಲ್ಲ ಶಿಕ್ಷಣ ನಮಗೆ ಅಗತ್ಯ. ಪ್ರತಿಯೊಬ್ಬ ಲಿಂಗಾಯತರೂ ವಿದ್ಯಾವಂತರಾಗಬೇಕು. ಸಮುದಾಯದ ವಿದ್ಯಾರ್ಥಿಗಳಿಗಾಗಿ ನಮ್ಮ ನಾಯಕರು ವಸತಿ ನಿಲಯಗಳು, ಶಾಲೆಗಳು, ಕಾಲೇಜುಗಳು ಮತ್ತು ತಾಂತ್ರಿಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಮುಂದಾಗಬೇಕು. ನಮ್ಮ ಸಂಘಟನೆಗಳು ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವನ್ನೂ ನೀಡಬೇಕು. ಲಿಂಗಾಯತ ಸಮುದಾಯದ ವಿದ್ಯಾವಂತ ಸದಸ್ಯರು ಅಧ್ಯಯನ ಮಾಡುತ್ತಿರುವ ಮಕ್ಕಳಿಗೆ ಮಾರ್ಗದರ್ಶಕ ದೀಪಗಳಾಗಬೇಕು. ವಿದ್ಯಾರ್ಥಿಗಳಿಗೆ ಉಚಿತ ತರಬೇತಿ ಕೇಂದ್ರಗಳು ಮತ್ತು ವಸತಿ ನಿಲಯಗಳನ್ನು ಒದಗಿಸುವುದರ ಜೊತೆಗೆ ಬ್ಯಾಂಕ್ ಪರೀಕ್ಷೆಗಳು, UPSC, KPSC, ರೈಲ್ವೆ, ಸಿಬ್ಬಂದಿ ಮತ್ತು ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡಬೇಕು. ಸಮುದಾಯದ ವಿದ್ಯಾವಂತ ಸದಸ್ಯರು ತಮ್ಮ ಬಿಡುವಿನ ಸಮಯವನ್ನು ವಿದ್ಯಾರ್ಥಿಗಳಿಗೆ ಬೆಂಬಲ ಮತ್ತು ಮಾರ್ಗದರ್ಶನ ನೀಡಲು ಬಳಸಬಹುದು. ಈಗಾಗಲೇ ನಮ್ಮ ಸಮುದಾಯಕ್ಕೆ ಹೆಮ್ಮೆ ತಂದಿರುವ ಗಣ್ಯ ಪುತ್ರರು ಮತ್ತು ಪುತ್ರಿಯರನ್ನು ನಾವು ಗೌರವಿಸಬೇಕು. ಅವರ ಸಾಧನೆಗಳನ್ನು ಗುರುತಿಸಿ, ಅವರನ್ನು ಪ್ರೋತ್ಸಾಹಿಸಿ, ಅವರ ಜ್ಞಾನವನ್ನು ಸಮಾಜದ ಹಿತಕ್ಕಾಗಿ ಬಳಸಿಕೊಳ್ಳಬೇಕು. ನಮ್ಮ ವಿದ್ಯಾವಂತ ಸದಸ್ಯರ ಸಾಧನೆಗಳು ಇಡೀ ಸಮುದಾಯವನ್ನು ತಲುಪಿ ಪ್ರೇರೇಪಿಸುವಂತೆ ನಾವು ಒಟ್ಟಾಗಿ ಕೆಲಸ ಮಾಡೋಣ.

ನಾವು ರೈತರು, ಉದ್ಯಮಿಗಳು ಮತ್ತು ಉದ್ಯೋಗ ಸೃಷ್ಟಿಸುವವರಾಗೋಣ. ಕೃಷಿ ಆಧಾರಿತ ಕೈಗಾರಿಕೆಗಳು, ಸಣ್ಣ ಮತ್ತು ಮಧ್ಯಮ ಗಾತ್ರದ ಕಾರ್ಖಾನೆಗಳು ಹಾಗೂ ವ್ಯವಹಾರಗಳನ್ನು ಅಭಿವೃದ್ಧಿಪಡಿಸುವ ಮೂಲಕ ನಿರುದ್ಯೋಗಿ ಯುವಕರಿಗೆ ಅವಕಾಶಗಳನ್ನು ಸೃಷ್ಟಿಸಬಹುದು. ಸಮುದಾಯದ ಸದಸ್ಯರು ವೈದ್ಯಕೀಯ ಕ್ಷೇತ್ರಕ್ಕೆ ಪ್ರವೇಶಿಸಿ ರೋಗಗಳನ್ನು ಗುಣಪಡಿಸುವ ವೈದ್ಯರಾಗಲು, ಅದ್ಭುತ ತಂತ್ರಜ್ಞಾನಗಳನ್ನು ಸೃಷ್ಟಿಸಬಲ್ಲ ಇಂಜಿನಿಯರ್ಗಳಾಗಲು, ಕೃಷಿಯಲ್ಲಿ ಹೊಸ ಆವಿಷ್ಕಾರಗಳನ್ನು ತರಬಲ್ಲ ವಿಜ್ಞಾನಿಗಳಾಗಲು, ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಿ ಯುವ ಪೀಳಿಗೆಯನ್ನು ಸಬಲೀಕರಿಸುವ ಶಿಕ್ಷಕರಾಗಲು ಪ್ರೋತ್ಸಾಹಿಸಬೇಕು. ಲಿಂಗಾಯತ ಶಿವಶರಣರು ಮತ್ತು ಗುರುಗಳ ಮಠಗಳು ಬಡತನ ರೇಖೆಗಿಂತ ಕೆಳಗಿರುವ ಲಿಂಗಾಯತ ಸಮುದಾಯದ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಅಗತ್ಯವಾದ ಸಂಪನ್ಮೂಲಗಳನ್ನು ಒದಗಿಸಬೇಕು. ಮಹತ್ತರ ಎತ್ತರಗಳನ್ನು ತಲುಪಲು ಸಿದ್ಧರಾಗಿರುವ, ಮಿತಿಗಳನ್ನು ಮೀರಿ ಕನಸು ಕಾಣುವ ಧೈರ್ಯಶಾಲಿ ಗಳಾಗೋಣ. ಹಳೆಯ ಯುಗವು ಕಳೆಯುತ್ತಿದೆ ಮತ್ತು ಹೊಸ ಯುಗ ಉದಯಿಸುತ್ತಿದೆ; ಹಳೆಯ ಜೀವನ ವಿಧಾನವು ಹೊಸದಕ್ಕೆ ದಾರಿ ಮಾಡಿಕೊಡುತ್ತಿದೆ. ಹಳತಾದ ನಂಬಿಕೆಗಳ ಕೊಳೆತ ಅವಶೇಷಗಳನ್ನು ಹಿಂದೆ ಬಿಟ್ಟು, ಜ್ಞಾನ ಮತ್ತು ವೈಜ್ಞಾನಿಕ ಚಿಂತನೆಯ ಹೊಸ ಚೈತನ್ಯವು ಸಮಾಜದೊಳಗೆ ಹರಿಯಲು ಅವಕಾಶ ನೀಡುವುದು ನಮ್ಮ ಕರೆಯಾಗಿದೆ. ಹಳೆಯ, ಕಠಿಣ ನಂಬಿಕೆಗಳ ಮರೀಚಿಕೆಯಲ್ಲಿ ಉತ್ತರಗಳನ್ನು ಹುಡುಕುತ್ತಾ ನಮ್ಮ ಸ್ವಾತಂತ್ರ್ಯ ಮತ್ತು ಪ್ರಗತಿಯನ್ನು ಕಳೆದುಕೊಳ್ಳಬಾರದು.

ನಾವು ನಮ್ಮ ಧ್ವನಿಗಳನ್ನು ಎತ್ತಿ ಹೊಸ ಜೀವನದ ಗೀತೆಯನ್ನು ಹಾಡೋಣ; ಅದು ಎಲ್ಲ ದಿಕ್ಕುಗಳಲ್ಲೂ ಹರಡಲಿ. ನಾವು ಒಟ್ಟಾಗಿ ಮುಂದೆ ಸಾಗಿದರೆ ನಮ್ಮನ್ನು ತಡೆಯಬಲ್ಲವರು ಯಾರೂ ಇರುವುದಿಲ್ಲ. ಸಮಾಜಕ್ಕೆ ಪ್ರಗತಿಯತ್ತ ಸಾಗುವ ಸ್ಪಷ್ಟ ದಾರಿಯನ್ನು ತೋರಿಸೋಣ.

15ನೇ ಸೆಪ್ಟೆಂಬರ್ 2026, ವಿಶ್ವ ಅಂತರಾಷ್ಟ್ರೀಯ ಪ್ರಜಾಪ್ರಭುತ್ವದ ದಿನ

ವಿವೇಕಾನಂದ ಎಚ್.ಕೆ.
9844013068/9663750451

ಸಂವಿಧಾನದ ಆಶಯಗಳು ಇರುವುದು ಕೇವಲ ಓದುವುದಕ್ಕಾಗಿಯಲ್ಲ, ಅದನ್ನು ಕಾಯಾ ವಾಚಾ ಮನಸಾ ಅನುಸರಿಸಲಿಕ್ಕಾಗಿ. ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ, ಮಾಧ್ಯಮ ರಂಗದ ಎಷ್ಟು ಜನರಿಗೆ ಅದನ್ನು ಹೇಳುವ ಅರ್ಹತೆ, ಯೋಗ್ಯತೆ, ನೈತಿಕತೆ ಇದೆ ಎಂಬುದು ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಪ್ರಶ್ನೆ. ಶೇಕಡಾ 80% ರಾಜಕಾರಣಿಗಳು, ಶೇಕಡಾ 85% ಸರ್ಕಾರಿ ಅಧಿಕಾರಿಗಳು, ಶೇಕಡಾ 70% ಮತದಾರರು, ಶೇಕಡಾ 60% ವಿವಿಧ ವೃತ್ತಿಪರರು, ಶೇಕಡಾ 50% ಧಾರ್ಮಿಕ ಮುಖಂಡರು, ಶೇಕಡಾ 40% ನ್ಯಾಯಾಂಗ ವ್ಯವಸ್ಥೆ ಒಂದಲ್ಲ ಒಂದು ರೀತಿಯಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಭ್ರಷ್ಟಾಚಾರ ಮಾಡುತ್ತಾರೆ. ಉಳಿದ ಕೆಲವರು ಆರ್ಥಿಕ ಭ್ರಷ್ಟಾಚಾರ ಮುಕ್ತವಾಗಿದ್ದರು ಧಾರ್ಮಿಕ, ಮೌಢ್ಯ, ಸುಳ್ಳುಗಳಂತ ಮಾನಸಿಕ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ.

ಸಂವಿಧಾನದ ಮೂಲ ಆಶಯವಾದ ವ್ಯಕ್ತಿ ಸ್ವಾತಂತ್ರ್ಯ, ದೇಶದ ಸಾರ್ವಭೌಮತ್ವ, ಜನಾಂಗೀಯ ಸೌಹಾರ್ದತೆ, ಧರ್ಮ ನಿರಪೇಕ್ಷತೆ, ವೈಜ್ಞಾನಿಕ ಮನೋಭಾವ ಇದಕ್ಕೆ ಬಹುತೇಕ ವಿರುದ್ಧವಾಗಿ ಬದುಕುತ್ತಿರುವವರೇ ಹೆಚ್ಚಾಗಿದ್ದಾರೆ. ಇಂತಹ ಸಂದರ್ಭದಲ್ಲಿ ಎಲ್ಲಾ ದಿನಾಚರಣೆಗಳು ಒಂದು ಮನರಂಜನಾ ಪ್ರಹಸನದಂತೆ ಕಾಣುತ್ತಿದೆ. ಒಂದು ಟೇಬಲ್‌ನಿಂದ ಇನ್ನೊಂದು ಟೇಬಲ್‌ಗೆ ಫೈಲ್ ವರ್ಗಾವಣೆಯಾಗಲು, ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಅಧಿಕಾರಿಗಳು ವರ್ಗಾವಣೆಯಾಗಲು, ಉದ್ಯೋಗ, ಪ್ರಶಸ್ತಿ, ಅಧಿಕಾರ ಪಡೆಯಲು, ಹುಟ್ಟು ಸಾವಿನ ಸರ್ಟಿಫಿಕೇಟ್ ಪಡೆಯಲು ಹೀಗೆ ಪ್ರತಿ ನಿಮಿಷವೂ ಕೋಟಿಗಳ ಲೆಕ್ಕದಲ್ಲಿ ಲಂಚಾವತಾರದ ನಾಟಕ ನಡೆಯುತ್ತಿರುತ್ತದೆ. ಭಾರತದ ಶೇಕಡಾ 50ಕ್ಕೂ ಹೆಚ್ಚು ಎಲ್ಲಾ ಜನ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಚುನಾವಣಾ ಪ್ರಕ್ರಿಯೆಯಲ್ಲಿ ತಾತ, ಅಪ್ಪ, ಮಕ್ಕಳ ವಂಶಪಾರಂಪರ್ಯ ಆಡಳಿತ ಈಗಲೂ ಮುಂದುವರೆಯುತ್ತಿದೆ. ಆ ವಂಶಪಾರಂಪರ್ಯ ಆಯ್ಕೆಯಲ್ಲೂ ಶೇಕಡಾ 90ರಷ್ಟು ಜಾತಿಯ ಪ್ರಭಾವವಿರುವುದು ಅಷ್ಟೇ ವಾಸ್ತವ. ಈ ದೇಶದ ನ್ಯಾಯಾಂಗ ವ್ಯವಸ್ಥೆಯಲ್ಲಿ ಶೇಕಡಾ 80%ರಷ್ಟು ನ್ಯಾಯವು ಉಳ್ಳವರ ಪರವಾಗಿಯೇ ಇರುತ್ತದೆ. ಅದಕ್ಕೆ ಕಾರಣಗಳು ಏನೇ ಇರಲಿ ಆದರೆ ಅಪರಾಧಿಗಳಿಗೆ ಹೆಚ್ಚು ಅನುಕೂಲಕರ ನೆರಳನ್ನು ಒದಗಿಸುವುದು ನ್ಯಾಯಾಲಯಗಳು. ಅಪರಾಧಿಗಳಿಗೆ ಆಗುವ ಶಿಕ್ಷೆಯ ಪ್ರಮಾಣ ಮತ್ತು ನಿರಪರಾಧಿಗಳು ಅನುಭವಿಸುವ ಯಾತನೆಯ ಪ್ರಮಾಣವನ್ನು ಅನುಭವದ ಆಧಾರದ ಮೇಲೆ ಗ್ರಹಿಸುವ ಮೂಲಕ ಇದನ್ನು ದೃಢಪಡಿಸಬಹುದು.

ಇಷ್ಟೆಲ್ಲಾ ಸಮಸ್ಯೆಗಳ ನಡುವೆಯೂ ಭಾರತದ ಪ್ರಜಾಪ್ರಭುತ್ವ ಯಶಸ್ಸಿನ ಹಾದಿಯಲ್ಲಿದೆ ಎಂದು ಹೇಳಬಹುದು. ಆದರೆ ಅದಕ್ಕೆ ಒಂದಷ್ಟು ರಿಪೇರಿ ಮಾಡಬೇಕಿದೆ. ಮುಖ್ಯವಾಗಿ ಸಮಗ್ರ ಚಿಂತನೆಯ ಜಾಗೃತ ಮನಸ್ಸಿನ ಮತದಾರರನ್ನು ಸೃಷ್ಟಿಸಬೇಕಿದೆ. ಆ ಮೂಲಕ ಒಳ್ಳೆಯ ಜನ ಪ್ರತಿನಿಧಿಗಳು ಆಯ್ಕೆಯಾದರೆ ಮೊದಲನೆಯ ಹಂತದ ಸುಧಾರಣೆ ಸಾಧ್ಯವಾಗುತ್ತದೆ. ಅದು ಸಾಧ್ಯವಾದಲ್ಲಿ ಕಾರ್ಯಾಂಗದ ಮೇಲೆ ಹಿಡಿತ ಸಾಧಿಸಬಹುದು. ಆಗ ಇತರೆ ಅಂಗಗಳು ಸರಿದಾರಿಗೆ ಬರುತ್ತದೆ. ಮಾನವ ಇತಿಹಾಸದ ಎಲ್ಲಾ ಆಡಳಿತಾತ್ಮಕ ಪ್ರಯೋಗಗಳ ನಂತರ ಪ್ರಜಾಪ್ರಭುತ್ವ ವ್ಯವಸ್ಥೆಯೇ ಇರುವುದರಲ್ಲಿ ಇಂದಿಗೆ ಉತ್ತಮ ವ್ಯವಸ್ಥೆ ಎಂದು ಸಾಬೀತಾಗಿದೆ. ಆದರೆ ವಿವೇಚನೆ ಇರುವ ಮತದಾರರು ಇದ್ದಾಗ ಮಾತ್ರ ಈ ವ್ಯವಸ್ಥೆ ಸರಿಯಾಗಿ ಕಾರ್ಯನಿರ್ವಹಿಸುತ್ತದೆ. ಇಲ್ಲದಿದ್ದರೆ ಪ್ರಜಾಪ್ರಭುತ್ವ ಹೆಸರಿನ ರಾಜಪ್ರಭುತ್ವ ಅಥವಾ ವಿವಿಧ ಶೋಷಣಾ ರೂಪದ ಸರ್ವಾಧಿಕಾರಿ ಆಡಳಿತವೇ ಪರೋಕ್ಷವಾಗಿ ನಮ್ಮನ್ನು ನಿಯಂತ್ರಿಸುತ್ತದೆ.

ಗ್ರೀಕ್‌ನ ಅಥೆನ್ಸ್‌ನಿಂದ ಭಾರತದ ದೆಹಲಿಯವರೆಗೆ ಪ್ರಜಾಪ್ರಭುತ್ವ ನಡೆದ ಹಾದಿ ಭಾರತೀಯರಾದ ನಾವು ಪ್ರಜೆಗಳಿಂದ ಪ್ರಜೆಗಳಿಗಾಗಿ ಪ್ರಜೆಗಳೇ ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡಿಕೊಂಡು ಪ್ರಜೆಗಳೇ ನಡೆಸುವ ಆಡಳಿತ ಪ್ರಜಾಪ್ರಭುತ್ವ, ಅದಕ್ಕೆ ಸಂವಿಧಾನವೆಂಬ ನೀತಿ ನಿಯಮಗಳ ಪುಸ್ತಕ ಮಾರ್ಗದರ್ಶನ ಮಾಡುತ್ತದೆ. ಅನಾಗರಿಕ ವ್ಯವಸ್ಥೆಯಿಂದ ಬಲಿಷ್ಠನೊಬ್ಬನ ನಾಯಕತ್ವ, ಪ್ರದೇಶದ ಒಡೆತನ, ಸಮುದಾಯಗಳ ಮುಖಂಡತ್ವ, ಧಾರ್ಮಿಕ ನಾಯಕತ್ವ, ರಾಜ ಪ್ರಭುತ್ವ, ಸರ್ವಾಧಿಕಾರ, ಸೈನಿಕ ಆಡಳಿತ, ಕಮ್ಯುನಿಸ್ಟ್–ಸೋಷಿಯಲಿಸ್ಟ್ ಅಧಿಕಾರ, ಪ್ರಜಾಪ್ರಭುತ್ವ ಹೀಗೆ ಅನೇಕ ಪ್ರಯೋಗಗಳು ಮಾನವ ಇತಿಹಾಸದಲ್ಲಿ ಜನರ ಕಲ್ಯಾಣಕ್ಕಾಗಿ ಬೆಳೆದು ಬಂದಿದೆ. ಆ ಎಲ್ಲಾ ಪ್ರಯೋಗಗಳ

ಫಲಿತಾಂಶಗಳ ಆಧಾರದ ಮೇಲೆ ಹೇಳುವುದಾದರೆ ನಾಗರಿಕ ಸಮಾಜಕ್ಕೆ ಪ್ರಜಾಪ್ರಭುತ್ವ ವ್ಯವಸ್ಥೆಯೇ ಇಲ್ಲಿಯವರೆಗಿನ ಅನುಭವದಲ್ಲಿ ಅತ್ಯಂತ ಉತ್ತಮ ಆಡಳಿತ ವಿಧಾನ. ಅದು ಇನ್ನಷ್ಟು ಸುಧಾರಿಸಬೇಕು ಎಂಬುದು ನಿಜ. ಪ್ರಜೆಗಳು ವಿವೇಚನಾ ಶೀಲರು ಮತ್ತು ಒಳ್ಳೆಯವರಾದರೆ ಪ್ರಜಾಪ್ರಭುತ್ವ ಮತ್ತಷ್ಟು ಆರೋಗ್ಯಕರವಾಗಿ ಬಲಗೊಳ್ಳುತ್ತದೆ.

ಗ್ರೀಕ್‌ನ ಅಥೆನ್ಸ್ ನಗರದ ಒಂದು ಮೈದಾನದಲ್ಲಿ ಜನರೆಲ್ಲಾ ಸೇರಿ ಕೈ ಎತ್ತುವ ಮೂಲಕ ತಮ್ಮ ಪ್ರತಿನಿಧಿಯನ್ನು ಆಯ್ಕೆ ಮಾಡುವ ಪ್ರಕ್ರಿಯೆಯ ಮೂಲಕ ಪ್ರಜಾಪ್ರಭುತ್ವದ ಆಡಳಿತ ವ್ಯವಸ್ಥೆ ಪ್ರಾರಂಭವಾಯಿತು ಎಂದು ಇತಿಹಾಸದಲ್ಲಿ ದಾಖಲಾಗಿದೆ. ಭಾರತದಲ್ಲಿ ನನಗೆ ಲಭ್ಯವಿರುವ ಮಾಹಿತಿಯ ಪ್ರಕಾರ 12ನೆಯ ಶತಮಾನದಲ್ಲಿ ಬಸವಣ್ಣನವರು ಪ್ರಾರಂಭಿಸಿದ ಅನುಭವ ಮಂಟಪ ಪ್ರಜಾಪ್ರಭುತ್ವದ ಮಾದರಿಯಲ್ಲಿಯೇ ಕಾರ್ಯನಿರ್ವಹಿಸುತ್ತಿತ್ತು ಎಂದು ಹೇಳಲಾಗುತ್ತದೆ. ಅದು ಅನುಭವ ಮಂಟಪಕ್ಕೆ ಮಾತ್ರ ಸೀಮಿತವಾಗಿತ್ತು. ಬಿಜ್ಜಳನ ಆಡಳಿತ ರಾಜ ಪ್ರಭುತ್ವವನ್ನು ಹೊಂದಿತ್ತು. ಬ್ರಿಟೀಷರು ಭಾರತವನ್ನು ಸಂಪೂರ್ಣ ಆಕ್ರಮಿಸಿದ ನಂತರ ಅನೇಕ ಪ್ರಾಂತೀಯ ಒಕ್ಕೂಟಗಳನ್ನು ಒಗ್ಗೂಡಿಸಿ ಕೆಲವೊಂದು ಚುನಾವಣೆ ಮತ್ತು ನಾಮಕರಣದ ಮೂಲಕ ಜನ ಪ್ರಾತಿನಿಧ್ಯವನ್ನು ನೀಡುವ ನಿಯಂತ್ರಿತ ಪ್ರಜಾಪ್ರಭುತ್ವವನ್ನು ಭಾರತದಲ್ಲಿ ಜಾರಿಗೆ ತಂದರು.

1947 ಆಗಸ್ಟ್ 15ರ ನಂತರ ಭಾರತ ಸ್ವಾತಂತ್ರ್ಯ ಪಡೆದರು ನಿಜವಾದ ಸಂವಿಧಾನಾತ್ಮಕ ಸಂಸದೀಯ ಪ್ರಜಾಪ್ರಭುತ್ವ ಜಾರಿಯಾಗಿದ್ದು ಜನವರಿ 26, 1950. ಹಾಗೆಯೇ ಪ್ರಜಾಪ್ರಭುತ್ವದ ಭದ್ರ ಬುನಾದಿಯಾದ ಸಾರ್ವತ್ರಿಕ ಚುನಾವಣೆ ನಡೆದದ್ದು 1951/52 ಸುಮಾರು 77 ವರ್ಷಗಳಿಂದ ಭಾರತದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಜಾರಿಯಲ್ಲಿದೆ. ಈ ಮಧ್ಯೆ ಭಾರತದ ಕರಾಳ ಇತಿಹಾಸದಲ್ಲಿ ಒಂದಾದ 1977ರ ತುರ್ತುಪರಿಸ್ಥಿತಿಯನ್ನು ಸಹ ಇಲ್ಲಿ ನೆನಪಿಸಿಕೊಳ್ಳಬೇಕು. ಅದನ್ನು ಹೊರತುಪಡಿಸಿ ಬಹುತೇಕ ನಿಯಮಗಳ ಪ್ರಕಾರವೇ ಆಡಳಿತ ನಡೆಯುತ್ತಿದೆ. ಮೋಸ ವಂಚನೆ ಶಾಸಕರ ಕುದುರೆ ವ್ಯಾಪಾರ ಭ್ರಷ್ಟಾಚಾರ ಕೋಮುವಾದಗಳು ಇದ್ದರೂ ಸಹ ಅಂಕಿಅಂಶಗಳ ಪ್ರಕಾರ ಬಹುಮತ ಹೊಂದಿರುವವರೇ ಅಧಿಕಾರ ನಡೆಸುತ್ತಿದ್ದಾರೆ. ಆ ಮಟ್ಟಿಗೆ ಪ್ರಜಾಪ್ರಭುತ್ವ ಬಲಿಷ್ಠವಾಗಿದೆ. ಹಾಗೆಯೇ ಎಷ್ಟೇ ಬಲಿಷ್ಠ ಸರ್ಕಾರವಾದರು ನ್ಯಾಯಾಂಗ ವ್ಯವಸ್ಥೆಗೆ ಬಹುತೇಕ ಬೆಲೆ ಕೊಡುತ್ತದೆ. ಒಟ್ಟಿನಲ್ಲಿ ಭಾರತದ ಪ್ರಜಾಪ್ರಭುತ್ವ ವಿಶ್ವಕ್ಕೆ ಒಂದು ಮಾದರಿ.

ತಾಂತ್ರಿಕವಾಗಿ ಒಂದು ಮಾದರಿ ಎಂಬುದು ನಿಜ. ಆದರೆ ವಾಸ್ತವದಲ್ಲಿ ತುಂಬಾ ಹೆಮ್ಮೆ ಪಡುವಂತೇನೂ ಇಲ್ಲ. ಸುಮಾರು 60 ವರ್ಷಗಳ ಕಾಲ ಮತದಾರರು ಗುಲಾಮಿ ಮನಸ್ಥಿತಿಯ ಪ್ರಭಾವಕ್ಕೆ ಒಳಗಾಗಿದ್ದರೆ ಕಳೆದ 15 ವರ್ಷಗಳಲ್ಲಿ ಭಕ್ತ ಸಂಸ್ಕೃತಿ ತಲೆ ಎತ್ತಿದೆ. ಎರಡೂ ಒಂದೇ ನಾಣ್ಯದ ಎರಡು ಮುಖಗಳಷ್ಟೇ. ಪ್ರತಿಯೊಂದನ್ನು ಒಪ್ಪಿಕೊಳ್ಳುತ್ತಾ, ಸಮರ್ಥಿಸುತ್ತಾ, ತಮ್ಮ ಅನುಕೂಲಕರ ವಾದ ಮಂಡಿಸಿ ಜನಪ್ರಿಯತೆ ಗಳಿಸುವ ಸ್ವಾರ್ಥ ಎದ್ದು ಕಾಣುತ್ತದೆ. ದೇಶ ಹಾಳಾದರೂ ಪರವಾಗಿಲ್ಲ ತನ್ನ ವಿಚಾರಧಾರೆಯ ಪಕ್ಷ ಅಧಿಕಾರಕ್ಕೆ ಬಂದರೆ ಸಾಕು ಅದಕ್ಕೆ ಯಾವ ಮಾರ್ಗವಾದರು ಸರಿ ಎಂಬ ಕೆಟ್ಟ ಮನಸ್ಥಿತಿ ಬೆಳವಣಿಗೆ ಹೊಂದಿದೆ. ಇದು ಪ್ರಜಾಪ್ರಭುತ್ವಕ್ಕೆ ಮಾರಕವಾಗುತ್ತಿದೆ. ವಿಶ್ವ ಪ್ರಜಾಪ್ರಭುತ್ವ ದಿನದಂದು ಸಂವಿಧಾನ ಪೀಠಿಕೆ ಓದುವುದರ ಜೊತೆಗೆ ನಮ್ಮ ನಡವಳಿಕೆಗಳಲ್ಲಿ ಸಹ ಪ್ರಜಾಪ್ರಭುತ್ವದ ಅಂಶಗಳನ್ನು ಅಳವಡಿಸಿಕೊಳ್ಳುವ ಪ್ರಯತ್ನ ಮಾಡಬೇಕು. ಮುಖ್ಯವಾಗಿ ಅತ್ಯಂತ ಸರಳವಾದ ಕೆಲವು ಗುಣಗಳನ್ನು ಅನುಸರಿಸಬೇಕು.....

ಜನ, ದೇಶ ಮತ್ತು ಸಂವಿಧಾನ ಅತ್ಯಂತ ಮಹತ್ವದ್ದು. ಅದಕ್ಕೆ ಗೌರವ ಪ್ರೀತಿ ಮಾನ್ಯತೆ ಮತ್ತು ಮೊದಲ ಆದ್ಯತೆ ನೀಡುತ್ತೇನೆ. ಸಂಯಮ, ಸಹಕಾರ, ಪ್ರೀತಿ, ಸಹಬಾಳ್ವೆ ಇವುಗಳು ದಿನನಿತ್ಯದ ಬದುಕಿನ ಚಟುವಟಿಕೆಗಳ ಭಾಗವಾಗಿರುವಂತೆ ನೋಡಿಕೊಳ್ಳುತ್ತೇನೆ. ಭ್ರಷ್ಟಾಚಾರ, ಜಾತಿ ವ್ಯವಸ್ಥೆ, ಸ್ತ್ರೀ ಶೋಷಣೆ, ಚುನಾವಣಾ ಅಕ್ರಮ ಇವುಗಳಲ್ಲಿ ಭಾಗಿಯಾಗದಂತೆ ಎಚ್ಚರಿಕೆ ವಹಿಸುತ್ತೇನೆ. ಗಾಳಿ, ನೀರು, ಆಹಾರ ಮಲಿನವಾಗಲು ಉದ್ದೇಶಪೂರ್ವಕವಾಗಿ ನಾನು ಕಾರಣನಾಗದಿರುವಂತೆ ಎಚ್ಚರಿಕೆ ವಹಿಸುತ್ತೇನೆ. ನನ್ನೊಳಗೆ ಮಾನವೀಯ ಮೌಲ್ಯಗಳು ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳು ಸದಾ ಜಾಗೃತವಾಗಿರುವಂತೆ ಅರಿವಿನ ಅಂತರದಲ್ಲಿ ಸದಾ ಜೀವಿಸುತ್ತೇನೆ. ಭಾರತದ ಪ್ರಜೆಯಾದ ನಾನು ಸಂವಿಧಾನದ ಪೀಠಿಕೆಯಲ್ಲಿರುವ ಆಶಯವನ್ನು ಓದುತ್ತೇನೆ ಮತ್ತು ಅರ್ಥಮಾಡಿಕೊಳ್ಳುತ್ತೇನೆ ಹಾಗು ಅದೇ ರೀತಿ ನನ್ನ ನಡವಳಿಕೆ ರೂಪಿಸಿಕೊಳ್ಳಲು ಪ್ರಯತ್ನಿಸುತ್ತೇನೆ. ನನ್ನ ಹಕ್ಕು ಮತ್ತು ಕರ್ತವ್ಯಗಳ ಬಗ್ಗೆ ಸದಾ ಜಾಗೃತನಾಗಿರುತ್ತೇನೆ. ನನಗೆ ದೊರೆತಿರುವ ಎಲ್ಲಾ ಸ್ವಾತಂತ್ರ್ಯವನ್ನು ಇನ್ನೊಬ್ಬರಿಗೆ ತೊಂದರೆಯಾಗದಂತೆ ನಿಯಂತ್ರಿತ ರೀತಿಯಲ್ಲಿ ಮತ್ತು ಪ್ರಜ್ಞಾಪೂರ್ವಕವಾಗಿ ಅನುಭವಿಸುತ್ತೇನೆ. ಈ ಜನ ಈ ದೇಶ ನನ್ನದು, ನಿಮ್ಮದು, ನಮ್ಮೆಲ್ಲರದು ಎಂಬ ಅರಿವನ್ನು ಸದಾ ಜಾಗೃತವಾಗಿಟ್ಟಿರುತ್ತೇನೆ. ಭಾರತದ ಪ್ರಜೆಗಳೆಲ್ಲರು ನನ್ನ

29ನೇ ಪುಟಕ್ಕೆ.....

ವಚನ ಚಳುವಳಿ

ಭರತ ಖಂಡದಲ್ಲಿ ನೂರಾರು ಭಾಷೆಗಳು ಬಳಕೆಯಲ್ಲಿರುವುದು ಕಂಡು ಬರುತ್ತದೆ. ಅವುಗಳಲ್ಲಿ ಹದಿನೆಂಟು ಭಾಷೆಗಳು ಮಾತ್ರ ಅಧಿಕೃತ ಭಾಷೆಗಳೆಂದು ಮನ್ನಣೆ ಪಡೆದಿವೆ. ಅವುಗಳಲ್ಲಿ ಕನ್ನಡವೂ ಒಂದು. ಕನ್ನಡ ನಾಡು ನುಡಿಗಳಂತೆ ನಮ್ಮ ಸಾಹಿತ್ಯವೂ ಶಕಪೂರ್ವದಷ್ಟು ಪ್ರಾಚೀನವಾದುದ್ದೆಂದು ಪಂಡಿತರ ಅಭಿಪ್ರಾಯ. ದಿ॥ ಪ್ರೊ. ವೆಂಕಣ್ಣಯ್ಯನವರ ಮಾತಿನಲ್ಲಿ ಹೇಳುವುದಾದರೆ ಬೌದ್ಧರೇ ಕನ್ನಡ ಭಾಷೆಗೆ ಆದಿ ಕವಿಗಳು. ಆದರೆ ಬೌದ್ಧ ಮತದೊಂದಿಗೆ ಬೌದ್ಧ ಗ್ರಂಥಗಳೂ ನಾಶವಾದವು. ಕನ್ನಡ ಸಾಹಿತ್ಯ ಸಾಕಷ್ಟು ಪುರಾತನವಾದ ಸಾಹಿತ್ಯ, ಕನ್ನಡದ ಮೇಲೆ ಸಂಸ್ಕೃತದ ಪ್ರಭಾವ ಬೇಕಾದಷ್ಟು ಆಗಿರುವುದು ಕಂಡುಬಂದಿದೆ. ನಮಗೆ ದೊರಕಿರುವ ಮಾಹಿತಿಯಂತೆ 'ಕವಿರಾಜ ಮಾರ್ಗ' ಮೊಟ್ಟಮೊದಲ ಉಪಲಬ್ಧ ಗ್ರಂಥ. ಇದಕ್ಕಿಂತಲೂ ಮೊದಲು ಕನ್ನಡ ಸಾಹಿತ್ಯ ವಿಪುಲವಾಗಿ ಬೆಳೆದಿತ್ತೆಂಬುದು ನಿರ್ಮಿವಾದ.

ಕನ್ನಡ ಸಾಹಿತ್ಯದ ಇತಿಹಾಸ ಸಹಸ್ರ ವರ್ಷಗಳಿಗಿಂತಲೂ ಹೆಚ್ಚು ವಿಸ್ತಾರವಾಗಿದೆ. ಕನ್ನಡ ಸಾಹಿತ್ಯ ಚರಿತ್ರೆಕಾರರು ಕನ್ನಡ ಸಾಹಿತ್ಯವನ್ನು ಮೂರು ಭಾಗಗಳನ್ನಾಗಿ ವಿಂಗಡಿಸಿರುತ್ತಾರೆ. ಅದರಲ್ಲಿ ಲಿಂಗಾಯತ ಯುಗ 12ನೆಯ ಶತಮಾನದ ಮಧ್ಯದಿಂದ 15ನೆಯ ಶತಮಾನದವರೆಗೆ, ಪಂಪಪೂರ್ವ ಯುಗದಿಂದ ಹಿಡಿದು 'ಕುಮಾರವ್ಯಾಸ ಯುಗ'ದ ಮಧ್ಯದಲ್ಲಿ ಬರುವ ಬಸವಯುಗ ಅಥವಾ ವಚನಯುಗ ವಿಶ್ವಧರ್ಮವನ್ನು, ಸಾಹಿತ್ಯದೊಂದಿಗೆ ಬೆರೆಸಿ ಒಂದು ಚಳುವಳಿಯನ್ನು ಜನಸಾಮಾನ್ಯರ ಬದುಕಿನೊಂದಿಗೆ ಬೆರೆತು ಇಂದಿಗೂ ಪ್ರಸ್ತುತವಾಗಿ ಉಳಿದು ಬೆಳೆದು ಬಂದಿತು.

ಸಾಹಿತ್ಯದ ಇತಿಹಾಸದ ಪುಟಗಳನ್ನು ತಿರುವಿದರೆ ರಾಜಮಹಾರಾಜರ ಆಶ್ರಯವನ್ನು ಪಡೆದ, ಆಸ್ಥಾನದ ಕವಿಗಳಾಗಿ ಕೃತಿ ರಚನೆ ಮಾಡಿದವರೇ ಹೆಚ್ಚು ಪಾಂಡಿತ್ಯ ಹೆಪ್ಪುಗಟ್ಟಿ ಕುಳಿತಿದ್ದ ಅಂದಿನ ಕಾವ್ಯಗಳು ಜನಸಾಮಾನ್ಯರ ತಲುಪುವಂತಿರಲಿಲ್ಲ. ಹನ್ನೊಂದನೆಯ ಶತಮಾನದಲ್ಲಿ ಚೋಳರ ದಾಳಿಗೆ ಸಿಕ್ಕ ಕಳೆಗುಂದಿ ಹೋದ ಜೈನಮತ ಮತ್ತು ಮೊದಲಿನಂತೆ ಕಾಂತಿಯನ್ನು ಪಡೆಯಲಿಲ್ಲ. ವೈದಿಕಮತ ಕೇವಲ ಡಾಂಬಿಕತನ, ಅರ್ಥಹೀನ ಆಚಾರ, ಜಾತೀಯತೆಗಳಿಗೆ ಸೀಮಿತವಾಗಿರುವುದು ಕಂಡುಬರುತ್ತಿದೆ. 'ವಚನ' ಎಂದರೆ ಮಾತು ಎಂದರ್ಥ, ಶಿವಶರಣ ಬೋಧೆಯನ್ನು ವಚನವೆಂದು ಕರೆದಿದ್ದಾರೆ. ವಚನ ಒಂದು ಅಧ್ಯಾತ್ಮಶಾಸ್ತ್ರ ಎಂಬ ಅರ್ಥದಲ್ಲಿ ಬಳಸುತ್ತಿದ್ದೇವೆ. ಯಾವುದೋ ಒಂದು ವರ್ಗಕ್ಕೆ ಮೀಸಲಾಗಿದ್ದ ಭಾಷೆ ಜನಸಾಮಾನ್ಯರಲ್ಲಿ ಮುಟ್ಟುವಂತೆ ಮಾಡಲು ಹೊರಟ ಬೌದ್ಧರು, ಜೈನರು ಸಫಲವಾಗಲಿಲ್ಲ. ಅದನ್ನು ನಿಜವಾಗಿ ಸಾಧಿಸಿದವರು ವಚನಕಾರರು. ಮಹತ್ತಾದ ತತ್ವಗಳನ್ನು ತಿಳಿಯಾದ ಮಾತಿನಲ್ಲಿ ಜನಸಾಮಾನ್ಯರನ್ನು ಮುಟ್ಟುವಂತೆ ಹೇಳುವ ಈ ವಚನಗಳನ್ನು 'ಕನ್ನಡ ಉಪನಿಷತ್ತು' ಎಂದು ಕರೆದಿದ್ದಾರೆ.

ಶಕ್ತಿವಿಶಿಷ್ಟಾದ್ವೈತ ಮತಸ್ಥಾಪಕರಾದ ಬಸವಣ್ಣನವರ ಸಾರಥ್ಯದಲ್ಲಿ ಲಿಂಗಾಯತವು ಸರ್ವಸಮತೆಯನ್ನು ವಚನ ಚಳುವಳಿಯ ಮೂಲಕ ಎಲ್ಲಾ ಜಾತಿ, ಮತ, ಪಂಥದವರೂ ಉದ್ಧಾರವಾಗುವುದಕ್ಕೆ ಶಕ್ತಿಯನ್ನು ನೀಡಿತು. ವಚನಕಾರರು ಸತ್ಯೋಪಾಸಕರಾದ ಸಾಧಕರು. ಆದ್ದರಿಂದ ವಚನವಾಙ್ಮಯ ವಚನಶಾಸ್ತ್ರವಾಯಿತು. ಕಿರಿದರಲ್ಲಿ ಹಿರಿದನ್ನು, ಅಲ್ಪದಲ್ಲಿ ಕಲ್ಪವನ್ನು ನೋಡಬೇಕೆಂದರೆ ವಚನಗಳಿಗೆ ಹೋಗಬೇಕು. ವಚನ ಚಳುವಳಿಯ ಮೂಲ ಉದ್ದೇಶ ಸಮಾಜದಲ್ಲಿ ಸಮಾನತೆ ತರುವುದು. 'ಕಾಯಕವೇ ಕೈಲಾಸ' ಆ ಕಾರ್ಯದಲ್ಲಿ ಕೀಳು ಮೇಲುಗಳಿಲ್ಲ. ಕಟ್ಟಿಗೆ ಮಾಡುವವನು, ಹಗ್ಗ ಹೊಸೆಯುವವನು, ಚಪ್ಪಲಿ ಹೊಲಿಯುವವನು, ಆಗಸ, ಬೇಡ, ಸ್ತ್ರೀ ಶುದ್ರರೂ ವೇದವನ್ನೋದುವ ಬ್ರಾಹ್ಮಣನಷ್ಟೆ ಮುಖ್ಯ ಎಂದು ಸಾರಿತು.

ಮನುಷ್ಯನ ಜಾತಿಗಿಂತ, ನುಡಿಗಿಂತ ನಡೆ ಮುಖ್ಯ. ಶೀಲಶುದ್ಧರಾದವರು ಕೀಳು ಜಾತಿಯಾಗಿದ್ದರೂ ವಚನ ಚಳುವಳಿಯಿಂದ ಸಂತರ ಪಟ್ಟವನ್ನು ಪಡೆಯುತ್ತಾರೆ.



ಕತ್ತಿಗೆ ಚನ್ನಪ್ಪ
ಸಾಹಿತ್ಯಧಾರೆ, ಸಿದ್ಧರಾಮ ಬಡಾವಣೆ
ಶಿವಮೊಗ್ಗ. ಮೊ : 9844572572

"ಇಳೆ ನಿಮ್ಮ ದಾನ, ಬೆಳೆ ನಮ್ಮ ದಾನ
ಸುಳಿದು ಬೀಸುವ ವಾಯು ನಿಮ್ಮದಾನ,
ನಿಮ್ಮ ದಾನವನುಂಡು ಅನ್ಯರ ಹೊಗಳುವ
ಕುನ್ನಿಗಳನೇನೆಂಬೆ ರಾಮನಾಥಾ"

ದೇವರ ದಾಸಿಮಯ್ಯ ಮೊಟ್ಟ ಮೊದಲ ವಚನಕಾರ. ಮೆಳೆಯ ಮೇಲೆ ಕಲ್ಲನಿಕ್ಕಿ ಮೆಳೆ ಭಕ್ತನಾಗಬಲ್ಲುದೇ? ಸಕಲೇಶ ಮಾದರಸ, ಅದ್ವಿತೀಯ ವಚನಕಾರ ಬಸವಣ್ಣನವರಿಗಿಂತ

ಹಿರಿಯ ಅರಸನಾಗಿದ್ದು, ವೈರಾಗ್ಯದಿಂದ ರಾಜ್ಯವನ್ನು ತ್ಯಜಿಸಿ ಬಸವಣ್ಣನವರನ್ನು ಅನುಸರಿಸಿದನು. ಹೀಗೆ ದೇವರ ದಾಸಿಮಯ್ಯ ಮೊದಲುಗೊಂಡು ವಚನಕಾರರ ಪಟ್ಟಿ ಬೃಹದಾಕಾರವಾಗಿ ಬೆಳೆಯುತ್ತಿದೆ. ಶಿವಶರಣರು ಕಾವ್ಯಮಯವಾದ ಗದ್ಯದಲ್ಲಿ ತಮ್ಮ ವಚನಗಳನ್ನು ಜನಪರ ಸಾಹಿತ್ಯವಾಗಿ ಕಟ್ಟಿಹಾಕತೊಡಗಿದರು. ವಚನ ಚಳುವಳಿಯಲ್ಲಿ ಪ್ರಭುದೇವರ ಮೊದಲ್ಗೊಂಡು ಎಲ್ಲಾ ಕೆಳವೃತ್ತಿಯನ್ನು ಅವಲಂಭಿಸಿದರವರನ್ನು ಬಸವಣ್ಣ ಒಂದೆಡೆ ಸೇರುವಂತೆ ಅನುಭವ ಮಂಟಪ ಸ್ಥಾಪನೆ ಮಾಡಿದನು.

ಅಂಗಜಂಗುಳಿಗಳೆಲ್ಲ ಅಶನಕ್ಕೆ ನೆರೆದರು,
ಲಿಂಗದ ಹವಣನಿವರತ್ತಬಲ್ಲರು ?
ಕಾಯ ಜೀವಿಗಳು ಕಳವಳಧಾರಿಗಳು
ದೇವರ ಸುದ್ದಿಯನಿವರೆತ್ತಬಲ್ಲರು ?
ಮದ್ಯಪಾನವನುಂಡು ಮದವೆದ್ದ ಜೋಗಿಯಂತೆ
ನುಡಿದವರು, ಮಹೇಶ್ವರನ ನಿಲುವನಿವರೆತ್ತಬಲ್ಲರು ?

ಮನುಷ್ಯ ತನ್ನ ಮಹತ್ಕಾರ್ಯಗಳ ಸೋಪಾನಗಳಿಂದ ದೇವ ಕ್ಷೇರುತ್ತಾನೆ ಎಂಬ ಬಸವಣ್ಣನವರ ಮಾತು ನೂರಕ್ಕೆ ನೂರು ಸತ್ಯ. ಶರಣರು ಆಡಿದಂತೆ ನಡೆದವರು. ನಡೆದಂತೆ ಬದುಕಿದವರು, ವಚನವೆಂದರೆ ಸದಾಚಾರಸ್ವತಿಗಳು ಆವು ಎಷ್ಟು ಸರಳ. ಎಷ್ಟು ಸುಲಭ, ಎಷ್ಟು ಲಲಿತ;

ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ,
ಮುನಿಯಬೇಡ, ಅನ್ಯರಿಗೆ ಅಸಯ್ಯಪಡಬೇಡ
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ,
ಇದೇ ಅಂತರಂಗಶುದ್ಧಿ; ಇದೇ ಬಹಿರಂಗ ಶುದ್ಧಿ;
ಇದೇ ನಮ್ಮ ಕೂಡಲಸಂಗನೊಲಿಸುವ ಪರಿ.

ಕೊಲ್ಲುವವನೇ ಮಾದಿಗ, ಹೊಲಸು ತಿಂಬುವವನೇ ಹೊಲೆಯ, ದೇವನೊಬ್ಬ ನಾಮ ಹಲವು ಪರಮ ಪತಿವ್ರತೆಗೆ ಗಂಡನೊಬ್ಬ ಹೀಗೆ ಸರಳ ಸುಲಲಿತ ಭಾಷೆಯಲ್ಲಿ ವಚನಕಾರರು ವಚನಗಳನ್ನು ರಚಿಸುವುದರ ಮೂಲಕ ಜನಸಾಮಾನ್ಯರನ್ನು ತಮ್ಮ ಹತ್ತಿರಕ್ಕೆ ಸೆಳೆದರು. ಅನಕ್ಷರಸ್ಥರ ಮನಮುಟ್ಟಿದರು, ಕದ ತಟ್ಟಿದರು. ಅನುಭವ ಮಂಟಪದ ಆಧಾರಸ್ತಂಭದಂತೆ ಇರುವವನು, ಲಿಂಗಾಚಾರ ನಿರೂಪಣೆಗೆ ಚನ್ನಬಸವಣ್ಣ ಪ್ರಸಿದ್ಧನಾಗಿದ್ದಾನೆ. ಹಲವಾರು ದೇವಾಲಯಗಳನ್ನು, ಕೆರೆಗಳನ್ನು ಕಟ್ಟಿಸಿ, ಪವಾಡಗಳನ್ನು ಮೆರೆದು ಸಿದ್ದರಾಮನನ್ನು ಪ್ರಭುದೇವರು ತನ್ನತ್ತ ಸೆಳೆದು. ಅಂದು ಜನಸಾಮಾನ್ಯರೊಂದಿಗೆ ಕರ್ಮಯೋಗದಲ್ಲಿ ನಿರತನಾಗಿದ್ದ ಸಿದ್ಧರಾಮನನ್ನು ಅನುಭವ ಮಂಟಪಕ್ಕೆ ಬರುವಂತೆ ಪ್ರೇರೇಪಿಸಿದರು. ಕರ್ಮಯೋಗಿಯಾಗಿದ್ದ ಈತನು ಪ್ರಭುದೇವನ ಪ್ರಭಾವದಿಂದ ಜ್ಞಾನಯೋಗಿಯ ಮಟ್ಟಕ್ಕೆ ಏರಿದವನೆಂದು ತೋರುತ್ತದೆ.

ಬಸವಣ್ಣನು ಸರ್ವಸಮಾನತೆಯನ್ನು ಸಾರಿ ಸಮಾಜವನ್ನು ವರ್ಣ, ಜಾತಿರಹಿತ ಸಮಾಜವನ್ನು ಕಟ್ಟಲು ಮುಂದಾದನು. ಇದನ್ನು ಸಹಿಸದ ವರ್ಣಾಶ್ರಮಿಗಳು ಕಲ್ಯಾಣವನ್ನು ಅಲ್ಲೋಲಕಲ್ಲೋಲ ಮಾಡಿದರು. ಶರಣರು ಕಲ್ಯಾಣವನ್ನು ತೊರೆದು ವಚನ ಸಾಹಿತ್ಯದ ಉಳಿವಿಗಾಗಿ ದಿಕ್ಕುದಿಕ್ಕಿಗೆ ಚದುರಿಹೋದರು. 'ಶೂನ್ಯ ಸಂಪಾದನೆ' ಮೂಲಕ ದೇವಸಾಕ್ಷಾತ್ಕಾರ ಪಡೆಯಲು ಶೂನ್ಯ ಸಿಂಹಾಸನಾಧೀಶನಾದ ಪ್ರಭುದೇವನು ತನ್ನ ಪ್ರಭಾವಲಯದಲ್ಲಿ ಬಂದ ಮುಕ್ತಾಯಕ್ಕ, ಸಿದ್ದರಾಮರು, ಮರುಳಶಂಕರ, ಬಸವಣ್ಣ, ಮಡಿವಾಳಯ್ಯ, ಆಯ್ದಕ್ಕಿ ಲಕ್ಕಮ್ಮ, ಮೋಳಿಗೆಮಾರಯ್ಯ, ನುಲಿಯ ಚಂದಯ್ಯ, ಘಟ್ಟಿವಾಳಯ್ಯ, ಮಹಾದೇವಿಯಕ್ಕ, ಗೋರಕ್ಷ ಇವರಿಗೆ ಕ್ರಮವಾಗಿ ಶೂನ್ಯ ಸಂಪಾದನೆಯನ್ನು ಕರುಣಿಸಿದರು.

ಇಡೀ ವಚನ ಚಳುವಳಿ ಒಂದು ಸಿದ್ಧಾಂತದ ನೆಲಗಟ್ಟಿನಲ್ಲಿ ಬೆಳೆದು ಉಳಿದು ಬಂದಿದೆ. ಈ ಚಳುವಳಿಯ ಎಲ್ಲಾ ನೇತಾರರಿಗೂ ಲಿಂಗಾಯತ ಧರ್ಮ ನೆಲೆಯನ್ನು ಮಾಡಿಕೊಟ್ಟಿದೆ. ಮಾನವ ಜನಾಂಗಕ್ಕೆ ಹೊಸ ಹುರುಪನ್ನು ವಚನ ಚಳುವಳಿ ನೀಡಿದ್ದ ಬಳ್ಳಿಗಾವಿ ಎಲ್ಲಿ ? ಬೀದರ ಬಸವಕಲ್ಯಾಣವೆಲ್ಲಿ ? ಶ್ರೀಶೈಲವೆಲ್ಲಿ ? ಹರಿದು ಹಂಚಿದ ನಾಡನ್ನು ವಚನ ಚಳುವಳಿ ಒಗ್ಗೂಡಿಸಿ ಇಡೀ ಮಾನವ ಜನಾಂಗಕ್ಕೆ ದಾರಿದೀಪವಾಗಿದೆ.

27ನೇ ಪುಟದಿಂದ .....

ಸಹೋದರ, ಸಹೋದರಿಯರು ಎಂದೇ ಭಾವಿಸುತ್ತೇನೆ. ಯಾವುದೇ ಜಾತಿ, ಧರ್ಮ, ಭಾಷೆ, ಪ್ರದೇಶ ಸಿದ್ಧಾಂತಕ್ಕಿಂತ ನನ್ನ ದೇಶದ ಸಂವಿಧಾನವೇ ನನಗೆ ಮುಖ್ಯ. ಅದಕ್ಕೆ ಸಂಪೂರ್ಣ ನಿಷ್ಠನಾಗಿರುತ್ತೇನೆ. ಆ ಮೂಲಕ ಈ ಮಣ್ಣಿನ ಋಣ ತೀರಿಸಿ ಜೀವನದ ಸಾರ್ಥಕತೆ ಹೊಂದುತ್ತೇನೆ" ದೇಶಕ್ಕೆ ಅತ್ಯಂತ ಮಾನವೀಯ ಮತ್ತು ಸಮಾನತೆಯ ಸಂವಿಧಾನ ನೀಡಿದ ಬಾಬಾ ಸಾಹೇಬ್ ಅಂಬೇಡ್ಕರ್ ಅವರನ್ನು ಸದಾ ನೆನೆಯುತ್ತಾ. ವಿಶ್ವ ಮಾನವ ಪ್ರಜ್ಞೆಯೊಂದಿಗೆ "ಮೇರಾ ಭಾರತ್ ಮಹಾನ್" ಇದು ದೇಶಕ್ಕೆ ನಾನು ಕೊಡುವ ಒಂದು ಸಣ್ಣ ಕೊಡುಗೆ ಪ್ರಬುದ್ಧ ಮನಸ್ಸು ಪ್ರಬುದ್ಧ ಸಮಾಜ, ಜನರ ಜೀವನಮಟ್ಟ ಸುಧಾರಣೆಯ ಗುರಿಯೊಂದಿಗೆ, ಮನಗಳಲ್ಲಿ – ಮನೆಗಳಲ್ಲಿ – ಮತಗಳಲ್ಲಿ ಪರಿವರ್ತನೆಗಾಗಿ, ಮನಸ್ಸುಗಳ ಅಂತರಂಗದ ಚಳವಳಿ.

ಜೈವಿಕ ಉದ್ಯಾನವನದ ಶಿಲ್ಪಿ ಡಾ॥ ಎಂ.ಎಲ್.ಲಲಿತಮ್ಮ

ಬೆಂಗಳೂರಿನ ಮೈಸೂರು ಬ್ಯಾಂಕ್ ವೃತ್ತ ಮತ್ತು ಕೆ.ಆರ್.ಸರ್ಕಲ್ ನಡುವೆ ಸರ್ಕಾರಿ ಪದವಿ ಕಲಾ ಕಾಲೇಜು ಇದೆ. ಈ ಕಾಲೇಜಿನಲ್ಲಿ 1997–98ರಲ್ಲಿ ಕನ್ನಡವನ್ನು ಐಚ್ಛಿಕ ವಿಷಯವಾಗಿ ಆಯ್ಕೆಮಾಡಿಕೊಂಡು ಬಿ.ಎ ವ್ಯಾಸಂಗವನ್ನು ಮಾಡುತ್ತಿದ್ದೆನು. ಆಗ ನಮ್ಮ ತರಗತಿಗೆ ಕನ್ನಡವನ್ನು ಬೋಧಿಸಲು ಡಾ॥ ಎಂ.ಎಲ್.ಲಲಿತಮ್ಮ ಎನ್ನುವ ಅಧ್ಯಾಪಕರು ಬರುತ್ತಿದ್ದರು. ಐಚ್ಛಿಕ ವಿದ್ಯಾರ್ಥಿಗಳಿಗೆ 'ಆಯ್ದ ವಿಮರ್ಶಾ ಲೇಖನಗಳು' ಎಂಬ ಪಠ್ಯವನ್ನು ಇಡಲಾಗಿತ್ತು. ಇದರಲ್ಲಿ ತೀನಂಶ್ರೀಯವರ 'ವಾಲ್ಮೀಕಿಯ ವರ್ಣನೆಗಳು' ಎಂಬ ಲೇಖನವನ್ನು ಡಾ॥ ಎಂ.ಎಲ್.ಲಲಿತಮ್ಮನವರು ಪಾಠ ಮಾಡುತ್ತಿದ್ದ ರೀತಿಯನ್ನು ನಾನೆಂದೂ ಮರೆಯಲಾರೆ. ಹೀಗೆಯೆ ಅದೇ ವರ್ಷದ ಪಠ್ಯದಲ್ಲಿ 'ಕೆರೆಗೆ ಹಾರ' ಎಂಬ ಜನಪದ ಕಾವ್ಯವನ್ನು ಒಂದು ದಿನ ತರಗತಿಯಲ್ಲಿ ಬೋಧಿಸುತ್ತಿದ್ದಾಗ ಭಾಗೀರತಿ ಕೆರೆಗೆ ಹಾರುವ ಸನ್ನಿವೇಶವನ್ನು ವಿವರಿಸುತ್ತ, ವಿವರಿಸುತ್ತ ಮೇಡಮ್‌ರ ಕಣ್ಣುಗಳಿಂದ ಕಣ್ಣೀರು ಸುರಿಯತೊಡಗಿದ್ದನ್ನು ಇಡೀ ತರಗತಿ ಮೂಕವಿಸ್ಮಿತವಾಗಿ ನೋಡುತ್ತಿತ್ತು. ಆದರೆ ಅವರು ಮಾತ್ರ ತಮ್ಮ ಬೋಧನೆಯಲ್ಲಿ ಎಷ್ಟು ತಲ್ಲೀನರಾಗಿದ್ದರೆಂದರೆ ಆ ಸಂದರ್ಭವನ್ನೆ ಸೃಷ್ಟಿ ಮಾಡಿದ್ದರು. ಇದರಂತೆ ಅವರ ಪ್ರತಿ ತರಗತಿಗಳು ವಿದ್ಯಾರ್ಥಿಗಳಿಗೆ ಸಾಹಿತ್ಯ ಸುಧೆಯ ರಸದೌತಣವಾಗಿರುತ್ತಿದ್ದವು. ಇವರು ಉತ್ತಮ ಅಧ್ಯಾಪಕಿ ಆಗಿರುವುದರ ಜೊತೆಗೆ, ಒಳ್ಳೆಯ ಅಲೋಪತಿ ವೈದ್ಯೆಯೂ ಮತ್ತು ಆಯುರ್ವೇದವನ್ನು ಬಲ್ಲವರೂ ಆಗಿದ್ದಾರೆ. ಎಂ.ವಿ.ಸೀತರಾಮಯ್ಯನವರ ಮಾರ್ಗದರ್ಶನದಲ್ಲಿ ಹಳಗನ್ನಡ ಕಾವ್ಯಗಳ ಮೇಲೆ ಪಿಹೆಚ್.ಡಿ ಮಾಡಿದ್ದಾರೆ ಹಾಗೂ ಎಂಬಿಬಿಎಸ್ ಪದವಿಯನ್ನು ಅಧ್ಯಯನ ಮಾಡಿ ಮಹಿಳೆ ಮತ್ತು ಮಕ್ಕಳ ತಜ್ಞವೈದ್ಯರಾಗಿಯೂ ಹೆಸರು ಗಳಿಸಿರುವ ಬಹುಮುಖ ಪ್ರತಿಭೆವುಳ್ಳವರಾಗಿದ್ದಾರೆ.

ಈ ಸರ್ಕಾರಿ ಕಾಲೇಜಿಗೆ ಸೇರುತ್ತಿದ್ದವರೆಲ್ಲಾ ನನ್ನ ಹಾಗೆ ಬಡವಿದ್ಯಾರ್ಥಿಗಳೇ ಆಗಿರುತ್ತಿದ್ದರು. ಶುಲ್ಕ ಕಡಿಮೆ ಎಂಬ ಕಾರಣಕ್ಕೆ ಗ್ರಾಮೀಣ ಭಾಗದ ರೈತ ಸಮುದಾಯದ ಮಕ್ಕಳು, ಕೂಲಿಕಾರ್ಮಿಕ ಹಾಗೂ ಶೋಷಿತ ಸಮುದಾಯಗಳ ವಿದ್ಯಾರ್ಥಿಗಳೆ ಇಲ್ಲಿ ದಾಖಲಾಗುತ್ತಿದ್ದರು. ನಮ್ಮಂತಹ ಹಿಂದುಳಿದ ವಿದ್ಯಾರ್ಥಿಗಳಿಗಾಗಿಯೇ ಡಾ॥ ಲಲಿತಮ್ಮನವರು 'ಉಪನ್ಯಾಸಕರ ಕೊಠಡಿಯಲ್ಲಿಯೇ ಒಂದು ಚಿಕಿತ್ಸಾಲಯವನ್ನು ನಿರ್ಮಿಸಿಕೊಂಡು ನಮಗೆಲ್ಲಾ ಆರೋಗ್ಯ ತಪಾಸಣೆಮಾಡಿ, ಉಚಿತವಾಗಿ ಮಾತ್ರೆ, ಇಂಜಕ್ಷನ್‌ಗಳನ್ನು ನೀಡುತ್ತಿದ್ದರು. ಹೀಗೆ ಇವರಿಂದ ಆರೋಗ್ಯ ಸೇವೆಯನ್ನು ಪಡೆದ ವಿದ್ಯಾರ್ಥಿಗಳ ಸಂಖ್ಯೆ ಅಪರಿಮಿತವಾಗಿದೆ. ಇದಕ್ಕಾಗಿ ಅವರನ್ನು ನಾಡಿನ ಮೂಲೆ ಮೂಲೆಗಳಲ್ಲಿ ಇರುವ ವಿದ್ಯಾರ್ಥಿಗಳು ಸ್ಮರಿಸಿಕೊಳ್ಳುತ್ತಾರೆ. ಜೊತೆಗೆ ಅವರ ವಿದ್ವತ್ ಪೂರ್ಣವಾದ ತರಗತಿಗಳನ್ನು ಮರೆಯಲು ಸಾಧ್ಯವೇ ಇಲ್ಲ. ಇಂಥವರು ಮುಂದೆ ನನ್ನ ಪಿಹೆಚ್.ಡಿ ಸಂಶೋಧನೆಗೆ ಮಾರ್ಗದರ್ಶಕರಾಗಿ ದೊರಕಿದ್ದು ಒಂದು ಯೋಗವೆಂದೆ ಭಾವಿಸುತ್ತೇನೆ.

ಉನ್ನತ ವ್ಯಾಸಂಗದ ನಂತರ ನಾನು 'ಜನಪದ ವೈದ್ಯ/ಹಳ್ಳಿವೈದ್ಯ'ದಲ್ಲಿಯೇ ಪಿಹೆಚ್.ಡಿ ಮಾಡಬೇಕೆಂಬ ಆಸಕ್ತಿಯಲ್ಲಿ ಅರ್ಹ ಮಾರ್ಗದರ್ಶಕರಿಗಾಗಿ ಹುಡುಕಾಡ ತೊಡಗಿದ್ದೆನು. ಆ ಸಮಯದಲ್ಲಿ ಬೆಂಗಳೂರಿನ ಬಿಎಂಶ್ರೀ ಪ್ರತಿಷ್ಠಾನದ ಮೂಲಕ ಮಾರ್ಗದರ್ಶಕರಾಗಿ ದೊರಕಿದವರು ಗುರುಗಳಾದ ಡಾ॥ ಲಲಿತಮ್ಮನವರು. ಪದವಿಯಲ್ಲಿ ಅಪರೂಪದ ಬೋಧಕರಾಗಿದ್ದ ಅವರ ಮೇಲೆ ವಿಶೇಷ ಗೌರವ ಇತ್ತು. ಪುನಃ ಅವರು ಗುರುವಿನ ಸ್ಥಾನದಲ್ಲಿ ಲಭಿಸಿದ್ದು ನನಗೆ ಅಧಿಕವಾದ ಸಂತೋಷವನ್ನು ಉಂಟುಮಾಡಿತ್ತು. ಅವರ ವಿಶೇಷ ಗುಣವೆಂದರೆ ತಮ್ಮ ಸಮಾಜಸೇವೆಯ ಬಗ್ಗೆ ಇಲ್ಲವೇತಾವು ಮಾಡಿದ ಸಾಧನೆಯ ಬಗ್ಗೆ ಎಲ್ಲೂ ಹೇಳಿಕೊಂಡವರಲ್ಲ. ಅಂದರೆ, ಕಾಯಕವನ್ನು ಮಾಡುತ್ತಾ ಹೋಗುವುದರಲ್ಲಿಯೇ ಅವರು ಸಾರ್ಥಕತೆಯನ್ನುಕಾಣುವ ಸ್ವಭಾವದವರು. ದೀರ್ಘಕಾಲದ ವರೆಗೆ ಅಧ್ಯಾಪಕ ವೃತ್ತಿಯಲ್ಲಿ ದುಡಿದು ನಿವೃತ್ತಿಯಾದ ನಂತರ ಬೆಂಗಳೂರಿನ ಪದ್ಮನಾಭನಗರದಲ್ಲಿ ಅವರ ತಂದೆಯವರು ನೋಡಿ ಕೊಳ್ಳುತಿದ್ದ 'ದೇವರಗುಡ್ಡೆ' ಎಂಬ 1.42 ಎಕರೆಯಷ್ಟು ಬರಡು ಭೂಮಿಯನ್ನು ಮತ್ತು ಅಲ್ಲಿರುವ ಪುರಾತನಕಾಲದ ಶ್ರೀಲಕ್ಷ್ಮೀಕಾಂತ ಸ್ವಾಮಿ ದೇವಸ್ಥಾನವನ್ನು ತಾವೇ ನೋಡಿಕೊಳ್ಳಲು ಆರಂಭಿಸಿದರು.



ಡಾ॥ ಹಾಲಪ್ಪ ಹೆಚ್.ಕೆ.ಕುಂಟೆ
ಕನ್ನಡ ಉಪನ್ಯಾಸಕರು
ಸರ್ಕಾರಿ ಪದವಿ ಪೂರ್ವ ಕಾಲೇಜು
ತೀರ್ಥಹಳ್ಳಿ, ಶಿವಮೊಗ್ಗ ಜಿಲ್ಲೆ–577432
ಮೊ–9731190236

ಬಹುಮುಖ್ಯವಾಗಿ ಅದನ್ನು 'ಔಷಧೀಯ ಜೈವಿಕ ವನ'ವನ್ನಾಗಿ ಅಭಿವೃದ್ಧಿಪಡಿಸಲು ತಮ್ಮಲ್ಲಿನ ಎಲ್ಲಾ ಹಣವನ್ನು ಅದಕ್ಕಾಗಿ ವಿನಿಯೋಗಿಸಿದರು. ಕೇವಲ ಉದ್ಯಾನವನವೆಂದರೆ ಅದು ಮನರಂಜನೆಯ ಸ್ಥಳವಾಗುತ್ತದೆಂದು ಭಾವಿಸಿ ಪ್ರಾಚೀನ ದೇವಾಲಯಗಳನ್ನು ತಮ್ಮ ಖರ್ಚಿನಲ್ಲಿಯೇ ಜೀರ್ಣೋದ್ಧಾರ ಮಾಡಿ ಔಷಧಿಯ ವನಕ್ಕೆ ಭಗವಂತನ ರಕ್ಷಣೆಯಿರುವಂತೆ ನೋಡಿಕೊಂಡರು. ಗಿಡಮೂಲಿಕೆಗಳ ಕುರಿತೇ ಸಂಶೋಧನೆ ಕೈಗೊಂಡ ನನಗೆ, ಮೇಡಮ್‌ರವರ ಈ ಔಷಧೀಯ ವನದಿಂದ ಹೆಚ್ಚಿನ ಅನುಕೂಲವಾಯಿತು. ಮೇಡಮ್‌ರು ದಿನದ ಹೆಚ್ಚು ಸಮಯವನ್ನು ಈ ಜೈವಿಕವನದಲ್ಲಿಯೇ ಕಳೆಯುತ್ತಿದ್ದರು. ಹಾಗಾಗಿ ಅಧ್ಯಯನದ ರೂಪುರೇಷೆಗಳನ್ನು ಚರ್ಚಿಸಲು, ಸಂಶೋಧನೆಯ ಪ್ರಗತಿ ವರದಿಗಳನ್ನು ಪರಿಶೀಲಿಸಲು ಉದ್ಯಾನವನಕ್ಕೆ ಬರುವಂತೆ ಹೇಳುತ್ತಿದ್ದರು. ನಾನು ಅಲ್ಲಿಗೆ ಹೋದಾಗ ಮೇಡಮ್‌ರು ಕೆಲವೊಮ್ಮೆ ಸಾರ್ವಜನಿಕರೊಂದಿಗೆ ಸಾಹಿತ್ಯ, ಆಧ್ಯಾತ್ಮಿಕ ಉಪನ್ಯಾಸ, ಆರೋಗ್ಯ ಶಿಬಿರ ಹಾಗೂ ಶ್ರೀಲಕ್ಷ್ಮೀಕಾಂತ ಸ್ವಾಮಿಯ ಭಕ್ತ ಮಂಡಳಿಯೊಡನೆ ಸಭೆ ಇತ್ಯಾದಿ ಯಾವುದಾದರೊಂದು ಚಟುವಟಿಕೆಯಲ್ಲಿ ತೊಡಗಿಕೊಂಡಿರುತ್ತಿದ್ದರು. ಅವರು ಬಿಡುವು ಮಾಡಿಕೊಳ್ಳುವವರೆಗೆ ಉದ್ಯಾನವನದಲ್ಲಿದ್ದ ಪ್ರತಿ ಗಿಡಮರಬಳ್ಳಿಗಳ ಕಡೆ ನನ್ನ ಗಮನವಿರುತಿತ್ತು. ಅಪರಿಚಿತವಾದವುಗಳನ್ನು ಗುರುತು ಹಾಕಿಕೊಂಡು ಮೇಡಮ್‌ರು ಬಿಡುವಾದ ಬಳಿಕ ಅವುಗಳ ಬಗ್ಗೆ ಮಾಹಿತಿ ಕೇಳಿ ತಿಳಿದುಕೊಳ್ಳುತ್ತಿದ್ದೆನು. ಆ ವನಸಿರಿಯ ತಂಪನೆಯ ನೆರಳಲ್ಲಿ ಕುಳಿತುಕೊಂಡಾಗ ಎಂತಹ ಆಯಾಸ ಇದ್ದರೂ ಕಣ್ಮರೆಯಾಗಿ ಹೋಗುತ್ತಿತ್ತು. ಹೀಗಾಗಿ ಆ ಜೈವಿಕವನ ನನ್ನಂತಹ ಅನೇಕ ಸಂಶೋಧಕರಿಗೆ ಸಸ್ಯಜ್ಞಾನವನ್ನು ಒದಗಿಸಿದೆ.

ಈ ಉದ್ಯಾನವನದಲ್ಲಿ ಪ್ರತಿ ವರ್ಷವೂ ವಿವಿಧ ಪ್ರಭೇದಗಳ ಸಸ್ಯಗಳನ್ನು ಬೆಳೆಸುವುದರ ಮೂಲಕ ಅದನ್ನು ಸಸ್ಯಕಾಶಿಯನ್ನಾಗಿ ಡಾ॥ ಎಂ.ಎಲ್.ಲಲಿತಮ್ಮನವರು ನಿರ್ಮಿಸಿದ್ದಾರೆ. ಕಡಿಮೆ ಜಾಗದಲ್ಲಿ ಇಷ್ಟೊಂದು ಅಪಾರವಾದ ಸಸ್ಯಸಂಪತ್ತನ್ನು ಬೆಳೆಸಿ ಬೆಂಗಳೂರಿನಂತಹ ಮಹಾನಗರದೊಳಗೆ ಅದನ್ನು ಸಂರಕ್ಷಿಸಿಕೊಂಡು ಬರುತ್ತಿರುವುದರ ಉದ್ದೇಶವೇನೆಂದರೆ, ಜನರಿಗೆ ಶುದ್ಧ ಆಮ್ಲಜನಕ ಒದಗಿಸಲು ಇಂತಹ ಜೈವಿಕವನ ಅಗತ್ಯವಿದೆ ಎಂಬುದು. ಈ ರೀತಿಯ ಜೈವಿಕವನಗಳು ಬೆಂಗಳೂರಿಗೆ ಕೆಲವಾದರು ಬೇಕೆಂಬುದನ್ನು ಬಹಳ ಹಿಂದೆಯೆ ಮನಗಂಡಿದ್ದರು. ಜೊತೆಗೆ ಅವರಿಗಿರುವ ಆಯುರ್ವೇದ ಜ್ಞಾನವೂ ಸಸ್ಯಸಮೂಹವನ್ನು ಬೆಳಸಿ ಉಳಿಸಲು ಪ್ರೇರಣೆಯನ್ನು ನೀಡಿದೆ. ಈ ಕಾರ್ಯ ಸಾಧನೆಗಾಗಿ ಮೇಡಮ್‌ರು ವಹಿಸಿದ ಶ್ರಮ, ಪಟ್ಟಿರುವ ಕಷ್ಟ, ಅನುಭವಿಸಿರುವ ಕಿರುಕುಳ ಶಬ್ದಗಳಿಗೆ ನಿಲುಕದ್ದು. ಬಿಬಿಎಂಪಿಯವರು ಮತ್ತು ಅಲ್ಲಿಯ ಸ್ಥಳೀಯ ಜನನಾಯಕರು ಉದ್ಯಾನವನವನ್ನು ನೆಲಸಮಮಾಡಿ ಆ ಜಾಗದಲ್ಲಿ ವಾಣಿಜ್ಯ ಮಳಿಗೆಗಳನ್ನು ಕಟ್ಟಲು ಇನ್ನಿಲ್ಲದ ಪ್ರಯತ್ನವನ್ನು ಮಾಡಿದ್ದಾರೆ. ಇವರುಗಳಿಂದ ಉದ್ಯಾನವನವನ್ನು ರಕ್ಷಿಸುವ ಸಲುವಾಗಿ ಮೇಡಮ್‌ರು ಹೈಕೋರ್ಟಿನಲ್ಲಿ ಸಾಕಷ್ಟು ಹೋರಾಟವನ್ನೂ ಮಾಡಿದ್ದಾರೆ. ಮಾನ್ಯ ನ್ಯಾಯಾಲಯ ಉದ್ಯಾನವನವನ್ನು ನಾಶಮಾಡದಂತೆ ಆದೇಶ ಹೊರಡಿಸಿದ್ದರೂ ರಾಜಕಾರಿಣಿಗಳು, ರಿಯಲ್ ಎಸ್ಟೇಟ್‌ನವರು, ಉದ್ಯಮಿಗಳು ಯಾವ ಕ್ಷಣದಲ್ಲಿ ಡಾ॥ ಎಂ.ಎಲ್.ಲಲಿತಮ್ಮ ಎಂಬ ಪರಿಸರವಾದಿ ಕೊನೆಯುಸಿರು ಎಳೆಯುತ್ತಾರೋ! ಎಷ್ಟು ಬೇಗ ಜೈವಿಕವನವನ್ನು ಅಪೋಶನ ಮಾಡುತ್ತೇವೆಯೋ? ಎಂದು ಬಕಪಕ್ಷಿಗಳಂತೆ ಕಾದುಕುಳಿತ್ತಿದ್ದಾರೆ.

ಈ ಆಪತ್ತು ಮತ್ತು ಕುತ್ತುಗಳ ನಡುವೆಯೂ ಮೇಡಮ್‌ರು ಧೈರ್ಯ ಕಳೆದುಕೊಳ್ಳದೆ ಪದ್ಮನಾಭನಗರದ ಮುಖ್ಯ ಬಸ್‌ನಿಲ್ದಾಣಕ್ಕೆ ಅಂಟಿಕೊಂಡಿರುವ ವನಸಂಪತ್ತನ್ನು ಜನರ ಆರೋಗ್ಯ ರಕ್ಷಣೆಗಾಗಿ ಕಾಪಿಟ್ಟುಕೊಂಡಿದ್ದಾರೆ. ಇಂತಹ ಭಗೀರತ ಪ್ರಯತ್ನದಿಂದಾಗಿ ಇಂದು ಅಲ್ಲಿ ಬೆಳೆದು ನಿಂತಿರುವ ವನಸಿರಿಯನ್ನು ನೋಡಿ ಸಂಭ್ರಮಿಸುತ್ತಿರುವ ನಾಗರಿಕರ ಸಂಖ್ಯೆ ಎಣಿಸಲಸದಳ. ಒಮ್ಮೆ ಟಿ.ವಿ ಮಾಧ್ಯಮಗಳು ಆ ವನದಲ್ಲಿ 60 ಅಡಿ ಎತ್ತರ ಬೆಳೆದು ನಿಂತ ಕದಂಬ ವೃಕ್ಷದ ಸೌಂದರ್ಯವನ್ನು ಪ್ರಸಾರ ಮಾಡಿದಾಗ 'ಅಯ್ಯೋ ನಮ್ಮ ಜೈವಿಕವನದ ಈ ವೃಕ್ಷ ಎಷ್ಟು ಸೊಗಸಾಗಿದೆ ಅನ್ನಿಸಿತು ಕಣಪ್ಪ ಟಿ.ವಿಯವರು ಅದನ್ನು ತೋರಿಸಿದಾಗ' ಎಂದೊಮ್ಮೆ ನನಗೆ ಹೇಳಿದ್ದರು. ಅಲ್ಲಿ ಬೆಳೆಸಿರುವ ಪ್ರತಿ ಸಸ್ಯವನ್ನು ಮಕ್ಕಳಂತೆ ಪ್ರೀತಿಸಿ ಪೋಷಿಸುತ್ತಾರೆ. ಯಾವುದೇ ಗಿಡ, ಬಳ್ಳಿ, ಪೊದೆ ಕಾರಣಾಂತರಗಳಿಂದ ಒಣಗಿ ಹೋದರೆ, ಪುನಃ ಅವುಗಳನ್ನು ಬೆಳೆಸುವ ತನಕ ಅವರು ವಿಶ್ರಮಿಸುವುದಿಲ್ಲ. ಬಿಳಿ, ಕೆಂಪು ಮತ್ತು ಪಿಂಕ್ ಬಣ್ಣದ ಗುಲಗಂಜಿ ಬೀಜಗಳನ್ನು, ನಸುಗುನ್ನಿ, ಬಿಳಿಮುತ್ತುಗ, ಮುಳ್ಳುಮುತ್ತುಗ, ಕಾಡುಜೀರಿಗೆ, ಕಾಡುಮೆಣಸು, ಕಾಡುಕುಂಬಳ, ಕೆಂಪುಲೋಳಿಸರ, ಕಾಡುನಿಂಬೆ, ಕಾಡುನುಗ್ಗೆ, ತೊಟ್ಟಿಲುಬಳ್ಳಿ, ಈಶ್ವರಿಬಳ್ಳಿ, ಆನೆನೆಗ್ಗಿಲು, ಆಕಾಶಗರುಡ, ಗೌರಿಹೂವು(ಕರಡಿಕಣ್ಣನ ಹೂವು), ಮಯೂರ ಶಿಖೆ, ನೆಲಬೇವು, ಚಿತ್ರಮೂಲ, ಸರ್ಪಗಂಧಿ, ಅಶ್ವಗಂಧಿ, ಬುಗುಡಿ ಬಳ್ಳಿ, ಮಹಲಿಂಗನ ಬಳ್ಳಿ, ಶತಾವರಿ ಮೊದಲಾದ ಸಸ್ಯಗಳ

ಬೀಜಗಳನ್ನು ನನಗೆ ಸಂಗ್ರಹಿಸಿ ತರಲು ಹೇಳುತ್ತಿದ್ದರು. ಕ್ಷೇತ್ರಕಾರ್ಯದ ವೇಳೆ ವಿವಿಧ ಪ್ರದೇಶಗಳಿಂದ ಸಂಗ್ರಹಿಸಿದ್ದರೂ ಬೆಂಗಳೂರಿಗೆ ಹೋಗಲು ಸಮಯ ಸಿಗದಿದ್ದಾಗ, ಮತ್ತೆ ಮತ್ತೆ ಫೋನ್ ಮಾಡಿ "ನಾನು ಹೇಳಿದ ಬೀಜಗಳ ಸಂಗ್ರಹವಾಯಿತೇ, ಯಾವಾಗ ತಗೊಂಡು ಬರ್ತಿರಾ?" ಎಂದು ಕೇಳುತ್ತಿದ್ದರು. ಮೇಡಮ್‌ನವರು ಬಿಡುವುದಿಲ್ಲ ಎಂದು ಅರಿತ ನಾನು ಬೀಜಗಳನ್ನು ಸಂಪಾದಿಸಿಕೊಂಡು ಜೈವಿಕಉದ್ಯಾನವನಕ್ಕೆ ಹೋಗುತ್ತಿದ್ದೆನು. ಬೀಜಗಳು ಕೈಗೆ ಸೇರಿದ ಕೂಡಲೆ ತೋಟದ ಕೆಲಸದವರನ್ನು ಕರೆದು ಮಣ್ಣಿಗೆ ಹಾಕಿ ನೀರುಣಿಸುವ ಕೆಲಸವನ್ನು ಮಾಡುತ್ತಿದ್ದರು. ಅವುಗಳು ಬೆಳೆದ ಮೇಲೆ ಹೇಳಲಾರದಷ್ಟು ಸಂಭ್ರಮಿಸುತ್ತಿದ್ದರು. ಹೀಗೆ ಹಗಲಿರುಳೆನ್ನದೇ ಬೆವರು ಹರಿಸಿ ಬೆಳಸಿರುವ ಈ ವನವು, ಸುತ್ತಲಿನ ಎರಡುಚದರ ಕಿ.ಮೀವರೆಗಿನ ಜನರಿಗೆ ಮೆಡಿಕೇಟೆಡ್ ಗಾಳಿಯನ್ನು ಒದಗಿಸುತ್ತದೆ ಎಂದು ಹಲವು ಬಾರಿ ನನಗೆ ಹೇಳಿದ್ದಾರೆ. ಉದ್ಯಾನವನದಲ್ಲಿ ಬೆಳೆದಿರುವ ಆಲದ ಮರದ ಜಾತಿಯ ಬೃಹತ್ತು ವೃಕ್ಷಗಳನ್ನು ತೋರಿಸುತ್ತ "ನೋಡಪ್ಪ ಈ ಒಂದೊಂದು ವೃಕ್ಷದಿಂದ ಸುಮಾರು ಐವತ್ತು ಸಾವಿರ ಜನ ಉಸಿರಾಡುವಷ್ಟು ದ್ರವರೂಪದ ಆಮ್ಲಜನಕವನ್ನು ರಿಲೀಸ್ ಮಾಡುತ್ತವೆ" ಎಂದು ಹೇಳುತ್ತಿದ್ದರು. ಆ ಮರಗಳು ಹೊರಬಿಡುವ ಗಾಳಿ ಆ ಪ್ರದೇಶದ ವಾಯುಮಂಡಲವನ್ನು ಶುದ್ಧಮಾಡುತ್ತದೆ ಎನ್ನುವುದು ವೈಜ್ಞಾನಿಕ ಸತ್ಯವೂ ಆಗಿದೆ. ಇಂತಹ ಪವಿತ್ರ ಗಾಳಿ ಉತ್ಪಾದಿಸುವ ಉದ್ಯಾನವನದಲ್ಲಿ ವಾಯುವಿಹಾರ ಮಾಡಲು ಸುತ್ತಲೂ ಕಲ್ಲು ಚಪ್ಪಡಿಗಳನ್ನು ಹಾಸಲಾಗಿದೆ. ಇದು ಅಕ್ಯುಪಂಕ್ಚರ್ ಆಧಾರದ ಹಿನ್ನೆಲೆಯಲ್ಲಿ ನಿರ್ಮಿಸಿದ ವಿಹಾರದ ದಾರಿಯಾಗಿದೆ. ಇದರ ಪ್ರಯೋಜನವನ್ನು ಪದ್ಮನಾಭನಗರ ಸೇರಿದಂತೆ, ಬೆಂಗಳೂರಿನ ಇತರ ಬಡವರ್ಣೆಯ ನಾಗರಿಕರೂ ಪಡೆದುಕೊಳ್ಳುತ್ತಿದ್ದಾರೆ. ಎಂತಹ ಉದ್ವೇಗದ ಮನಸ್ಸಿನವರು, ಮಾನಸಿಕ ಖಿನ್ನತೆಗೆ ಒಳಗಾಗಿ ನೆಮ್ಮದಿ ಕಾಣದವರು, ಏಕಾಗ್ರತೆ ಇಲ್ಲದವರು ಈ ಮೊದಲಾದ ಸಮಸ್ಯೆಗಳಿಂದ ಬಳಲುವವರು ಇಲ್ಲಿಗೆ ಬಂದು ಕುಳಿತರೆ ಅವರ ಮನಸ್ಸು ಉಲ್ಲಾಸಗೊಳ್ಳುತ್ತದೆ. ಕಾರಣ ಅಲ್ಲಿರುವ ಸಸ್ಯಸಂಪತ್ತು; ಅದನ್ನು ಆಶ್ರಯಿಸಿರುವ ಪಕ್ಷಿಗಳ ಹಿತವಾದ ಕಲರವ. ಅರಳಿ, ಅತ್ತಿ, ಆಲ, ಆಮ್ರ, ಕದಿರ, ಕದಂಬ, ಬೇವು, ಬನ್ನಿ, ಬಿಲ್ವ, ಮಾವು, ಹೊಂಗೆ, ಹೊನ್ನೆ, ಕೃಷ್ಣತುಳಸಿ, ಕರಿಲಕ್ಕಿ ಇತ್ಯಾದಿ ಮರಗಿಡಗಳಿಂದ ಹೊರಡುವ ತಂಗಾಳಿಯುಅಲ್ಲಿ ನೆಲಸಿರುವ ಶ್ರೀಲಕ್ಷ್ಮೀಕಾಂತ ಪ್ರಭುವಿನ ಪಾದಸ್ಪರ್ಶಗೊಂಡು ಜನರಿಗೆ ಅಪ್ಯಾಯಮಾನದ ಅನುಭಾವವನ್ನು ಕರುಣಿಸಿ ಉಲ್ಲಾಸಗೊಳಿಸುತ್ತದೆ.

ನಾನು ಗಮನಿಸಿದಂತೆ ಉದ್ಯಾನವನಕ್ಕೆ ಬರುವ ಹಿರಿಯ ನಾಗರಿಕರಿಗೆ ಸ್ವಚ್ಛತೆಯನ್ನು ಮತ್ತು ನಿಶ್ಶಬ್ದತೆಯನ್ನು ಕಾಪಾಡುವಂತೆ ಕೆಲವು ಬಾರಿ ಹೇಳುತ್ತಿದ್ದರು. ಈ ಹಿತವಚನ ಆ ಹಿರಿಯರಿಗೆ ಸರಿಯೆಂದು ತೋರುತ್ತಿರಲಿಲ್ಲ. ಏಕೆಂದರೆ ಅವರು ಉದ್ಯಾನವನ ಇರುವುದೇ ಕೂಗಾಡಲು, ಆಟವಾಡಲು, ನಿದ್ರೆ ಮಾಡಲು, ಕಸ ಹಾಕಲು ಎಂದು ತಿಳಿದಿದ್ದರು. ಮೇಡಮ್‌ರು ಬರುವವರೆಗೆ ಅಥವ ಅವರು ಬಿಡುವು ಮಾಡಿಕೊಳ್ಳುವವರೆಗೆ ಸುಮ್ಮನೆ ಕುಳಿತು ಹಿರಿಯ ನಾಗರಿಕರ ವರ್ತನೆಯನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಹಲವಾರು ಬಾರಿ ಗಮನಿಸಿದ್ದೇನೆ. ಇವರೊಡನೆ ಪ್ರೇಮಿಗಳು ಗಿಡಮರಪೊದೆಗಳ ನಡುವೆ ಅಡಗುತಾಣವನ್ನು ಮಾಡಿಕೊಳ್ಳುತ್ತಿದ್ದರು. ಇವರನ್ನೂ ಉಚ್ಚಾಟಿಸುವ ಕಾರ್ಯವನ್ನು ಮಾಡಬೇಕಿತ್ತು. ಇದೆಲ್ಲವನ್ನೂ ಸಹಿಸಿಕೊಳ್ಳುತ್ತಿದ್ದ ಮೇಡಮ್‌ರು ಮೌನವಾಗಿ ಇದ್ದು ಬಿಡುತ್ತಿದ್ದರು. ಒಂದು ದಿನ ಹಿರಿಯ ನಾಗರಿಕರಲ್ಲಿ ಒಬ್ಬರ ಹುಟ್ಟಿದ ಹಬ್ಬವನ್ನು ಅದೇ ಉದ್ಯಾನವನದಲ್ಲಿ ವಿವಿಧ ತಿನಿಸು ಭಕ್ಷಗಳೊಂದಿಗೆ ಆಚರಿಸಿಕೊಳ್ಳುತ್ತಿದ್ದರು. ಆ ದಿನ ಹಿರಿಯರ ಕೂಗಾಟ–ಕಿರುಚಾಟ ಜೋರಾಗಿ ನಡೆದಿತ್ತು. "ಹ್ಯಾಪಿ ಬರ್ತಡೇ.... ಹ್ಯಾಪಿ ಬರ್ತಡೇ.... " ಎಂದು ವಿದೇಶಿಯರ ದನಿಯಲ್ಲಿ ಅರಚಾಡಿದ ಮೇಲೆ, ಸಗಣಿಯಂತಹ ಕೇಕನ್ನು ತಿಂದು, ಚರಂಡಿ ನೀರಿನಂತಹ ಕೂಲ್ ಡ್ರಿಂಕ್ಸಗಳನ್ನು ಕುಡಿದು ಎಲ್ಲೆಂದರಲ್ಲೆ ಪ್ಲೇಟುಗಳನ್ನು, ಕುಡಿದ ಬಾಟಲಿಗಳನ್ನು ಚಲ್ಲಾಡಿ ಹೋದರು. ನನಗಂತೂ ಅವರ ಅಶಿಸ್ತನ್ನು ನೋಡಿ ನೋಡಿ ಎಲ್ಲಿಲ್ಲದ ಕೋಪ ಬಂದಿತ್ತು. ಆದರೆ ಮೌನವಾಗಿ ಕುಳಿತಿರುತ್ತಿದ್ದೆನು. ಅವರೆಲ್ಲ ಹೊರಟು ಹೋದ ಮೇಲೆ "ಮೇಡಮ್ ಈ ಸಸ್ಯವನದಲ್ಲಿ ಪ್ಲಾಸ್ಟಿಕ್ ನಂತಹ ಕಸ ಹಾಕದಂತೆ ನೀವು ಒಂದು ಮಾತು ಹೇಳಬೇಕು" ಎಂದೆನು. ಆಗವರು "ಅವರು ಹೇಳಿದ್ರೆ ಕೇಳೊ ಜನ ಅಲ್ಲಪ್ಪಾ, ಒಮ್ಮೆ ಹೇಳಿದ್ದಕ್ಕೆ ಇವರೆಲ್ಲ ಸೇರಿಕೊಂಡು ಇಲ್ಲಿಯ ಚುನಾಯಿತ ರಾಜಕಾರಿಣಿಯೊಬ್ಬರಿಗೆ ನನ್ನ ಮೇಲೆ ದೂರು ಹೇಳಿದ್ರಪ್ಪ. ಆ ರಾಜಕಾರಿಣಿಗಳಿಗೋ ಇವರ ವೋಟು ಬೇಕು. ಅದಕ್ಕಾಗಿ ಅವರ ಪರವಾಗಿಯೇ ಮಾತನಾಡುತ್ತಾರಪ್ಪಾ. ಆಗಿನಿಂದ ಏನನ್ನೂ ಹೇಳೊದಿಲ್ಲ. ಕೂಲಿಯವರನ್ನು ಕರೆದು ಕಸವನ್ನೆಲ್ಲ ಸ್ವಚ್ಛ ಮಾಡಿಸ್ತೇನೆ" ಎಂದರು.

ಇದೆಲ್ಲ ಕಿರುಕುಳದ ನಡುವೆಯೂ ಬೆಂಗಳೂರಿನಂತಹ ಮೆಟ್ರೋಪಾಲಿಟಿನ್ ಸಿಟಿಯಲ್ಲಿ ವನಸಿರಿಯನ್ನು ಬೆಳಸಿ, ಮಹಾನಗರದ ಜನತೆಯ ಆರೋಗ್ಯಕ್ಕೆ ನೀಡಿರುವ ಕೊಡುಗೆ ಈ ಜೈವಿಕವನ. ಹೀಗಾಗಿ ಡಾ॥ ಲಲಿತಮ್ಮನವರು 'ಸಸ್ಯಕಾಶಿಯ ತಿಮ್ಮಕ್ಕ' ಎಂಬ ಹೆಸರಿಗೆ ಪಾತ್ರರಾಗಿದ್ದಾರೆ.

ಮಾತ್ರವಲ್ಲ, ಆರೋಗ್ಯದ ವ್ಯಾಖ್ಯಾನದಂತೆ, ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ನವಗ್ರಹ ವನವನ್ನೂ ಬೆಳಸಿ ಅದರ ಸುತ್ತ ವಾಯುವಿಹಾರ ಮಾರ್ಗವನ್ನು ನಿರ್ಮಿಸಿದ್ದಾರೆ. ಮನಸಿನ ಮೂಲವಾದ ಆತ್ಮದ ಪ್ರಗತಿಗೆ ಹಸಿರಿನ ನಡುವೆ ಜಗದೊಡೆಯನಾದ ಶ್ರೀಲಕ್ಷ್ಮೀಕಾಂತಸ್ವಾಮಿಯ ಜೊತೆ ಲಕ್ಷ್ಮೀದೇವಿಯನ್ನು ನೆಲೆಗೊಳಿಸಿದ್ದಾರೆ. ಸಮಾಜಿಕ ಆರೋಗ್ಯಕ್ಕೆ: ಕವಿಗೋಷ್ಠಿ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಿರಂತರವಾಗಿ ಉದ್ಯಾನವನದಲ್ಲಿ ನಡೆಸುತ್ತಿದ್ದಾರೆ. ಇಂತಹ ಆರೋಗ್ಯ ಸಿದ್ಧಾಂತದ ಹಿನ್ನೆಲೆಯಲ್ಲಿರುವ, ಔಷಧೀಯ ಗುಣಗಳ ಆಗರದಂತಿರುವ ಜೈವಿಕವನದ ಶಿಲ್ಪಿಯ ಶ್ರಮವನ್ನು ಬೆಂಗಳೂರಿನ ಎಲ್ಲಾ ಪತ್ರಿಕೆಗಳೂ, ಮಾಧ್ಯಮಗಳೂ ಶ್ಲಾಘಿಸಿವೆ. ಮಹಾನಗರಗಳ ನಡುವೆ ಅಲ್ಲಲ್ಲಿ ಈ ಬಗೆಯ ಸಸ್ಯಕಾಶಿಗಳು ಸ್ಥಾಪನೆಗೊಳ್ಳಬೇಕು ಎನ್ನುವ ಮೇಡಮ್‌ರ ಕಾಳಜಿಯನ್ನು ಬೆಂಗಳೂರಿನ ಜನತೆ ಅರ್ಥಮಾಡಿಕೊಳ್ಳಬೇಕಿದೆ. ಅವರ ಮಾರ್ಗದರ್ಶನದಲ್ಲಿ ಇಂತಹ ಆರೋಗ್ಯವನಗಳನ್ನು ತಮ್ಮ ತಮ್ಮ ಬಡಾವಣೆಗಳಲ್ಲಿ ನಿರ್ಮಿಸಲು ಮುಂದಾಗಬೇಕಿದೆ ಪ್ರಾಧ್ಯಾಪಕ ವೃತ್ತಿ, ವೈದ್ಯ ಸೇವೆ ಹಾಗೂ ಜೈವಿಕ ಉದ್ಯಾನದ ಕಾರ್ಯಭಾರಗಳ ನಡುವೆಯೂ ತಮ್ಮ ಸಾಹಿತ್ಯ ಸೇವೆಯನ್ನೂ ಅವರು ನಿರಂತರವಾಗಿ ಮುಂದುವರೆಸಿದ್ದಾರೆ. ಬಹಳ ಹಿಂದೆಯೆ ಈ ಉದ್ಯಾನವನದ ಬೆಳದಿಂಗಳಿನಲ್ಲಿ ಬಿಎಂಶ್ರೀ, ತೀನಂಶ್ರೀ, ಎಂವಿಸೀ, ಜಿ.ಪಿ.ರಾಜರತ್ನಂ, ಜಿಎಸ್‌ಎಸ್, ಕೆಎಸ್‌ನ, ಡಿವಿಜಿ, ಡಾ.ಶಿವರಾಮಕಾರಂತ, ಕೆ.ಎಸ್.ನಿಸ್ಸಾರ್‌ಅಹಮ್ಮದ್, ಡಾ.ಪಿ.ವಿ.ನಾರಾಯಣ, ಟಿ.ವಿ.ವೆಂಕಟಾಚಲಶಾಸ್ತ್ರೀ, ಪ್ರೊ॥ ನಾ.ಗೀತಾಚಾರ್ಯ, ಚಿ.ಶ್ರೀನಿವಾಸರಾಜು ಮೊದಲಾದ ಸಾಹಿತಿಗಳ ಸಾರಥ್ಯದಲ್ಲಿ 'ಬೆಳದಿಂಗಳ ಕಾವ್ಯ ಗೋಷ್ಠಿ,' 'ಬೆಳದಿಂಗಳ ಸಾಹಿತ್ಯ ಸಂವಾದ' ಗಳನ್ನು ಏರ್ಪಡಿಸಿರುವ ಹೆಗ್ಗಳಿಕೆ ಡಾ॥ ಲಲಿತಮ್ಮನವರದಾಗಿದೆ. ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದಲ್ಲಿ ಜರಗುವ ಎಲ್ಲಾ ಉಪನ್ಯಾಸಗಳಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಈಗ ಅವರಿಗೆ 92 ವರ್ಷ. ಈ ವಯಸ್ಸಿನಲ್ಲೂ ಜೈವಿಕ ಉದ್ಯಾನದ ಸಂರಕ್ಷಣೆಯ ಕೆಲಸ, ಸಾಹಿತ್ಯ ಸೇವೆ, ತಮ್ಮ ಹಂಸ ಕ್ಲಿನಿಕ್‌ನ ಮೂಲಕ ಮನೆಯಲ್ಲೆ ನಡೆಸುವ ವೈದ್ಯ ಸೇವೆ ಮುಂತಾದ ಸಮಾಜ ಸೇವೆಗಳೊಂದಿಗೆ ಈ ಉದ್ಯಾನವನ್ನು ರಕ್ಷಿಸಿ ಎಂದು ಕೋರ್ಟಿಗೆ ಅಲೆಯುವುದನ್ನು ನಿರಂತರವಾಗಿ ಮಾಡುತ್ತಿದ್ದಾರೆ.

ಮೇಡಮ್‌ರು ಅಧ್ಯಾಪಕ ವೃತ್ತಿಯಲ್ಲಿದ್ದಾಗ ಬೋಧನೆಯ ಮೂಲಕ ತಮ್ಮ ವಿದ್ವತ್ತನ್ನೆಲ್ಲ ವಿದ್ಯಾರ್ಥಿಗಳಿಗೆ ಅರ್ಪಣಾ ಮನೋಭಾವದಲ್ಲಿ ಸಮರ್ಪಿಸಿಕೊಂಡಿದ್ದನ್ನು ಕಂಡಿದ್ದೇನೆ. ನಿವೃತ್ತಿಯ ನಂತರ ಬಂದಂತಹ ಹಣವನ್ನೆಲ್ಲ ಒಟ್ಟು ಮಾಡಿ ಜೈವಿಕ ಉದ್ಯಾನವನವನ್ನು ನಿರ್ಮಿಸಲು ವಿನಿಯೋಗಿಸಿರುವುದನ್ನು ನೋಡಿದ್ದೇನೆ. ಅಧ್ಯಾಪಕ ವೃತ್ತಿಯ ದಿನಗಳಿಂದ ನಿವೃತ್ತಿಯ ನಂತರವೂ ಉಚಿತ ಉಪನ್ಯಾಸಗಳನ್ನು ನಿರಂತರವಾಗಿ ಕೊಟ್ಟಿರುವುದನ್ನು ಗಮನಿಸಿದ್ದೇನೆ. ಮೇಡಮ್‌ರ ತಾಯಿಯ ಮಂಡಿನೋವನ್ನು ಆಧ್ಯಾತ್ಮಿಕ ಶಕ್ತಿಯಿಂದಲೆ ಗುಣಪಡಿಸಿದ್ದನ್ನು ಅವರಿಂದ ಕೇಳಿದ್ದೇನೆ. ಸಾತ್ವಿಕ ಸ್ವಭಾವದ ಈ ಗುರುಗಳ ನಿಸ್ವಾರ್ಥದ ಕಾರ್ಯಚಟುವಟಿಕೆಯನ್ನು ದೀರ್ಘಕಾಲದಿಂದ ಗಮನಿಸಿರುವ ನನಗೆ ಆಗಾಗ ಅನ್ನಿಸುವುದೇನೆಂದರೆ, ಅಕ್ಕಮಹಾದೇವಿಯು ಹಾಗೆ ಮೇಡಮ್‌ನವರು ಶ್ರೀಲಕ್ಷ್ಮೀಕಾಂತಸ್ವಾಮಿಯನ್ನು ತಮ್ಮ ಅಂತರಂಗದ ಒಡೆಯನನ್ನಾಗಿ ಪ್ರತಿಸ್ಥಾಪಿಸಿಕೊಂಡಿದ್ದಾರೆ ಎನ್ನುವುದು. ಹೀಗಾಗಿಯೆ ತಮ್ಮೆಲ್ಲಾ ದುಡಿಮೆಯನ್ನು ಸಮಾಜಕಾರ್ಯಕ್ಕೆ ವಿನಿಯೋಗಿಸಲು ಸಾಧ್ಯವಾಗಿರುವುದು. 'ಜನಪದ ವೈದ್ಯ'ವನ್ನು ಕುರಿತ ನನ್ನ ಪಿಹೆಚ್.ಡಿ ಅಧ್ಯಯನಕ್ಕೆ ಮಾರ್ಗದರ್ಶನ ಮಾಡುವಾಗ "ನೋಡಪ್ಪ ನಿನ್ನ ಈ ಪಿಹೆಚ್.ಡಿ ಅಧ್ಯಯನದ ಫಲ ಮನುಷ್ಯರ ಕಲ್ಯಾಣಕ್ಕಾಗಿ ಉಪಯೋಗವಾಗಬೇಕು. ಅದರಲ್ಲೂ ಮಹಿಳೆ ಮತ್ತು ಮಕ್ಕಳಿಗೆ ಅನುಕೂಲವಾಗುವಂತಹ ಔಷಧಿಗಳನ್ನೆ ಪ್ರಮುಖವಾಗಿ ಹಳ್ಳಿವೈದ್ಯರಿಂದ ಸಂಗ್ರಹಿಸಿ ವೈಜ್ಞಾನಿಕವಾಗಿ ವಿವರಿಸಬೇಕು" ಎಂದು ಹಲವು ಬಾರಿ ಹೇಳುತ್ತಿದ್ದರು. ಆ ನಿಟ್ಟಿನಲ್ಲಿಯೇ ಸಂಶೋಧನೆ ಮುಂದುವರೆಯುವಂತೆ ನೋಡಿಕೊಂಡಿದ್ದರು. ಇದರಿಂದ ಅವರ ಮನೋಧರ್ಮ ಏನೆಂಬುದು ಆಗಲೇ ನನಗೆ ಮನವರಿಕೆಯಾಗಿತ್ತು. ಈ ಬಗೆಯ ತ್ಯಾಗ ಜೀವನ ಲಭಿಸುವುದು ಆಧ್ಯಾತ್ಮಿಕವಾಗಿ ಮುನ್ನಡೆದಿರುವುರಿಂದಲೇ ಎಂದೆನ್ನಿಸುತ್ತಿದೆ. ಮೇಡಮ್‌ರಲ್ಲಿ ಅಗಾಧವಾದ ಏಕಾಗ್ರತೆ ಮತ್ತು ತಲ್ಲೀನತೆಗಳನ್ನು ಗಮನಿಸಿದ್ದೇನೆ. ಆಯುರ್ವೇದ ವೈದ್ಯಕ್ಕೆ ಸಂಬಂಧಿಸಿದ ಸಂಸ್ಕೃತ ಶ್ಲೋಕಗಳನ್ನು, ಪಂಪ, ರನ್ನ, ರಾಘವಾಂಕ, ಕುಮಾರವ್ಯಾಸ, ಜನ್ನರ ಕಾವ್ಯ ಭಾಗಗಳನ್ನು ಸಂದರ್ಭಾನುಸಾರ ಉಲ್ಲೇಖಿಸುವುದನ್ನು ನೋಡಿದ್ದೇನೆ. ನನ್ನ ಮೊಬೈಲ್ ಸಂಖ್ಯೆಯನ್ನು ಎಂದೂ ಬರೆದು ಕೊಳ್ಳುತ್ತಿರಲಿಲ್ಲ, ಹಾಗೆ ಕೇಳಿಸಿಕೊಂಡು ನೆನಪಿನಲ್ಲಿ ಇಟ್ಟುಕೊಳ್ಳುತ್ತಿದ್ದರು. ಇದು ಸಾಧ್ಯವಾಗುವುದು ಕೆಲವರಿಗೆ ಮಾತ್ರ.

ಸಾಲುಮರದ ತಿಮ್ಮಕ್ಕನವರು ಯಾವ ಪ್ರತಿಫಲಾಪೇಕ್ಷೆ ಇಲ್ಲದೆ ಹಳ್ಳಿರಸ್ತೆಯಲ್ಲಿ ಮರಗಳನ್ನು ಬೆಳಸಿ

ಇತರರಿಗೆ ಮಾದರಿಯಾದರು. ಹಾಗೆಯೇ ಡಾ॥ ಲಲಿತಮ್ಮನವರು ನಿಸ್ವಾರ್ಥ ಸೇವೆಯಲ್ಲಿ ಕನಿಷ್ಟ ಪ್ರದೇಶದಲ್ಲಿ ವನಸಂಪತ್ತಿನ ಪ್ರಪಂಚವನ್ನೇ ಸೃಷ್ಟಿಸಿ ಜನರ ಆರೋಗ್ಯಕ್ಕೆ ಬೆಳಕಾಗಿದ್ದಾರೆ. ಹೀಗಾಗಿ ನನ್ನದೃಷ್ಟಿಯಲ್ಲಿ ಮೇಡಮ್‌ರು ಪರಿಸರವಾದಿ, ಮಹಾನ್ ಸ್ವಾಭಿಮಾನಿ ಮತ್ತು ನಿಸ್ವಾರ್ಥದ ಕಾಯಕಜೀವಿ.ಯಾರನ್ನೂಕೈಚಾಚಿ ಬೇಡುವ ಸ್ವಾಭಾವದವರಲ್ಲ. ಪೆನ್‌ಶನ್ ಹಣದಲ್ಲಿ ಜೀವನ ನಿರ್ವಹಣೆ ಮಾಡುವ ಅವರು ತಮ್ಮ ಇಳಿವಯಸ್ಸಿನ ಸಮಯವನ್ನೆಲ್ಲಾ ಈ ಜೈವಿಕವನಕ್ಕೆ ಮತ್ತು ಸಾಹಿತ್ಯ ಸೇವೆಗೆ ಸಮರ್ಪಿಸಿಕೊಂಡಿದ್ದಾರೆ. ಅವರ ಕಾರ್ಯವೆಲ್ಲವೂ ಲೋಕಕಲ್ಯಾಣಕ್ಕಾಗಿ ಮೀಸಲಾಗಿರುಂತಹುದು. ಏಕೆಂದರೆ, ಉನ್ನತ ಸರ್ಕಾರಿ ನೌಕರಿಯಲ್ಲಿದ್ದರೂ ತಮಗಾಗಿ ಏನನ್ನೂ ಸಂಪಾದಿಸಿಕೊಳ್ಳದೆ, ಕನಿಷ್ಟ ಸೈಟನ್ನಾಗಲಿ, ಮನೆಯನ್ನಾಗಲಿ, ಒಡವೆಯನ್ನಾಗಲಿ ಮಾಡಿಸಿಕೊಳ್ಳದೆ, ತಂದೆ ನೀಡಿರುವ ಮನೆಯಲ್ಲಿಯೆ ಸರಳವಾಗಿ ಬದುಕುತ್ತ ತಪಸ್ವಿನಿಯಾಗಿರುವ ಮೇಡಮ್‌ರ ಸಮಾಜಿಕ ಕಾಳಜಿ ಇತರರಲ್ಲಿ ಕಾಣುವುದು ವಿರಳವೆನ್ನಬಹುದು. ತಮ್ಮ ಎಲ್ಲಾ ಶ್ರಮ, ಜ್ಞಾನ, ಸಂಪತ್ತನ್ನು ಸಮಾಜಕ್ಕೇ ಅರ್ಪಿಸಿರುವ ಅವರ ಜೀವನ ತಾನು ಉರಿದು ಇತರರಿಗೆ ಬೆಳಕನ್ನು ನೀಡುವ ಹಣತೆಯಂತೆ. ಅವರ ಬೆವರಿನ 'ಜೈವಿಕವನ' ಸಾರ್ವಜನಿಕರ ಆರೋಗ್ಯಕ್ಕಾಗಿಯೇ ಮೀಸಲಾಗಿರುವಂತಹುದು. ಈ ಮಾದರಿಯ ಉದ್ಯಾನ ವನಗಳು ರಾಜಧಾನಿಯು ಇತರ ಭಾಗಗಳಲ್ಲೂ ಬೆಳೆಸಬೇಕೆನ್ನುವ ಮಹದಾಸೆ ಅವರದಾಗಿದೆ. ಇಂತಹ ಜೈವಿಕ ಉದ್ಯಾನವನದ ಶಿಲ್ಪಿಗೆ, ನಿಸ್ವಾರ್ಥದ ಗುರುವಿಗೆ ಶಿರಸಾಷ್ಟಾಂಗ ವಂದನೆಗಳನ್ನು ಅರ್ಪಿಸುತ್ತೇನೆ.

ನೊಳಂಬ ಸಂಸ್ಕೃತಿ ಅಧ್ಯಯನ ಪೀಠ

ತುಮಕೂರು ವಿಶ್ವವಿದ್ಯಾನಿಲಯ ತುಮಕೂರು.

ನೊಳಂಬ ಲಿಂಗಾಯತ ಸಂಘ (ರಿ.), ಬೆಂಗಳೂರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಮತ್ತು ನೊಳಂಬವಾಣಿ ತ್ರೈಮಾಸಿಕ ಪತ್ರಿಕೆ ಬೆಂಗಳೂರು ಇವರುಗಳ ಸಹಯೋಗ ಹಾಗು ಸಹಭಾಗಿತ್ವದಲ್ಲಿ ನೊಳಂಬ ಸಂಸ್ಕೃತಿ ಅಧ್ಯಯನ ಪೀಠವನ್ನು ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾರಂಭಮಾಡಲಾಗಿದೆ. ನೊಳಂಬ ಸಂಸ್ಕೃತಿ ಅಧ್ಯಯನ ಪೀಠ ಉದ್ಘಾಟನೆ ಮತ್ತು ನೊಳಂಬ ಸಂಸ್ಕೃತಿ ಅಧ್ಯಯನ ಪೀಠವು ಮುಂದಿನ ದಿನಗಳಲ್ಲಿ ನೊಳಂಬರ ರಾಜಕೀಯ, ಆರ್ಥಿಕ, ಸಮಾಜಿಕ, ಕಲೆ ಮತ್ತು ವಾಸ್ತುಶಿಲ್ಪ ಸಾಂಕೃತಿಕ ಕೊಡುಗೆಗಳು ಮತ್ತು ಪ್ರಸ್ತುತ ಸಮಾಜದ ಸ್ಥಿತಿಗತಿ ಮುಂತಾದ ವಿಷಯಗಳನ್ನು ಅಧ್ಯಯನ ಮಾಡಲು ಈ ಕೆಳಕಂಡ ಗುರಿ ಮತ್ತು ಉದ್ದೇಶಗಳನ್ನು ಹೊಂದಿದ್ದು ಇದರ ಸದುಪಯೋಗವನ್ನು ಸಮಾಜ ಮತ್ತು ಸಾರ್ವಜನಿಕರು ಪಡೆದುಕೊಳ್ಳಲು ಮನವಿ.

ಗುರಿ ಮತ್ತು ಉದ್ದೇಶಗಳು :

1. ನೊಳಂಬ ಸಂಸ್ಕೃತಿಯ ಅಧ್ಯಯನ ಮತ್ತು ಇತರ ಸಮುದಾಯಗಳೊಂದಿಗೆ ತೌಲನಿಕ ಅಧ್ಯಯನ.
2. ವಿದ್ಯಾರ್ಥಿಗಳಿಗೆ ಮತ್ತು ಯುವ ಸಮುದಾಯಕ್ಕೆ ಪರಿಚಯಿಸಲು ಸರಳ ರೂಪದಲ್ಲಿ ನೊಳಂಬರ ಸಂಸ್ಕೃತಿಯ ಪರಿಚಯ ಕೈಪಿಡಿಗಳನ್ನು ಪ್ರಕಟಿಸುವುದು.
3. ನೊಳಂಬರ ಸಂಸ್ಕೃತಿ ಮತ್ತು ಅವರ ಸಾಧನೆಗಳ ಕುರಿತು ವಿಚಾರ ಗೋಷ್ಠಿಗಳು ಸಂಶೋಧನೆಗಳು, ಸಮ್ಮೇಳನಗಳು, ಚರ್ಚೆಗಳು, ಹಾಗೂ ವಿಶೇಷ ಉಪನ್ಯಾಸಗಳನ್ನು ನಡೆಸುವುದು.
4. ನೊಳಂಬರ ಸಂಸ್ಕೃತಿಯ ಅಧ್ಯಯನ ಆಕರಗಳನ್ನು (ಹಸ್ತಪ್ರತಿಗಳು, ಶಾಸನಗಳು, ಶಿಲ್ಪ–ವಾಸ್ತುಶಿಲ್ಪ, ಜನಪದ ಆಚರಣೆಗಳು, ಹಬ್ಬ–ಜಾತ್ರೆ ಮುಂತಾದ ಆಚರಣೆಗಳನ್ನು ದಾಖಲಿಸುವುದು, ಪುಸ್ತಕರೂಪದಲ್ಲಿ ಪ್ರಕಟಿಸುವುದು.
5. ನೊಳಂಬ ಸಂಸ್ಕೃತಿಯ ಅಧ್ಯಯನದ ಪುಸ್ತಕಗಳನ್ನು ಭಾರತದ ಇತರ ಭಾಷೆಗಳಿಗೆ ಭಾಷಾಂತರಿಸುವುದು.
6. ನೊಳಂಬರ ಸಾಮಾಜಿಕ–ಆರ್ಥಿಕ ಸ್ಥಿತಿ, ರಾಜಕೀಯ ಪ್ರಾತಿನಿಧ್ಯ, ಪ್ರಾಚೀನ ಮತ್ತು ಆಧುನಿಕ ಜೀವನ ವಿಧಾನವನ್ನು ಸಂಶೋಧಿಸುವುದು.
7. ನೊಳಂಬರ ಕುಲಕಸುಬುಗಳು, ಕೃಷಿ ವ್ಯವಸ್ಥೆ, ಸಮಾಜ ಸೇವಕರು, ಸಾಧಕರುಗಳ ಬಗ್ಗೆ ಅಧ್ಯಯನ, ಪುಸ್ತಕಗಳ ಪ್ರಕಟಣೆ.
8. ಪ್ರಾಚೀನ ನೊಳಂಬರ ಕೊಡುಗೆಗಳ ಸಂಶೋಧನಾತ್ಮಕ ಅಧ್ಯಯನ ಮತ್ತು ಪ್ರಕಟಣೆ.
9. ನೊಳಂಬರ ಸಂಸ್ಕೃತಿಯ ವಿವಿಧ ಹಂತಗಳನ್ನು ಗುರುತಿಸುವುದು.
10. ನೊಳಂಬರ ಸ್ಮಾರಕಗಳ ರಕ್ಷಣೆ ಮತ್ತು ಅವುಗಳ ಬಗ್ಗೆ ಮಾಹಿತಿ.

ಆರೋಗ್ಯಾಮೃತ 43


ಜೀವಾಮೃತ

ಹಿಂದಿನ ಸಂಚಿಕೆಯಿಂದ.....

ಇಲ್ಲ ನಾನು ಹೇಳಲು ಹೊರಟಿರುವುದು ನೀವು ತಿಳಿದುಕೊಂಡಿರುವ ಯೋಗಾಸನಗಳ ಬಗ್ಗೆ ಅಲ್ಲ. ಶರಣರು ಯೋಗಾಂಗದಲ್ಲಿ ಸಂಗತಿಯೂ ಇದೆ ಎಂದರೆ ನಿಮಗೆ ಆಶ್ಚರ್ಯವಾಗುತ್ತದೆಯೇನೋ? ಆ ಆಶ್ಚರ್ಯವನ್ನು ತಣಿಸಿಕೊಳ್ಳಲು ಏನು ಮಾಡಬೇಕು ಎಂದು ಕೇಳುತ್ತೀರಾ? ಓದುವುದನ್ನು ನಿಲ್ಲಿಸಬೇಡಿ. ಹಾಗೇ ಓದುತ್ತಾ ಹೋಗಿ ಅದು ತಿಳಿಯುತ್ತಾ ಹೋಗುತ್ತದೆ.

ಅರಿಷಡ್ವರ್ಗ ಅರಿ – ಷಡ್ವರ್ಗ

ಅರಿಷಡ್ವರ್ಗ ಎಂದರೇನೆಂಬುದನ್ನು ನಾನೇ ನಿಮಗೆ ಬಿಡಿಸಿ ಹೇಳಬೇಕಾಗಿಲ್ಲ ಅಲ್ಲವೇ? ಹಾಗಂದರೆ ಏನು? ಅವು ಯಾವುವು ಎಂಬ ಪ್ರಶ್ನೆಗಳಿಗೆ ಉತ್ತರ ನಿಮ್ಮ ನಾಲಿಗೆ ಮೇಲೆಯೇ ಖಾಯಂ ಆಗಿ ಮನೆ ಮಾಡಿಕೊಂಡಿದೆ. ಅರಿ ಎಂದರೆ ಸಂಸ್ಕೃತ ಭಾಷೆಯಲ್ಲಿ ವೈರಿ ಎಂದರ್ಥ. ಷಡ್ವರ್ಗ ಎಂದರೆ ಆರು ಹುಟ್ಟುಗುಣಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ಸರಗಳು ಇವು ನಿಮ್ಮ ವೈರಿಗಳಲ್ಲವೇ? ಹೌದು! ಹೌದು!! ಇನ್ನು ಎಷ್ಟು ಸಾರಿ ಕೇಳುತ್ತೀರಿ ಎನ್ನುತ್ತೀರಾ? ಕೋಪ ಮಾಡಿಕೊಳ್ಳಬೇಡಿ ಮಾರಾಯ. ಆಗಲೇ ನಿಮ್ಮ ವೈರಿಗೆ ನೀವು ಬಲಿಯಾದಿರಿ. ಇದೇ ನೋಡಿ ಈ ಅರಿಷಡ್ವರ್ಗಗಳ ಹೈನಸ್ ಅಥವಾ ನಮ್ಮ ನಿಮ್ಮ ವೀಕ್‌ನೆಸ್. ಗೊತ್ತಿದ್ದೂ ಗೊತ್ತಿದ್ದೂ ಮತ್ತೆ ಅವುಗಳ ಬಲೆಯಲ್ಲಿ ಬೀಳುತ್ತೇವೆ. ಅಥವಾ ಅವೇ ನಮ್ಮನ್ನು ತಮ್ಮ ಬಲೆಯಲ್ಲಿ ಬೀಳಿಸಿಕೊಳ್ಳುತ್ತವೆ. ಅದಕ್ಕೆ ನಮ್ಮ ಋಷಿ ಮುನಿಗಳು ಸಿಟ್ಟಿನಿಂದ ಈ ಆರು ಹುಟ್ಟುಗುಣಗಳನ್ನು ವೈರಿ ಎಂದು ಕರೆದುಬಿಟ್ಟಿದ್ದಾರೆ. ನೋಡಿ ನಮ್ಮದು ಎಂಥಾ ದುರ್ವಿಧಿ. ಯಾವ ಗುಣಗಳು ನಮ್ಮೊಂದಿಗೆ ಹುಟ್ಟಿ ನಮ್ಮೊಂದಿಗೆ ಬೆಳೆದು ಸಾಯುವ ವರೆಗೂ ನಮ್ಮ ಅನಿವಾರ್ಯ ಸಂಗಾತಿಗಳಾಗಿರುತ್ತವೆಯೋ ಅವುಗಳೇ ನಮ್ಮ ವೈರಿಗಳು. ಈ ವೈರಿಗಳ ಜೊತೆಗೆ ಹೋರಾಡುತ್ತಲೇ ಬದುಕಬೇಕೇ? ಆ ದೇವರು ಎಷ್ಟು ಕೆಟ್ಟವನಲ್ಲವೇ? ಒಬ್ಬ ವೈರಿಯನ್ನು ಎದುರಿಸುವುದೇ ಕಷ್ಟವಿರುವಾಗ ಆರು ವೈರಿಗಳನ್ನಿಟ್ಟು ತಾನು ಮಾತ್ರ ಅವುಗಳಿಗೆ ಅತೀತನಾಗಿ ನಮ್ಮನ್ನು ತಮಾಷೆ ಮಾಡಿ ನಗುತ್ತಿದ್ದಾನಲ್ಲ, ಅವನು ಕರುಣಾಸಾಗರನೇ? ಭಕ್ತವತ್ಸಲನೇ?



ಶ್ರೀ ಶ್ರೀ ಬಸವಾನಂದಸ್ವಾಮಿಗಳವರು
ಗುರುಬಸವ ಮಹಾಮನೆ,
ಮನಗುಂಡಿ, ಧಾರವಾಡ

ಅವನು ಅತೀತನೇ! ಅವನು ಎಂದರೆ ಯಾರು? ನಮಗೆ ಗೊತ್ತಿರುವುದು ಮೂರು ದೇವರುಗಳು. 33 ಕೋಟಿ ದೇವತೆಗಳು ಹೆಚ್ಚು ಕಡಿಮೆ ಅವರೆಲ್ಲರೂ ನಮ್ಮ ಹಾಗೆ ಅಥವಾ ನಮಗಿಂತಲೂ ಹೆಚ್ಚು ಈ ಅರಿಷಡ್ವರ್ಗಗಳಿಗೆ ಬಲಿಯಾದವರೇ. ನಮ್ಮ ಬ್ರಹ್ಮದೇವರು ಕಾಮವಶರಾಗಿ ತಾನು ಸೃಷ್ಟಿಸಿದ ಸರಸ್ವತಿಯನ್ನು ಮದುವೆಯಾದರಂತೆ. ವಿಷ್ಣು ದೇವರು ಸಿರಿಗೆ ಸೋತು ಎದೆಯನ್ನೇ ಆಕೆಯ ವಾಸಸ್ಥಾನವಾಗಿ ನೀಡಿದರಂತೆ. ಇನ್ನು ರುದ್ರದೇವರಂತೂ ಬಿಡಿ ಒಬ್ಬರು ಸಾಕಾಗುವುದಿಲ್ಲವೆಂದು ತೊಡೆಯ ಮೇಲೊಬ್ಬರನ್ನೂ ತಲೆಯ ಮೇಲೊಬ್ಬರನ್ನೂ ಕೂಡಿಸಿಕೊಂಡು ಎಲ್ಲರಿಗೂ ಸಾಧಕರಿಗೆ ಈ ವಚನವನ್ನು ಓದಿ, ಕೇಳಿ ಗೊತ್ತೇ ಇಲ್ಲ. ಹನ್ನೆರಡನೇ ಶತಮಾನದ ದಿವ್ಯ ಮಾನವರು ತಮ್ಮ ಮಾನವತನವನ್ನು ಸಾರ್ಥಕಪಡಿಸಿಕೊಂಡ ಈ ಮಂಗಳದ ಮಹಾ ಲಿಂಗದ ಪರಿಚಯ ಕನ್ನಡ ನಾಡಿನ ಜನರಿಗೆ ಇನ್ನೂ ಪೂರ್ಣವಾಗಿ ಆಗಿಲ್ಲ. ಮೇಲೆ ಮೇಲೆ ನಾಲ್ಕಾರು ವಚನ ಕಲಿತುಕೊಂಡು ಭಾಷಣ ಮಾಡಿ ಬೀಗುವ ನಾವೆಲ್ಲರೂ, ನೀವು ನನ್ನ ಜಾತಿಯವರೇ ಎಂದು ಭಾವಿಸುತ್ತೇನೆ. ನಮ್ಮಿಬ್ಬರನ್ನು ಸೇರಿಸಿ ಹೇಳುತ್ತೇನೇ. ನಮ್ಮಂಥವರಿಗೆ ಲಿಂಗವ್ವ ತಾಯಿಂಯು ಈ ಪರಮಾಮೃತದ ಸವಿ ಹತ್ತುವುದು ಕಷ್ಟ. ಅರ್ಥ ಮಾಡಿಕೊಂಡರೆ ಜನ್ಮ ಸಾರ್ಥಕ.

ಆಧಾರ ಚಕ್ರ ಎಂದರೆ ನಮ್ಮ ಬೆನ್ನುಮೂಳೆಯ ಕೆಳಭಾಗದಲ್ಲಿ ನೆಲೆಸಿರುವ ಮಹಾನ್ ಶಕ್ತಿಕೇಂದ್ರ. ಅಲ್ಲಿ ಕುಂಡಲಿನಿ ಎಂಬ ಹೆಸರಿನಿಂದ ಆತ್ಮಶಕ್ತಿಯು ಗುಪ್ತವಾಗಿ ಸುಪ್ತವಾಗಿ ಅಡಗಿಕೊಂಡಿದೆ. ಅದರಲ್ಲಿ ಸ್ವಲ್ಪ

ಭಾಗ ಶಕ್ತಿಯನ್ನು ಮಾತ್ರ ನಾವು ಈಗ ಬಳಸಿಕೊಂಡು ದೈನಂದಿನ ಜೀವನ ನಡೆಸುತ್ತಿದ್ದೇವೆ. ಅಧೋಮುಖ ಪ್ರವೃತ್ತಿ ಗಳೇ ಹೆಚ್ಚಾಗಿ ಕೆಲಸ ಮಾಡುವುದಕ್ಕೆ ಇದೇ ಕಾರಣವಾಗಿದೆ. ಈ ಶಕ್ತಿಯನ್ನು ಜಾಗೃತಗೊಳಿಸಿ ಊರ್ಧ್ವಮುಖಿಗೊಳಿಸಿದ ಲಿಂಗಮ್ಮ ತಾಯಿಯು ಅನುಭವ ನಮ್ಮೆಲ್ಲರಿಗೂ ಉಂಟುಗುತ್ತದೆ.

ಆಧಾರ ಬಲಿಯೇ ಬೇಗೆವರಿಯಿತ್ತು ಕಿಚ್ಚು ಆವರಿಸಿ ಊರ್ಧ್ವಕ್ಕೇರಿತ್ತು

ಆಧಾರ ಬಲಿಯೆ ಎಂದರೆ ಆಧಾರ ಚಕ್ರ ಸಶಕ್ತಗೊಂಡು, ಬೇಗೆವರಿಯಿತ್ತು. ಬೇಗೆ ಎಂದರೆ ಬೆಂಕಿ. ಕುಂಡಲಿನಿ ಶಕ್ತಿ ಜಾಗೃತವಾಗಿತ್ತು, ಕಿಚ್ಚು ಆವರಿಸಿ ಊರ್ಧ್ವಕ್ಕೇರಿತ್ತು ಎಂದರೆ ಕುಂಡಲಿನಿ ಶಕ್ತಿ ವಿಸ್ತಾರಗೊಂಡು ಊರ್ಧ್ವಮುಖಿ ಪ್ರಯಾಣವನ್ನು ಪ್ರಾರಂಭಿಸಿತು. ಈಗ ನಾವು ಸಾಮಾನ್ಯವಾಗಿ ಮೂರು ಚಕ್ರಗಳನ್ನು ಮಾತ್ರ ಬಳಸಿಕೊಂಡು ಜೀವನ ಮಾಡುತ್ತೇವೆ. ಆಧಾರ, ಸ್ವಾಧಿಷ್ಠಾನ, ಮಣಿಪೂರಕ. ಅಂದರೆ ಹಸಿವು, ತೃಷೆ, ನಿದ್ರೆ, ವಿಕಾರ ಇವುಗಳಲ್ಲಿಯೇ ಜೀವನ ವ್ಯರ್ಥವಾಗಿ ಹೋಗುತ್ತಿದೆ. ಕುಂಡಲಿನಿ ಶಕ್ತಿಯು ಅಗ್ನಿ ಮೇಲ್ಮುಖಕ್ಕೆ ಪಯಣಿಸಿದಂತೆ ಹೃದಯದಲ್ಲಿರುವ 'ಅನಾಹತ' ಚಕ್ರದಲ್ಲಿರುವ 'ಆಜ್ಞಾ' ಚಕ್ರಗಳು ಜಾಗೃತಗೊಂಡು ಆಧ್ಯಾತ್ಮಿಕ ಪ್ರವೃತ್ತಿ ಹೆಚ್ಚಾಗುತ್ತದೆ. ಕೀಳು ಕಾಮನೆಗಳ ಹಿಡಿತ ಕಡಿಮೆಯಾಗಿ ಸದ್ಗುಣ ಸಂಪತ್ತು ನಮ್ಮೊಳಗಿನಿಂದಲೇ ಉದಿಸಲು ಸದಭಿರುಚಿಗಳು, ಪ್ರಾರಂಭವಾಗುತ್ತದೆ. ಮುಂದಿನ ಅನುಭವವನ್ನು ನಾನು ಹೇಳುವುದು ಬೇಡ. ಏಕೆಂದರೆ ಆ ಅನುಭವ ಹೇಳಲು ಪ್ರಯತ್ನಿಸಿದರೆ ಅದು ಕೇವಲ ಶಾಬ್ದಿಕ ಅನುಭವವಾಗಿ ನಿಮಗೆ ತಲೆ ಬೇಸರವನ್ನು ತರುತ್ತದೆ. ಈ ಕಾರಣದಿಂದ ಆ ಮಹಾನುಭಾವಿ ಮಹಾಮಾತೆಯ ಮಾತಿನಿಂದಲೇ ಕೇಳಿಬಿಡೋಣ. ಎರಡು ಸ್ಥಳಗಳನ್ನು ನಿರೂಪಿಸಿದ್ದಾರೆ. ಶರಣಸ್ಥಳ ಮತ್ತು ಐಕ್ಯಸ್ಥಳ. ಈ ಎರಡೂ ಸ್ಥಳಗಳು ಶರಣನ ಪರಿಪೂರ್ಣಾವಸ್ಥೆಯ ನಿಲುವುಗಳು. ಶರಣಸ್ಥಳದಲ್ಲಿ ಮಾನವ ಮುಟ್ಟಬಹುದಾದ ಸಾಧಿಸಬಹುದಾದ ಆಧ್ಯಾತ್ಮದ ಉನ್ನತಿಯನ್ನು ಸಾಧಿಸಿ ಐಕ್ಯಸ್ಥಳದಲ್ಲಿ ಪರಮಾತ್ಮನೊಡನೆ ಸಂಪೂರ್ಣ ಸಾಮರಸ್ಯವನ್ನು ಹೊಂದುತ್ತಾನೆ. ಇದರ ಅರ್ಥ ದೇಹವನ್ನು ಬಿಟ್ಟು ಪ್ರಾಣ ಹೋಗುತ್ತದೆ ಎಂದು ಅರ್ಥವಲ್ಲ; ದೇಹದಲ್ಲಿಯೇ ಇರುವ ಶಕ್ತಿ ಕೇಂದ್ರಗಳಾದ ಆರು ಚಕ್ರಗಳನ್ನು ದಾಟಿ ಏಳನೆಯ ಚಕ್ರ ಅಂದರೆ ಬ್ರಹ್ಮರಂಧ್ರ ಸ್ಥಾನದಲ್ಲಿ ನೆಲೆ ನಿಂತು ಅತ್ಯಂತಿಕ ಆನಂದವನ್ನು ಅನುಭವಿಸುತ್ತಾನೆ. ಈ ಅವಸ್ಥೆಯಲ್ಲಿ ಎಲ್ಲಾ ಕ್ರಿಯೆಗಳು ನಿಷ್ಪತ್ತಿ ಹೊಂದಿ ಮಾತು ಮೌನವಾಗುತ್ತದೆ. ಈ ಸ್ಥಿತಿಯನ್ನು ಹೀಗೆ ಎಂದು ಕರಾರುವಾಕ್ಕಾಗಿ ಮಾತಿನಲ್ಲಿ ಚಿತ್ರಿಸುವುದು ಬಹು ಕಠಿಣ. ಆದರೂ ಈ ನಿಲುವನ್ನು ಸಾಧಿಸಿಕೊಂಡ ಅಸಾಮಾನ್ಯ ಶರಣೆ ಹಡಪದ ಅಪ್ಪಣ್ಣನವರ ಸತಿ ಯೋಗಪ್ರವೀಣೆ ಲಿಂಗಮ್ಮ ತಾಯಿಯು ಯೋಗಾಂಗದ ಉನ್ನತ ಸ್ಥಿತಿಯನ್ನು ತಮ್ಮ ಒಂದು ವಚನದಲ್ಲಿ ಹೀಗೆ ನಿರೂಪಿಸಿದ್ದಾರೆ.

ಆಧಾರವ ಬಲಿಯೇ ಬೇಗೇವರಿಯಿತ್ತು
ಕಿಚ್ಚು ಆವರಿಸಿ ಊರ್ಧ್ವಕ್ಕೇರಿತ್ತು
ಸಾಸಿರದಳದ ಅಮೃತದ ಕೊಡ ಕಾಯಿತ್ತು,
ಕಾಯ್ತು ಅಮೃತ ಉಕ್ಕಿ ತೊಟ್ಟಿಕ್ಕಿ
ಅಮೃತವನುಂಡು ಹಸಿವು ಕೆಟ್ಟಿತ್ತು, ತೃಷೆ ಅಡಗಿತ್ತು ನಿದ್ರೆಯರತಿತ್ತು ಅಂಗಗುಣವಳಿಯಿತ್ತು ಲಿಂಗಗುಣನಿಂದಿತ್ತು ಸಂಗ ಸುಖ ಹಿಂಗಿತ್ತು ಅಂಗಳಿಂಗವೆಂಬ ಉಭಯವಳಿದು ಮಂಗಳ ಮಹಾ ಬೆಳಗಿನಲ್ಲಿಯೇ ಓಲಾಡಿ ಸುಖಿಯಾದೆನಯ್ಯಾ
ಅಪ್ಪಣ್ಣಪ್ರಿಯ ಚೆನ್ನಬಸವಣ್ಣ

ಈ ಮಂಗಳದ ಮಹಾ ಬೆಳಗನ್ನು ನೀವೇನಾದರೂ ಕಂಡಿದ್ದೀರಾ. ಇನ್ನೊ ಮೂರು ಸಾರಿ ಈ ವಚನವನ್ನು ಗಮನಕೊಟ್ಟು ಓದಿ. ಶಬ್ದಾರ್ಥಗಳನ್ನಾದರೂ ಒಳಗೆ ಇಳಿಸಿಕೊಳ್ಳಲು ಸಾಧ್ಯವೇ ಪ್ರಯತ್ನಿಸಿ. ಸಹಸ್ರದಳದ ಅಮೃತದ ಕೊಡ ಕಾಯುವುದೆಂದರೇನು? ಉಕ್ಕಿ ತೊಟ್ಟಿಕ್ಕುವುದಂದರೇನು? ನಮಗೆ ಕೇವಲ ಗ್ಯಾಸ್ ಮೇಲೆ ನಂದಿನಿ ಹಾಲನುಕ್ಕಿಸಿ ಮನೆಯ ಸಂಪತ್ತು ಹೆಚ್ಚಾಯಿತೆಂದು ರೂಢಿಯೇ ಹೊರತು ಅಮೃತದ ಕೊಡವನ್ನು ಕಾಯಿಸುವುದಾಗಲೀ ಅದರೊಳಗಿರುವ ಅಮೃತವನ್ನು ಕೆಳಗಿಳಿಸಿಕೊಂಡು ಸವಿಯುವುದಾಗಲೀ ಗೊತ್ತಿಲ್ಲ, ಅಷ್ಟೇ ಅಲ್ಲ.

ಲಕ್ಷ ಲಕ್ಷ ಸಾವಿರದಳದ ಅಮೃತದ ಕೊಡ ಕಾಯ್ತು ಕಾಯ್ದ ಅಮೃತ ಉಕ್ಕಿ ತೊಟ್ಟಿಕ್ಕಿ ಅಮೃತವನುಂಟು ಹಸಿವು ಕೆಟ್ಟಿತ್ತು, ತೃಷೆ ಅಡಗಿತ್ತು, ನಿದ್ರೆಯರತಿತ್ತು, ಅಂಗ ಗುಣವಳಿಯಿತು ಲಿಂಗಗುಣ ನಿಂದಿತ್ತು, ಸಂಗಸುಖ ಹಿಂಗಿತ್ತು ಅಂಗಲಿಂಗವೆಂಬ ಉಭಯವಳಿದು ಮಂಗಳ ಮಹಾ ಬೆಳಗಿನಲ್ಲಿಯೇ ಓಲಾಡಿ ಸುಖಿಯಾದೆನಯ್ಯಾ ಅಪ್ಪಣ್ಣಪ್ರಿಯ ಚೆನ್ನಬಸವಣ್ಣ.ನಮಗೆಲ್ಲ ಸ್ವಲ್ಪ ತಿಳಿಯುವಂತೆ ಸರಳವಾದ ಭಾಷೆಯಲ್ಲಿ ಯೋಗಾಂಗದ ಅನುಭವವನ್ನು ತಾಯಿ ಮಕ್ಕಳಿಗೆ ತುತ್ತು ಮಾಡಿ ಉಣಿಸುವಂತೆ ಮಾತೃ ಹೃದಯ ಅಪ್ಪ ಬಸವಣ್ಣನವರು ಗುಟುಕು ಮಾಡಿಕೊಡುತ್ತಿದ್ದಾರೆ. ಸವಿಯುತ್ತೀರಾ ಇಲ್ಲ ಎನ್ನಲು ನಿಮ್ಮ ಕೈಯಿಂದ ಆಗುವುದಿಲ್ಲ.

ಮುಂದುವರೆಯುವುದು.....

ಆರೋಗ್ಯಕ್ಕಾಗಿ ಆಯುರ್ವೇದ ಲೈಫು ಹೀಗಿರಲಿ: ಸಂಚಿಕೆ–8

ಸ್ವರ್ಣ ರತ್ನಾಭರಣ ಧಾರಣೆ ಮತ್ತು ದೇವತಾ ಪ್ರಾರ್ಥನೆ ನಂತರ, ಸ್ವಾಭಾವಿಕೇಚ್ಛಾ:

ಮನುಷ್ಯರಿಗೆ ಸಾಮಾನ್ಯವಾಗಿ ದೈಹಿಕವಾಗಿ ನಿತ್ಯವೂ ನಾಲ್ಕು ರೀತಿಯ ವಾಂಛೆ/ ಅಪೇಕ್ಷೆಗಳು ಉಂಟಾಗುತ್ತವೆ. ಹಸಿವೆ, ಬಾಯಾರಿಕೆ, ನಿದ್ರೆ ಮತ್ತು ಸಂಭೋಗದ ವಾಂಛೆ. ಇವುಗಳನ್ನು ತಡೆಯದೆ ನಿಯಂತ್ರಣದಲ್ಲಿಟ್ಟುಕೊಂಡು ಯಥಾ ಸಮಯಗಳಲ್ಲಿ ಅವುಗಳನ್ನು ಪೂರೈಸಿಕೊಳ್ಳಬೇಕು,ಇಲ್ಲದಿದ್ದರೆ ಆರೋಗ್ಯಕ್ಕೆ ಕೆಡುಕುಂಟಾಗಬಹುದು.

ಹಸಿವೆಯನ್ನು ತಡೆದರೆ : ಮೈಕೈ ನೋವು, ರುಚಿ ಇಲ್ಲದಿರುವುದು, ಸುಸ್ತು, ತೂಕಡಿಕೆ, ದೌರ್ಬಲ್ಯ, ಕಣ್ಣುಗಳು ಸುಸ್ತಾದಂತೆ ಅನಿಸುವುದು, ಧಾತುಗಳ ಕ್ಷಯ ಮತ್ತು ಬಲಕ್ಷೀಣತೆ ಉಂಟಾಗಬಹುದು.

ಬಾಯಾರಿಕೆ ತಡೆಯಿಂದ : ಗಂಟಲು ಮತ್ತು ಬಾಯಿ ಒಣಗುವುದು, ಕಿವಿಗಳು ಮುಚ್ಚಿಕೊಳ್ಳುವುದು, ರಕ್ತದ್ರವ ಕಡಿಮೆಯಾಗಿ ಎದೆಯಲ್ಲಿ ನೋವು ಕಂಡು ಬರಬಹುದು.

ನಿದ್ರೆಯ ತಡೆಯಿಂದ : ಆಕಳಿಕೆ, ತಲೆಭಾರ, ಮೈ ಕೈ ನೋವು, ತೂಕಡಿಕೆ ಮತ್ತು ಅಜೀರ್ಣಗಳು ಕಂಡು ಬರಬಹುದು.

ಸಂಭೋಗದ ಆಸೆಯನ್ನು ತಡೆ ಹಿಡಿದರೆ : ಧಾತು ಕ್ಷಯಗೊಂಡು ಶರೀರ ಕ್ಷೀಣಿಸುವುದು, ಶುಕ್ರಾಶ್ಮರಿ ಅಂದರೆ ವೀರ್ಯದಲ್ಲಿ ಕಲ್ಲುಗಳು ಉಂಟಾಗಬಹುದು. ಆದ್ದರಿಂದ ಈ ನಾಲ್ಕನ್ನು ಸಕಾಲದಲ್ಲಿ ಪೂರೈಸಿಕೊಳ್ಳುವುದು ಒಳಿತು.

ಭೋಜನ ವಿಧಿ : ಆಹಾರ, ಆಹಾರ ಸೇವನೆ ಮುಂತಾದವುಗಳ ಬಗ್ಗೆ ಸಹಸ್ರಾರು ವರ್ಷಗಳ ಹಿಂದೆಯೇ ಆಯುರ್ವೇದದಲ್ಲಿ ಹೇಳಿರುವಷ್ಟು ವಿಚಾರಗಳು ಬೇರೆಲ್ಲೂ ಕಂಡುಬರುವುದಿಲ್ಲ.

ಶರೀರದ ಪೋಷಣೆ, ರಕ್ಷಣೆಗೆ ಮೂರು ಉಪಸ್ಥಂಭ/ ಉಪಕಂಬಗಳಾದ , ಆಹಾರ, ನಿದ್ರೆ ಮತ್ತು ಬ್ರಹ್ಮಚರ್ಯ, ಇವುಗಳಲ್ಲಿ ಪ್ರಮುಖವಾದ ಆಹಾರವನ್ನು ಮೊದಲಿಗೆ ಹೇಳಲಾಗಿದೆ.

ನಾವು ಮತ್ತು ನಮ್ಮ ಶರೀರ ಏನೆಂದರೆ, ನಾವು ಏನನ್ನು ಸೇವಿಸುತ್ತೇವೆಯೋ/ಎನನ್ನು ತಿನ್ನುತ್ತೇವೆಯೋ/ ಭುಂಜಿಸುತ್ತೇವೆಯೋ ಅದೇ ನಾವಾಗುತ್ತೇವೆ. ಈ ವಿಚಾರವನ್ನು ಎಲ್ಲರೂ ಮನದಟ್ಟು ಮಾಡಿಕೊಳ್ಳಬೇಕು.

ಜಠರಾಗ್ನಿಯು ನೀವು ತಿಂದ ಆಹಾರವನ್ನು ಜೀರ್ಣ ಮಾಡುತ್ತದೆ. ಆಹಾರ ಇಲ್ಲದಿದ್ದರೆ ಧಾತುಗಳು ಕ್ಷೀಣಿಸಿ ಪ್ರಾಣ ಹಾನಿಯೂ ಆಗಬಹುದು.

ಭೋಜನ/ ಊಟ ಯಾವಾಗ ಮಾಡಬೇಕು?

"ಹಸಿವಿಲ್ಲದುಣಬೇಡ,
ಹಸಿದು ಮತ್ತಿರಬೇಡ,
ಬಿಸಿ ಗೂಡಿ ತಂಗಳುಣಬೇಡ,
ವೈದ್ಯನ ಬೆಸಸಲೇ ಬೇಡ ಸರ್ವಜ್ಞ"

ಸರ್ವಜ್ಞ ಕವಿಯು ಈ ತ್ರಿಪದಿ ಬಹು ಪ್ರಸಿದ್ಧವಾದುದು ಆಯುರ್ವೇದ ಮೂಲ ತತ್ವವನ್ನು ಆಧರಿಸಿ ರಚಿಸಿದಂತಹ ಈ ತ್ರಿಪದಿ ಆಹಾರ ಸೇವನೆಯ ಮೂಲಭೂತ ತತ್ವವನ್ನು ವಿವರಿಸಿದೆ.

ಹಸಿವಿಲ್ಲದಿದ್ದರೆ ಊಟ ಮಾಡಬಾರದು, ಹಸಿವಾಗಿದ್ದರೆ ಊಟ ಮಾಡದೇ ಇರಬಾರದು. ಹಸಿವಾದಾಗ ಮಾತ್ರ ಊಟ ಮಾಡಬೇಕು. ಇದರಿಂದಾಗಿ ಪ್ರಸನ್ನತೆ ದೊರಕಿ ಬಲ, ಶರೀರ ಧಾರಣಾ ಶಕ್ತಿ, ನೆನಪಿನ ಶಕ್ತಿ ಆಯಸ್ಸು, ಸಾಮರ್ಥ್ಯ, ವರ್ಣ, ಓಜಸ್ಸು, ವೀರ್ಯ ವೃದ್ಧಿಯಾಗಿ ದೇಹವು ಶೋಭಾಯಮಾನವಾಗುತ್ತದೆ.

ಹಸಿವಾಗಿದ್ದರು ಊಟ ಮಾಡದೆ ಇದ್ದರೆ ಯಾವ ರೀತಿ ಕಟ್ಟಿಗೆ ಇಲ್ಲದೆ ಒಲೆಯಲ್ಲಿನ ಬೆಂಕಿ ಹಾರಿ ಹೋಗುತ್ತದೆಯೋ ಅದೇ ರೀತಿ ಆಹಾರವು ಕಟ್ಟಿಗೆಯ ಉಪಾದಿಯಲ್ಲಿ ಜಠರಾಗ್ನಿಯನ್ನು ಮಂದಗೊಳಿಸುತ್ತದೆ.



ಡಾ. ಶ್ರೀಪ್ರಸಾದ್ ಎಚ್.ಎಸ್.
ಬಿಎಎಂಎಸ್ (ಆ), ಬಿಎಎಂಎಸ್ (ಇಂ)
ಶ್ರೀಪ್ರಸಾದ್ ಆಯುರ್ವೇದ # 9
ಮನುವನ, ವಿಜಯನಗರ.
ಬೆಂಗಳೂರು–40. 080–23301090

ಭೋಜನ ಕಾಲ : ಊಟದ ಸಮಯ
ಯಾಮ ಮಧ್ಯೇ ನ ಭೋಕ್ತವ್ಯಂ ಯಾಮಯುಗ್ಮಂ ನ ಹಾಪಯೇತ್। ಯಾಮಾಂತೇ ನಿಶಿ ಭೋಕ್ತವ್ಯಂ ತ್ರಿಯಾಮಂ ಶಯನಂ ಭಜೇತ್॥

ಸಾಮಾನ್ಯವಾಗಿ ದಿನದಲ್ಲಿ ಎರಡು ಸಾರಿ ಮಾತ್ರ ಆಹಾರ ಸೇವಿಸುವುದು ಸೂಕ್ತವಾದುದು, ಮೊದಲನೆಯ ಆಹಾರ ಕಾಲ ದಿನದ ಎರಡನೆಯ ಯಾಮದಲ್ಲಿ ಅಂದರೆ ಸೂರ್ಯೋದಯದ 3 ಗಂಟೆಯ ನಂತರ ಮತ್ತು ಸೂರ್ಯೋದಯದ ಆರು ಗಂಟೆಗಳ ಒಳಗಡೆಯ ಸಮಯ ಸುಮಾರಾಗಿ ಬೆಳಗ್ಗೆ 9.00 ಗಂಟೆಯಿಂದ 12.00 ಗಂಟೆಯ ಅಂತರದಲ್ಲಿ ಋತುವಿಗನುಗುಣವಾಗಿ ಇದು ಹೆಚ್ಚು ಕಡಿಮೆ ಆಗಬಹುದು, ಹಾಗೂ ರಾತ್ರಿಯ ಊಟ ಸೂರ್ಯಾಸ್ತವಾಗಿ 3.00 ಗಂಟೆಯೊಳಗೆ ಇದು ಆಹಾರ ಸೇವಿಸಲು ಸರಿಯಾದ ಸಮಯ, ಆದರೆ ಇಂದು ನಮ್ಮ ವೃತ್ತಿ ಪ್ರವೃತ್ತಿ ಹವ್ಯಾಸಗಳಿಗನುಸಾರ ಇವುಗಳು ಬಹಳಷ್ಟು ಬದಲಾಗಿದೆ. ಅಭ್ಯಾಸ ಬಲಕ್ಕನುಸಾರ ಇಂದಿನ ನಮ್ಮ ಆಹಾರ ಕಾಲವು ಸರಿ ಎನ್ನುವುದಾದರೂ ದಿನಕ್ಕೊಂದು ಸಮಯದಂತೆ ಮನಬಂದ ಸಮಯದಲ್ಲಿ ಊಟ ಮಾಡುವುದು ಯಾವಾಗಲೂ ಯಾರಿಗೂ ಒಳ್ಳೆಯದಲ್ಲ ಅಲ್ಪಸ್ವಲ್ಪ ವ್ಯತ್ಯಾಸವಾದರೂ ಅಭ್ಯಾಸವಾದ ಸಮಯದಲ್ಲಿಯೇ ಊಟ ಮಾಡಬೇಕು.

ಭೋಜನ ಸೇವಿಸುವ ವಿಧಿಯು ಅಗ್ನಿಹೋತ್ರ ವಿಧಿಯಂತೆ ಇರುತ್ತದೆ ಅಗ್ನಿಹೋತ್ರ ಕರ್ಮವನ್ನು ಬೆಳಿಗ್ಗೆ ಹಾಗೂ ಸಾಯಂಕಾಲ ಮಾಡಲಾಗುತ್ತದೆ ಅದೇ ರೀತಿ ಭೋಜನ ಸಮಯವನ್ನು ದಿನಕ್ಕೆರಡು ಬಾರಿ ಇಟ್ಟುಕೊಳ್ಳಬೇಕು.

ಯಾವಾಗ ಊಟಮಾಡಬೇಕು? ಆಗಾಗ ಆಹಾರ ಸೇವನೆ ಮಾಡಿದರೆ ಜೀರ್ಣಶಕ್ತಿ ಹಾಳಾಗಿ ಅಜೀರ್ಣ ಉಂಟಾಗುತ್ತದೆ. ಆಹಾರ ಕಾಲದಲ್ಲಿ ಒಮ್ಮೆ ತಿಂದ ಆಹಾರವು ಸರಿಯಾಗಿ ಜೀರ್ಣವಾದ ತರುವಾಯವೇ ನಂತರದ ಆಹಾರವನ್ನು ಸೇವಿಸಬೇಕು, ಇದು ನಿಯಮ. ತಿಂದ ಆಹಾರ ಸರಿಯಾಗಿ ಜೀರ್ಣವಾಗಿದೆಯೆಂದು ತಿಳಿದುಕೊಳ್ಳುವುದು ಹೇಗೆಂದರೆ, ಶುದ್ಧವಾದ ತೇಗು ಬರುವುದು ,ಶರೀರದಲ್ಲಿ ಉತ್ಸಾಹ ಮೂಡಿ ಮಲಮೂತ್ರಗಳು ಸರಿಯಾಗಿ ವಿಸರ್ಜನೆಯಾಗುವುದು, ಶರೀರ ಹಗುರವೆನಿಸಿ, ಹಸಿವೆ ಬಾಯಾರಿಕೆಗಳು ತೋರುವುದು, ಇವುಗಳು ಸೇವಿಸಿದ ಆಹಾರ ಸರಿಯಾಗಿ ಜೀರ್ಣವಾದ ಲಕ್ಷಣಗಳು.

ಗೋಪ್ಯತೆ : ಊಟ ಮತ್ತು ಮಲವಿಸರ್ಜನೆಗಳು ವೈಯಕ್ತಿಕ ಆಚರಣೆ ಅವನ್ನು ಗೌಪ್ಯವಾಗಿ ಮಾಡಬೇಕು. ಆಹಾರ ಸೇವನೆಯು ಒಂದು ಜವಾಬ್ದಾರಿಯುತ ಪವಿತ್ರ ಕಾರ್ಯ, ತಂದೆ ತಾಯಿ, ದೇವರುಗಳು, ಅತಿಥಿಗಳು, ಮಕ್ಕಳು, ಗುರುಗಳು ಹಾಗೆಯೇ ಪಶು ಪಕ್ಷಿ ಪ್ರಾಣಿಗಳು ಇವೆಲ್ಲರನ್ನೂ ಉಣಪಡಿಸಿದ ನಂತರವೇ ಊಟ ಮಾಡುವುದು.

ಊಟ ಮಾಡುವಾಗ ಶಾಂತ ಮನಸ್ಕರಾಗಿರಬೇಕು, ಜೋರಾಗಿ ಮಾತಾಡುತ್ತಾ, ಜಗಳವಾಡುತ್ತ ಅಥವಾ ಇನ್ಯಾವುದೋ ಉದ್ವೇಗಕ್ಕೆ, ಕೋಪಕ್ಕೆ ಒಳಗಾಗಿರುವುದು ಒಳಿತಲ್ಲ. ಕೈಯಲ್ಲಿ ಮೊಬೈಲ್, ಎದುರಲ್ಲಿ ದೂರದರ್ಶನಗಳು ಇದ್ದುಕೊಂಡು ತಟ್ಟೆಯಲ್ಲಿ ಏನನ್ನು ಹಾಕಿದ್ದಾರೆ?! ತಾನು ಏನನ್ನು ತಿನ್ನುತ್ತಿದ್ದೇನೆ?! ಎಂಬ ಅರಿವೇ ಇಲ್ಲದೆ ತಿನ್ನುವುದು ಸರ್ವದಾ ನಿಷಿದ್ಧ.

ಆಹಾರವು ಸುಖ ತರುವುದು ಹೀಗಾಗಿ ಅದನ್ನು ದೇಹ ಪೋಷಣೆಗಾಗಿ ಪ್ರೀತಿಯಿಂದ ಆಸ್ವಾದಿಸುತ್ತಾ ಸೇವನೆ ಮಾಡುವುದು ಸೂಕ್ತ.

ಮನವಿ

ನೊಳಂಬ ಅರಸರ ರಾಜ್ಯಭಾರ, ನೊಳಂಬ ಸಮುದಾಯದ ಮಠಗಳು, ಸಾಹಿತ್ಯ, ಇತಿಹಾಸ, ಕೃಷಿ, ಭಾಷೆ, ಬದುಕು, ಸಂಸ್ಕೃತಿ, ಸಾಂಸ್ಕೃತಿಕ ಚಟುವಟಿಕೆ, ವಾಸ್ತು ಶಿಲ್ಪಗಳ ಬಗ್ಗೆ ಅಧ್ಯಯನ ಮತ್ತು ಸಂಶೋಧನೆ ಮಾಡಲು ನೊಳಂಬ ಲಿಂಗಾಯತ ಸಂಘದಿಂದ ತುಮಕೂರು ವಿಶ್ವವಿದ್ಯಾನಿಲಯದಲ್ಲಿ ನೊಳಂಬ ಸಂಸ್ಕೃತಿ ಅಧ್ಯಯನ ಪೀಠವನ್ನು ಸ್ಥಾಪಿಸಿದ್ದು, ಅಧ್ಯಯನಕ್ಕಾಗಿ ಬರುವ ಅಭ್ಯರ್ಥಿ/ ಸಂಶೋಧಕರುಗಳಿಗೆ ಸೌಲಭ್ಯ ಕಲ್ಪಿಸಲು ಹಣದ ಕೊರತೆ ತುಂಬಾ ಇರುವುದರಿಂದ ದಾನಿಗಳಾದ ತಾವು ವಂತಿಗೆ ನೀಡಲು ಬಯಸಿದ್ದಲ್ಲಿ ಈ ಕೆಳಕಂಡ ಬ್ಯಾಂಕಿಗೆ ಹಣವನ್ನು ವರ್ಗಾವಣೆ ಮಾಡಲು ಮನವಿ ಮಾಡುತ್ತೇನೆ.

ಹೆಸರು	**: ನೊಳಂಬ ಲಿಂಗಾಯತ ಸಂಘ (ರಿ.)**
ಬ್ಯಾಂಕ್	**: ಎಸ್.ಬಿ.ಐ. ಬಸವೇಶ್ವರನಗರ**
ಖಾತೆ ಸಂಖ್ಯೆ	**: 54033145493**
ಐ.ಎಫ್.ಎಸ್.ಸಿ.	**: SBIN0040624**

ಬದುಕು ದೊಡ್ಡದು

ದಾಂಪತ್ಯದಲ್ಲಿ ಹಣವೇ ಪ್ರಧಾನವಾಗಲು ಮತ್ತು ಅದು ವಿರಸಕ್ಕೆ ತಿರುಗಲು ಬಲವಾದ ಕಾರಣಗಳಿವೆ. ಈ ಪೈಕಿ ನಗರೀಕರಣ ಪ್ರಮುಖ ಕಾರಣ, ಎಲ್ಲರಿಗೂ ಮಹಾನಗರಗಳಲ್ಲಿ ವಾಸ್ತವ್ಯ ಮಾಡಬೇಕು ಎಂಬ ಕನಸು, ಬೆಂಗಳೂರಂಥ ಶಹರದಲ್ಲಿ ಕಡಿಮೆ ಸಂಬಳವಿದ್ದರೂ, ಹಲವು ಕಷ್ಟ ತಾಪತ್ರಯಗಳಿದ್ದರೂ, ಖರ್ಚು ಹೆಚ್ಚಿದ್ದರೂ ಇಲ್ಲೇ ನೆಲೆಯೂರಬೇಕು ಎಂಬ ಹಂಬಲ. 'ಮಹಾನಗರದಲ್ಲಿ ಇದ್ದೇವೆ' ಎಂಬುದು ಪ್ರತಿಷ್ಠೆಯ ವಿಷಯವಾಗಿ ಬಿಟ್ಟಿದೆ. ನಗರೀಕರಣದಿಂದ ದಂಪತಿಯಲ್ಲಿ ಅಪೇಕ್ಷೆಗಳು ಜಾಸ್ತಿಯಾಗಿ, ಭಿನ್ನಾಭಿಪ್ರಾಯಗಳು ಕೂಡ ಹೆಚ್ಚಿವೆ. ಅಪೇಕ್ಷೆಗೆ ತಕ್ಕ ಹಾಗೆ ಬದುಕು ಸಾಗದಿದ್ದಾಗ ದಾಂಪತ್ಯದಲ್ಲಿ ಬಿರುಕು ಕಾಣಿಸಿಕೊಳ್ಳುತ್ತದೆ.

ಸಣ್ಣ ಕುಟುಂಬಗಳ ಸಂಖ್ಯೆ ಹೆಚ್ಚಿರುವುದು ಕೂಡ ಸಮಸ್ಯೆಗೆ ಕಾರಣ. ಹಿಂದೆ ಕೂಡು ಕುಟುಂಬಗಳು ಇರುತ್ತಿದ್ದವು. ಮನೆಯಲ್ಲಿ ಹಿರಿಯರು ಇರುತ್ತಿದ್ದರು. ಯಾವುದೇ ವಿಷಯಗಳಿದ್ದರೂ ಹಿರಿಯರ ಮಾತನ್ನು ಕೇಳಿ ಮುಂದುವರಿಯುತ್ತಿದ್ದರು. ಮದುವೆ ವಿಷಯದಲ್ಲೂ ಹಿರಿಯರ ಅಭಿಪ್ರಾಯವನ್ನು ಗೌರವಿಸಲಾಗುತ್ತಿತ್ತು. ಆದರೆ, ಇತ್ತೀಚಿನ ದಿನಗಳಲ್ಲಿ ಪರಿಸ್ಥಿತಿ ಬದಲಾಗಿದೆ. ಸಣ್ಣ ಕುಟುಂಬಗಳಲ್ಲಿ ಅದರ ಯಜಮಾನ/ಯಜಮಾನಿ ತಾನು ಮಾಡುವುದೇ ಸರಿ ಎಂದು ಭಾವಿಸುತ್ತಾನೆ/ಳೆ. ಇದರಿಂದ ದಾಂಪತ್ಯ ವ್ಯವಸ್ಥೆ ಬಹುಬೇಗ ಅಲುಗಾಡುತ್ತಿದೆ.

ಬಹುತೇಕ ಪ್ರಕರಣಗಳನ್ನು ನೋಡಿದರೆ ದಾಂಪತ್ಯದಲ್ಲಿ ಬಿರುಕು ಸೃಷ್ಟಿಯಾಗುವುದು ಮದುವೆಯಾದ ಎರಡು–ಮೂರು ವರ್ಷಗಳಲ್ಲೇ. ಇದಕ್ಕೆ ಕಾರಣ ಹೊಂದಾಣಿಕೆಯ ಕೊರತೆ. ಸ್ವತಂತ್ರವಾಗಿ ಇರುವುದು ಒಳ್ಳೆಯದೇ ಆದರೂ, ಹಿರಿಯರ ಜೀವನದ ಮಾದರಿಯನ್ನು, ಸಂಸ್ಕಾರಗಳನ್ನು ಮರೆಯಬಾರದು. ನವವಿವಾಹಿತರು ಮೊದಲಿನ ಮೂರ್ನಾಲ್ಕು ವರ್ಷಗಳ ಕಾಲವಾದರೂ, ಕೂಡು ಕುಟುಂಬದಲ್ಲಿ ಇದ್ದು, ಅಲ್ಲಿನ ಮೌಲ್ಯಗಳನ್ನು, ಸಂಸ್ಕಾರಗಳನ್ನು ಅಳವಡಿಸಿಕೊಂಡ ಬಳಿಕ ಪ್ರತ್ಯೇಕ ಮನೆ ಮಾಡಿದರೆ ಚೆನ್ನಾಗಿ ಬದುಕಬಹುದು. ಮದುವೆಯ ಬಳಿಕ ಮಕ್ಕಳು ನಮ್ಮ ಜತೆ ಇರಬೇಕು ಎಂಬ ಮನೋಭಾವ ಪಾಲಕರಲ್ಲೂ ಇರಬೇಕು.



ಪ್ರಶಾಂತ್ ಚಂದ್ರ ಎಸ್.ಎನ್
ಖ್ಯಾತ ವಕೀಲರು,
ಬೆಂಗಳೂರು.

ಆರೋಗ್ಯಕರ ಅಂತರ ಇರಲಿ

ಮದುವೆ ಮಾಡಿಕೊಟ್ಟ ಬಳಿಕ ತಂದೆ–ತಾಯಿ ಮಗಳ ಯೋಗಕ್ಷೇಮ ಬಯಸುವುದು ಸಹಜವೇ. ಆದರೆ, ಹಾಗಂತ ಮಗಳು ಮತ್ತು ಅಳಿಯನ ಸಂಸಾರದ ವಿಷಯದಲ್ಲಿ ಮೂಗು ತೂರಿಸುವುದು, ಹೀಗೇ ಮಾಡು ಎಂದು ಮಗಳಿಗೆ ತಾಕೀತು ಮಾಡುವುದು ಸರಿಯಲ್ಲ. ಮದುವೆಯ ಬಳಿಕ ಮಗಳ ಪಾಲಕರು ಅವರ ಸಂಸಾರದಿಂದ ಆರೋಗ್ಯಕರ ಅಂತರ ಕಾಯ್ದುಕೊಳ್ಳುವುದು ಅಗತ್ಯ. ಮಗಳು ಮತ್ತು ಅವರ ಮನೆಯವರ ನಿರ್ಧಾರಗಳನ್ನು ಗೌರವಿಸಬೇಕು. ಸ್ವತಂತ್ರ ನಿರ್ಧಾರ ತೆಗೆದುಕೊಳ್ಳಲು ಅವಕಾಶ ನೀಡಬೇಕು. ಗಂಭೀರ ಸನ್ನಿವೇಶಗಳಲ್ಲಿ 'ಹಸ್ತಕ್ಷೇಪ ಮಾಡಿದರೆ ತಪ್ಪಲ್ಲ.

ಹೋಲಿಕೆಯೇ ಸಮಸ್ಯೆ

ಬೇರೆಯವರೊಡನೆ ಹೋಲಿಕೆ ಮಾಡಿಕೊಳ್ಳುವ ಮೂಲಕ ಬಹಳಷ್ಟು ದಾಂಪತ್ಯ ಬದುಕು ಸೊರಗುತ್ತಿವೆ. ಪ್ರತಿ ಕುಟುಂಬ ವಿಶಿಷ್ಟ, ಪ್ರತಿ ವ್ಯಕ್ತಿ ವಿಶಿಷ್ಟ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಜೀವನ ಎಂಬುದು ರೇಸ್ ಅಲ್ಲ. ಅತಿಯಾದ ಅಪೇಕ್ಷೆಗಳು ತೊಂದರೆ ಸೃಷ್ಟಿಸುತ್ತವೆ. ಬೇಗನೆ ಸಿರಿವಂತರಾಗಬೇಕು ಎಂಬ ಒತ್ತಡ ವೈಯಕ್ತಿನ ಬದುಕನ್ನು, ದಾಂಪತ್ಯವನ್ನು ಹಾಳುಗೆಡವುತ್ತಿದೆ. ಬದುಕು ದೊಡ್ಡದು.

ಎಷ್ಟೋ ಜನರು ತಮ್ಮ 50–60ನೇ ವಯಸ್ಸಿನ ನಂತರ ಬದುಕನ್ನು ಎಂಜಾಯ್ ಮಾಡಲು ಆರಂಭಿಸುತ್ತಾರೆ. ಹೋಲಿಕೆ ಮಾಡಿಕೊಂಡು ನಮ್ಮ ನೆಮ್ಮದಿ ನಾವೇ ಹಾಳು ಮಾಡಿಕೊಳ್ಳುವುದರಲ್ಲಿ ಅರ್ಥವಿಲ್ಲ. ವೈವಾಹಿಕ ಸಂಬಂಧ ಗಟ್ಟಿಯಾಗಿರಲು ಸಾಮರಸ್ಯ, ತಾಳ್ಮೆ, ಪ್ರೀತಿ, ನಂಬಿಕೆ ಅಗತ್ಯ. ಇದನ್ನು ಅಳವಡಿಸಿಕೊಳ್ಳುತ್ತ, ಸಣ್ಣಪುಟ್ಟ ಅಡೆತಡೆಗಳನ್ನು ನಿವಾರಿಸಿಕೊಳ್ಳುತ್ತ ಮುಂದೆ ಸಾಗುವುದರಲ್ಲೇ ಬದುಕಿನ ಸೊಬಗಿದೆ.

ಪತ್ರಿಕೆಗೆ ಚಂದಾದಾರರಾಗಿ
ಪತ್ರಿಕೆಯ ಬೆಳವಣಿಗೆಗೆ ಸಹಕರಿಸಿ

ಮದುವೆ ಮತ್ತು ವಾಣಿಜ್ಯೀಕರಣ

ಭಾರತೀಯ ಸಂಸ್ಕೃತಿಯಲ್ಲಿ ವಿವಾಹ ಎಂಬುದು ಆದರ್ಶ ವ್ಯವಸ್ಥೆ ಮತ್ತು ಪವಿತ್ರ ಸಂಬಂಧ ಎಂಬ ನಂಬಿಕೆ ಅನಾದಿಕಾಲದಿಂದಲೂ ಇದೆ. ಅಲ್ಲದೆ, ಕುಟುಂಬ ವ್ಯವಸ್ಥೆಯನ್ನು ಮತ್ತು ಸಾಮಾಜಿಕ ಸ್ವಾಸ್ಥ್ಯವನ್ನು ಈ ವಿವಾಹ ಪರಂಪರೆ ಕಾಪಾಡಿಕೊಂಡು ಬಂದಿದೆ. ಆದರೆ, ಇತ್ತೀಚಿನ ದಿನಗಳಲ್ಲಿ ವಿವಾಹವು ವಾಣಿಜ್ಯ ವಹಿವಾಟಿನ ಸ್ವರೂಪ ಪಡೆದುಕೊಳ್ಳುತ್ತಿರುವುದು ವಿಪರ್ಯಾಸ. ಈ ಬಗ್ಗೆ ಸುಪ್ರೀಂ ಕೋರ್ಟ್ ಕೂಡ ನವೆಂಬರ್ 28, 2005ರಂದು ಕಳವಳ ವ್ಯಕ್ತಪಡಿಸಿದೆ. ಹೆಚ್ಚುತ್ತಿರುವ ವಿಚ್ಛೇದನ ಪ್ರಕರಣಗಳು ಕುಟುಂಬ ವ್ಯವಸ್ಥೆ ಮಾರಕ ಹೆಚ್ಚುತ್ತಿರುವ ವರದಕ್ಷಿಣೆ ದಾಹ ಒಂದೆಡೆಯಾದರೆ, ಮದುವೆಯಾದ ಕೆಲವೇ ಸಮಯದಲ್ಲಿ ವಿಚ್ಛೇದನದ ಹೊತ್ತಲ್ಲಿ ಭಾರಿ ಮೊತ್ತಕ್ಕೆ ಬೇಡಿಕೆ ಇಡುತ್ತಿರುವ ಯುವತಿಯರು. ಇದರಿಂದ ಯುವಕ–ಯುವತಿಯರಿಗೆ ವಿವಾಹ ಎಂಬುದು ಸುಂದರ ಕನಸಿನ ಬದಲಾಗಿ, ಬೆದರಿಕೆಯಂತೆ ಕಾಣುತ್ತಿದೆ. ಇದರ ಪರಿಣಾಮಗಳೇನು? ಯುವ ದಂಪತಿ ಎಡವುತ್ತಿರುವುದೆಲ್ಲಿ? ಈ ಕುರಿತು ಕಾನೂನು ತಜ್ಞರ ಅಭಿಪ್ರಾಯ ಇಲ್ಲಿದೆ.

ವಿವಾಹ ಎಂದರೆ ಪರಸ್ಪರ ಗೌರವ, ನಂಬಿಕೆ, ಒಲವು ನಶಿಸಿದೆ. ನಂತರ ಮುಂದುವರೆದು ಬದುಕು ಕಾಪಾಡಿಕೊಂಡು ಬಂದ ಸಮಾಜ ನಮ್ಮದು. ಮದುವೆ ಬದಲಾಗುತ್ತದೆ, ಅದಕ್ಕೆ ಹೀಗೆ ಸಿದ್ಧರಾಗಬೇಕು ಎಂದು ನಮ್ಮ ಹಿರಿಯರು ಹೇಳುತ್ತಾರೆ. ಈಗ ಸನ್ನಿವೇಶ ಮತ್ತು ಮಾನಸಿಕತೆ ಎರಡೂ ಬದಲಾಗಿದೆ. ಮದುವೆಯನ್ನು ಬದ್ಧತೆಯನ್ನಾಗಿ ಅಲ್ಲ, ಅನುಕೂಲಸಿಂಧುವಾಗಿ ನೋಡಲಾಗುತ್ತಿದೆ. ತಮ್ಮ ಅನುಭವಗಳ ಮೂಲಕ ಹುಡುಗಿಗೂ, ಹುಡುಗನಿಗೂ ಮಾರ್ಗದರ್ಶನ ಮಾಡಿ ಮದುವೆ ಮತ್ತು ನಂತರದ ದಾಂಪತ್ಯ ಬದುಕಿಗೆ ಮಾನಸಿಕವಾಗಿ ಸಿದ್ಧಗೊಳಿಸುತ್ತಿದ್ದರು.

ಸಾಕಷ್ಟು ಸೌಲಭ್ಯಗಳು ಇರಬೇಕು, ಆಸ್ತಿ, ಹಣ ಇದ್ದು, ಐಷಾರಾಮಿ ಬದುಕಿಗೆ ಅನುವಾಗಬೇಕು ಎಂದೇ ಬಯಸುತ್ತಾರೆ ಹೊರತು ಮದುವೆಯ ನಂತರ ಸತಿ–ಪತಿ ಪರಿಸ್ಥಿತಿಯನ್ನು ನಿಭಾಯಿಸಿಕೊಂಡು ಹೋಗಬಹುದು ಎಂಬ ಬಗ್ಗೆ ಯೋಚನೆಯೇ ಮಾಡು ವುದಿಲ್ಲ. ಎಷ್ಟೋ ಪ್ರಕರಣಗಳಲ್ಲಿ ಯುವತಿಯರು ಉಚ್ಚ ಶಿಕ್ಷಿತರಾಗಿರುವುದರಿಂದ, ಮನೆಕೆಲಸವನ್ನು ಕಲಿತಿರುವುದಿಲ್ಲ. ಹಾಗಾಗಿ, ಮದುವೆಯಾದ ಮೇಲೂ ಆದೇ ಪರಿಸ್ಥಿತಿ ಮುಂದುವರಿಯಬೇಕು ಎಂದು ಬಯಸಿದರೆ ಸಮಸ್ಯೆಗಳ ಆರಂಭ. ಕನಿಷ್ಠಪಕ್ಷ ಗಂಡ–ಹೆಂಡತಿ ತಾವು ಅಡುಗೆ ಮಾಡಿ ಉಣ್ಣುವಷ್ಟಾದರೂ ಮನೆಕೆಲಸ ಇಬ್ಬರಿಗೂ ಗೊತ್ತಿರಬೇಕು.



ರಾಜರಾಜೇಶ್ವರಿ
ಖ್ಯಾತ ವಕೀಲರು,
ಬೆಂಗಳೂರು.

ಮೊದಲು ಮದುವೆಯೆಂದರೆ ಸಾಮಾಜಿಕ ಸುರಕ್ಷತೆಯ ಭಾವವಿತ್ತು. ಈಗ ಹಾಗಲ್ಲ. ಹಣಕಾಸು ಸುರಕ್ಷತೆಯೇ ಮುಖ್ಯವಾಗಿರುವುದರಿಂದ ವಿವಾಹ ಕೂಡ ವಾಣಿಜ್ಯ ವಹಿವಾಟಿನ ಸ್ವರೂಪ ಪಡೆದುಕೊಂಡಿದೆ. ಎನೆಲ್ಲ ಅನುಕೂಲತೆಗಳಿವೆ, ಆದಾಯದ ಎಷ್ಟು ಮೂಲಗಳಿವೆ, ಭವಿಷ್ಯಕ್ಕೆ ಹಣಕಾಸಿನ ಭದ್ರತೆ ಏನಿದೆ... ಹೀಗೆ ಈ ಅಂಶಗಳನ್ನೆಲ್ಲ ಅವಲೋಕಿಸುತ್ತ ಮದುವೆಯಾಗಲು ನೋಡಿದರೆ, ಅದು ಬರೀ ಒಂದು ಆಯಾಮದ ತಾವಂದು ಕೊಂಡಂತೆ ಇಲ್ಲ ಎಂದೆನಿಸಿದರೆ ಸಂಬಂಧ ಮುರಿದು ಬೀಳಲು ಈಗ ಹೆಚ್ಚಿನ ಸಮಯವೇ ಬೇಕಿಲ್ಲ. ಏಕೆಂದರೆ, ತಾಳ್ಮೆ, ಸಹನಶೀಲತೆ ಎಂಬುದು ದಾಂಪತ್ಯದಿಂದ ಮರೆಯಾಗುತ್ತಿದೆ. ವಿಪರ್ಯಾಸ ಎಂದರೆ, ಹುಡುಗಿಯರ ಅಪೇಕ್ಷೆಗಳು ಹೆಚ್ಚಿರುವುದರಿಂದ ಯುವಕರು ಮದುವೆಯ ಮುಂಚೆ ಮನೆ ಖರೀದಿಗೆ ಮುಂದಾಗುತ್ತಿದ್ದಾರೆ. ಇದಕ್ಕಾಗಿ ದೊಡ್ಡ ಮೊತ್ತವನ್ನು ಸಾಲವಾಗಿ ತೆಗೆದುಕೊಂಡು, ಸಂಬಳದ ಬಹುಭಾಗವನ್ನು ಇಎಂಐಗೆ ವಿನಿಯೋಗಿಸುತ್ತಿದ್ದಾರೆ.

ಮದುವೆಯಾದ ತಕ್ಷಣ ಮನೆಯನ್ನು ಜಂಟಿ ಮಾಲೀಕತ್ವ (ಜಾಯಿಂಟ್ ಓನರ್‌ಶಿಪ್)ಕ್ಕೆ ಒಳಪಡಿಸಿ, ಗಂಡ–ಹೆಂಡತಿ ಇಬ್ಬರೂ ಇಎಂಐ ಕಟ್ಟುತ್ತಾರೆ. ಇಂಥ ಆರ್ಥಿಕ ಒತ್ತಡಗಳು ದಾಂಪತ್ಯ ಬದುಕಿಗೆ ಮುಳುವಾಗುತ್ತಿವೆ. ದಾಂಪತ್ಯವೆಂದರೆ ರಿಯಾಲಿಟಿ ಶೋವಲ್ಲ: ಎಷ್ಟೋ ದಂಪತಿ ಬರೀ ಅನುಮಾನ ಮತ್ತು ತಾಕಲಾಟದಲ್ಲೇ ಬದುಕುತ್ತಾರೆ. ದುರಂತವೆಂದರೆ ಕ್ಯಾಮೆರಾ ಇರಿಸಿಕೊಂಡೇ ಜೀವನ ಸಾಗಿಸುತ್ತಿದ್ದಾರೆ. ಪ್ರತಿಯೊಂದಕ್ಕೂ ಇವರ ಬಳಿ ವಿಡಿಯೋ, ಆಡಿಯೋ ಸಾಕ್ಷ್ಯಗಳು ಲಭ್ಯ ಇರುತ್ತವೆ. ಆದರೆ, ದಾಂಪತ್ಯವೆಂದರೆ ರಿಯಾಲಿಟಿ ಶೋ ಅಲ್ಲ. ಅದು ನಂಬಿಕೆ, ಪರಸ್ಪರ ಗೌರವ ಮತ್ತು ಬದ್ಧತೆ ಒಳಗೊಂಡಿರಬೇಕು. ಎಲ್ಲ ಸಮಸ್ಯೆಗಳಿಗೂ ವಿಚ್ಛೇದನ ಪರಿಹಾರವಲ್ಲ. ಹಿಂದೆಲ್ಲ, ವಿಚ್ಛೇದನ ಪ್ರಕರಣದ ಫೈಲ್ ನಾಲ್ಕೈದು ಪುಟಗಳಿಗೆ ಸೀಮಿತವಾಗಿರುತ್ತಿತ್ತು. ಈಗ

ಒಂದೊಂದು ಕೇಸಿನ ಫೈಲ್ 500–550 ಪೇಜುಗಳಷ್ಟಿರುತ್ತದೆ!

ವಿಚ್ಛೇದನ ಎಂಬುದು ಕಾನೂನು ಒದಗಿಸಿರುವ ರಕ್ಷಣಾತ್ಮಕ ವ್ಯವಸ್ಥೆ ಹೌದು. ಪತ್ನಿಯ ಜೀವಕ್ಕೆ ಬೆದರಿಕೆ ಇದ್ದಲ್ಲಿ, ದಿನವೂ ಕಿರುಕುಳ ಇದ್ದಲ್ಲಿ ಅಥವಾ ಇತರ ಗಂಭೀರ ಕಾರಣಗಳಿಗೆ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿ, ನ್ಯಾಯ ಪಡೆಯಬಹುದು. ಆದರೆ, ಇತ್ತೀಚಿನ ದಿನಗಳಲ್ಲಿ ಕ್ಷುಲ್ಲಕ ಕಾರಣಗಳಿಗೆ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಲಾಗುತ್ತಿರುವುದು ಸರಿಯಾದ ಬೆಳವಣಿಗೆಯಲ್ಲ. ದುರದೃಷ್ಟಕರ ಸಂಗತಿ ಎಂದರೆ, ಮಹಿಳೆಯರ ರಕ್ಷಣೆಗೆ ಇರುವ ಕಾನೂನು ಎಷ್ಟೋ ಪ್ರಕರಣಗಳಲ್ಲಿ ದುರುಪಯೋಗವಾಗುತ್ತದೆ.

ಉತ್ಸಾಹವೇ ಇಲ್ಲ : ಈಗ ಮದುವೆ ಎಂದರೆ ಬರೀ 3 ದಿನಗಳ ಸಂಭ್ರಮವಷ್ಟೇ. ಆ ಬಳಿಕ ಯಾವುದೇ ಉತ್ಸಾಹ ಇರುವುದಿಲ್ಲ. ಹಿಂದೆಲ್ಲ ಮದುವೆ ಎಂದರೆ ಉತ್ಸಾಹ, ಕನಸು, ಕನವರಿಕೆಗಳು ಇರುತ್ತಿದ್ದವು. ಈಗ ಲೈಂಗಿಕ ಶಿಕ್ಷಣದ ಅರಿವಿನಿಂದ ಎಲ್ಲವೂ ಗೊತ್ತಿರುತ್ತದೆ ಅಥವಾ ಮದುವೆ ಮುಂಚೆಯೇ ರಿಲೇಶನ್ ಶಿಪ್‌ನಲ್ಲಿ ಉತ್ಸಾಹ ತೋರಿರುತ್ತಾರೆ.

ಸಣ್ಣ ಸಣ್ಣ ಕಾರಣಕ್ಕೆ ವಿಚ್ಛೇದನ : ಪತಿಯ ಮನೆಯಲ್ಲಿ ಸೂಕ್ತ ಅನುಕೂಲಗಳಿಲ್ಲ, ಕಂಫರ್ಟ್ ಜೋನ್ ಇಲ್ಲ ಎಂಬ ಕಾರಣಕ್ಕೆ. ಪತಿ–ಪತ್ನಿಯಲ್ಲಿ ಪರಸ್ಪರ ನಂಬಿಕೆ ಇಲ್ಲದಿರುವುದು. ವೃಥಾ ಅನುಮಾನ ಪಡುವುದು. ಆಫೀಸಿನಲ್ಲಿ ಯಾರೊಡನೆಯೋ ಮಾತಾಡುತ್ತಾನೆ/ಳೆ ಎಂದು ಸಂಶಯಿಸುವುದು. ಅಹಂಕಾರದ ತಾಕಲಾಟ. ತಾನೇಕೆ ಸೋಲಬೇಕು ಅಥವಾ ತಾನೇಕೆ ರಾಜಿ ಮಾಡಿಕೊಳ್ಳಬೇಕು ಎಂಬ ಹಠಮಾರಿ ಧೋರಣೆ. ಯಶಸ್ಸನ್ನು ಆರ್ಥಿಕ ಆದಾಯದ ಅಂಶದಿಂದ ಮಾತ್ರ ಅಳೆಯುವುದು. ಮನೆಯಲ್ಲಿನ ಸಣ್ಣ ಸಂಗತಿ ಗಳನ್ನೂ ದೊಡ್ಡದಾಗಿಸಿ ಕಲಹ ಮಾಡಿಕೊಳ್ಳುವುದು. ತಪ್ಪುಗ್ರಹಿಕೆ, ಭಿನ್ನಾಭಿಪ್ರಾಯ, ಪರಸ್ಪರರ ಮೇಲೆ ಗೌರವ ಇಲ್ಲದಿರುವುದು.

ಗಾಬರಿ ಹುಟ್ಟಿಸುವ ಸಂಗತಿ : ಮದುವೆಯಾಗಿ ಕೆಲ ತಿಂಗಳುಗಳಷ್ಟೇ ಕಳೆದಿರುತ್ತವೆ. ಆದರೆ, ವಿಚ್ಛೇದನಕ್ಕಾಗಿ ಕೋರ್ಟ್ ಮೆಟ್ಟಿಲು ಏರಿದಾಗ ಮೆಂಟನೆನ್ಸ್ ನಿಮಿತ್ತ ಲಕ್ಷ, ಕೋಟಿಯಲ್ಲಿ ಬೇಡಿಕೆ ಇಡಲಾಗುತ್ತದೆ. 'ವೀಸಾ' ಮದುವೆಗಳೂ ನಡೆಯುತ್ತಿವೆ. ಅಂದರೆ, ವಿದೇಶದಲ್ಲಿರುವ ಹುಡುಗನನ್ನೋ ಅಥವಾ ಹುಡುಗಿಯನ್ನೋ ಮದುವೆಯಾದರೆ ಬಾಳಸಂಗಾತಿ ವೀಸಾ ಪಡೆದು, ವಿದೇಶದಲ್ಲಿ ಕೆಲಸ ಮಾಡಬಹುದು ಎಂಬ ಯೋಚನೆ!. ಅದ್ಧೂರಿ ಮದುವೆಗಾಗಿ ಸಾಲ ಮಾಡುವ ಪ್ರವೃತ್ತಿ ಹೆಚ್ಚಿದೆ. ಇದು ಹುಡುಗಿ ಮನೆಯವರಿಗೆ ಸೀಮಿತವಾಗಿಲ್ಲ. ಗಂಡಿನ ಕಡೆಯವರೂ ಮದುವೆಗೆ ಸಾಲ ಮಾಡಿ, ಇಎಂಐ ಜಾಲದಲ್ಲಿ ಬಂಧಿಯಾಗುತ್ತಿದ್ದಾರೆ. ಹುಡುಗ–ಹುಡುಗಿಗೆ ಮಾತ್ರವಲ್ಲ, "ಅವರ ತಂದೆ–ತಾಯಿಗೂ ಮಕ್ಕಳ ಮದುವೆ ಒಂದು ಭಯವಾಗಿ ಕಾಡುತ್ತಿದೆ. ಮದುವೆ ಮಾಡಿಕೊಂಡ ದಿನವೇ ಅಥವಾ ಮರುದಿನವೇ ನವದಂಪತಿ ಪ್ರತ್ಯೇಕ ವಾಸಕ್ಕೆ ಹೋಗುತ್ತಿದ್ದಾರೆ. ಇದು, ಹಿರಿಯರಲ್ಲಿ, ಮಕ್ಕಳು ದೂರವಾದ ಭಾವನಾತ್ಮಕ ಸಂಕಟವನ್ನು ಹುಟ್ಟುಹಾಕಿದೆ. ಆದರೆ, 'ಮಕ್ಕಳು ಸುಖವಾಗಿದ್ದರೆ ಸಾಕು' ಎಂದು ಕೆಲ ಹಿರಿಯರು ವಾಸ್ತವ ಸ್ಥಿತಿಯನ್ನು ಒಪ್ಪಿಕೊಳ್ಳುತ್ತಿದ್ದಾರೆ.

17ನೇ ಪುಟದಿಂದ.....

ಅಗಲಿದ ನಂತರ ಯಾರೋ ಬಂದು ಸಾಂತ್ವನ ಹೇಳುತ್ತಾರೆ. ಆದರೆ ರಾತ್ರಿ ಹಾಸಿಗೆಯ ಖಾಲಿ ಜಾಗವನ್ನು ಯಾರೂ ತುಂಬಲಾರರು. ಔಷಧಿ ಕೊಡುವ ಕೈಯನ್ನು, **"ಊಟ ಆಯ್ತಾ?"** ಎಂದು ಕೇಳುವ ಧ್ವನಿಯನ್ನು, ಕೋಪದಲ್ಲೂ ಕಾಳಜಿ ಮರೆಮಾಡಿದ ಆ ಕಣ್ಣುಗಳನ್ನು ಯಾರೂ ಮರಳಿ ತರಲಾರರು.

ಆದ್ದರಿಂದ ನೆನಪಿರಲಿ ಅತ್ಯುತ್ತಮ ಜೋಡಿ ಎನ್ನುವುದು ಜಗಳವಿಲ್ಲದ ಜೋಡಿ ಅಲ್ಲ. ಜಗಳದ ನಂತರವೂ ಒಬ್ಬರನ್ನೊಬ್ಬರು ಬಿಟ್ಟು ಹೋಗದ ಜೋಡಿ. ದಾಂಪತ್ಯದಲ್ಲಿ ಪ್ರೀತಿಗಿಂತ ದೊಡ್ಡದು ಹೊಂದಾಣಿಕೆ. ಹೊಂದಾಣಿಕೆಗಿಂತ ದೊಡ್ಡದು ಸಹನೆ. ಸಹನೆಗಿಂತ ದೊಡ್ಡದು... ಕೊನೆಯವರೆಗೂ ಜೊತೆಗಿರುವ ಮನಸ್ಸು. ಚೇಷ್ಟೆ, ನಾಚಿಕೆ, ಜಗಳ, ಮೌನ, ಕಷ್ಟ, ಸುಖ, ಕಣ್ಣೀರು, ನಗು, ಹೊಂದಾಣಿಕೆ ಇವೆಲ್ಲವೂ ಸೇರಿ ದಾಂಪತ್ಯವನ್ನು ಪವಿತ್ರವಾಗಿಸುತ್ತವೆ.

ಬದುಕಿರುವಾಗಲೇ ಸಂಗಾತಿಯ ಬೆಲೆ ಅರಿಯಿರಿ. ಏಕೆಂದರೆ ಸತ್ತ ಮೇಲೆ ಅಳುವ ಕಣ್ಣೀರಿಗಿಂತ, ಬದುಕಿರುವಾಗ ಕೊಡುವ ಗೌರವವೇ ಪವಿತ್ರ. ನೆನಪಿರಲಿ... ಜೀವನದಲ್ಲಿ ಪರಿಪೂರ್ಣ ಸಂಗಾತಿ ಸಿಗುವುದಿಲ್ಲ. ಆದರೆ ಅಪರಿಪೂರ್ಣತೆಯನ್ನು ಒಪ್ಪಿಕೊಂಡು ಕೊನೆಯವರೆಗೂ ಜೊತೆಗಿರುವ ಸಂಗಾತಿಗಿಂತ ದೊಡ್ಡ ಭಾಗ್ಯ ಮತ್ತೊಂದಿಲ್ಲ.

– ಶಿವರಾಯಪ್ಪ ಬಿ ಮುಲೇರ, ರಾಣಿಬೆನ್ನೂರು.

ನೊಳಂಬವಾಣಿ

ಯುವಶಕ್ತಿ ಮತ್ತು ವಿಕಸಿತ ಭಾರತ

ವಿಶೇಷತೆಯಿಂದ ಕೂಡಿದ ಸಮಾಜದಲ್ಲಿ ನಾನಾ ರೀತಿಯ ವೈವಿಧ್ಯ ಉಳ್ಳವರನ್ನು ಕಾಣಬಹುದಾಗಿದೆ. ನಿಷ್ಠೆ ಪ್ರಾಮಾಣಿಕತೆ ಕರ್ತವ್ಯದ ಬಗ್ಗೆ ಕಾಳಜಿ ಮತ್ತು ಅವರು ಆಡುವ ಮಾತಿನಿಂದ ಮನುಷ್ಯರ ಒಳ್ಳೆಯ ನಡತೆ ವ್ಯಕ್ತವಾಗುತ್ತದೆ. ಪ್ರಾಮಾಣಿಕತೆ ಮತ್ತು ಕರ್ತವ್ಯ ನಿಷ್ಠೆಯು ಮನುಷ್ಯನ ಆರೋಗ್ಯ ಮತ್ತು ಗೌರವವನ್ನು ಹೆಚ್ಚಿಸುತ್ತದೆ ಹಾಗೂ ಮನಸ್ಸಿಗೆ ಸಂತೋಷವನ್ನುಂಟುಮಾಡುತ್ತದೆ. ಮನಸ್ಸಾಕ್ಷಿಗೆ ವಿರುದ್ಧವಾದ ಕೆಲಸಗಳನ್ನು ಮಾಡಿದಾಗ ಮನಸ್ಸಿನ ಸಂತೋಷವನ್ನು ಮತ್ತು ನಿದ್ದೆಯನ್ನು ಕೆಡಿಸುತ್ತದೆ.

ಈ ಜಗತ್ತು ವೈವಿಧ್ಯಗಳ ಆಗರ. ಪ್ರತಿಯೊಬ್ಬ ವ್ಯಕ್ತಿಯ ಹುಟ್ಟು ಬೆಳವಣಿಗೆ ವ್ಯಕ್ತಿತ್ವ ಮತ್ತು ಪರಿಸರ ಬೇರೆ ಬೇರೆಯಾಗಿರುತ್ತದೆ. ಎಲ್ಲರಲ್ಲಿಯೂ ಒಂದೇ ರೀತಿಯ ವ್ಯಕ್ತಿತ್ವವನ್ನಾಗಲಿ ಗುಣಗಳನ್ನಾಗಲಿ ಅಳೆಯಲು ಸಾಧ್ಯವಿಲ್ಲ, ನಾವು ಸರಿ ಇತರರು ಸರಿಯಿಲ್ಲ ಎಂಬ ಅಹಂ ಮತ್ತು ತರ್ಕಬೇಡ. ಇಂದಿನ ಸಮಾಜದ ವ್ಯವಸ್ಥೆಯಲ್ಲಿ ನಮ್ಮನ್ನು ನಾವು ತಿದ್ದಿಕೊಂಡು ನಮ್ಮ ಮನಸ್ಸಿಗೆ ಸಂತೋಷ ನೀಡುವ ಕಾರ್ಯವನ್ನು ಮಾಡಿಕೊಂಡು ಬದುಕಬೇಕು. ಇನ್ನೊಬ್ಬರನ್ನು ತಿದ್ದುವ ಕೆಲಸ ನಮ್ಮದಲ್ಲ, ಅದಕ್ಕಾಗಿ ಶ್ರಮಿಸುವುದೂ ಬೇಡ.

ನಮ್ಮ ಬದುಕನ್ನು ನಮ್ಮ ಇಷ್ಟದಂತೆ ನಿಷ್ಠೆ ಮತ್ತು ಸತ್ಯದ ಮಾರ್ಗದಲ್ಲಿ ಮುನ್ನಡೆಸುವುದಕ್ಕೆ ಏನೇನು ಮಾಡಬೇಕೊ ಅದನ್ನು ಮಾಡುವುದು ಮಾತ್ರ ನಮ್ಮ ಕೆಲಸ. ಆಲ್ಬರ್ಟ್ ಐನ್‌ಸ್ಟೈನ್ ಒಂದು ಕಡೆ ಹೇಳುತ್ತಾರೆ "ಈ ಜಗತ್ತಿನಲ್ಲಿ ಯಾರೂ ಪರಿಪೂರ್ಣರಲ್ಲ" ಪ್ರತಿಯೊಬ್ಬರಲ್ಲೂ ಒಂದಲ್ಲಾ ಒಂದು ನ್ಯೂನ್ಯತೆ ಇದ್ದೇ ಇರುತ್ತದೆ. (No one is perfect in this world) ವ್ಯಕ್ತಿ ಪ್ರಾಮಾಣಿಕನಾಗಿದ್ದರೆ ಕರ್ತವ್ಯ ಪಾಲಕನಾಗಿದ್ದರೆ ಒಳ್ಳೆಯ ವ್ಯಕ್ತಿತ್ವ ಉಳ್ಳವನಾಗಿದ್ದರೆ ಅಂತಹವರು ಸಮಾಜದ ಎಲ್ಲೊ ಒಂದು ಕಡೆ ಗುರುತಿಸಲ್ಪಡುತ್ತಾರೆ ಮತ್ತು ಯುಕ್ತ ಮನೋವೃತ್ತಿ ಉಳ್ಳವರನ್ನು ಯಾವತ್ತೂ ತಪ್ಪು ದಾರಿಗೆ ಕೊಂಡೊಯ್ಯಲು ಸಾಧ್ಯವಿಲ್ಲ. (Right attitude never takes you to wrong direction) ಶ್ರೀ ಸಿದ್ಧಗಂಗಾ ಮಠದ ಪರಮ ಪೂಜ್ಯ ಡಾ. ಶ್ರೀ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರು ತಮ್ಮ ಇಡೀ ಜೀವನವನ್ನು ಸಮಾಜದ ಏಳ್ಗೆಗಾಗಿ ತಮ್ಮನ್ನು ಮುಡುಪಾಗಿಸಿಕೊಂಡಿದ್ದರು. ದೀಪ ತಾನುರಿದು ಜಗತ್ತಿಗೆ ಬೆಳಕು ನೀಡಿದಂತೆ ಪೂಜ್ಯ ಶ್ರೀಗಳವರು ಮಾಡಿದ ತ್ಯಾಗ ಮತ್ತು ಸೇವೆಯ ಸಾಧನೆಯನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ. ಲಕ್ಷಾಂತರ ವಿದ್ಯಾರ್ಥಿಗಳು ಮತ್ತು ಭಕ್ತರುಗಳು ತಮ್ಮ ಹೃದಯಗಳಲ್ಲಿ ಪೂಜ್ಯರನ್ನು ಆರಾಧ್ಯ ದೈವದಂತೆ ಪೂಜಿಸುತ್ತಾರೆ. ಸರ್ ಎಂ.ವಿಶ್ವೇಶ್ವರಯ್ಯನವರ ಕರ್ತವ್ಯ, ಪ್ರಾಮಾಣಿಕತೆ ಮತ್ತು ಅವರು ಮಾಡಿದ ಸಾಧನೆಯನ್ನು ಇಂದಿಗೂ ಗುರುತಿಸುತ್ತಾರೆ ಮತ್ತು ನೆನಪಿಸಿಕೊಳ್ಳುತ್ತಾರೆ ಹಾಗೆ ಇನ್ನೂ ಅನೇಕ ಮಹಾತ್ಮರುಗಳು ಮಹಾಪುರುಷರುಗಳು ಸಾಧನೆಗೈದು ಮರೆಯಾಗಿದ್ದಾರೆ. ಅವರುಗಳು ಮಾಡಿದ ಸಾಧನೆಗಳು ಸದಾ ನೆನಪು ಮಾಡಿಕೊಳ್ಳುವಂತಹವುಗಳಾಗಿವೆ.

ಸಮಾಜದಲ್ಲಿ ನಾನಾ ರೀತಿಯ ವ್ಯಕ್ತಿತ್ವವುಳ್ಳ ಜನರಿದ್ದಾರೆ. ಒಳ್ಳೆಯವರು–ಕೆಟ್ಟವರು, ಬುದ್ಧಿವಂತರು–ದಡ್ಡರು, ಜ್ಞಾನಿಗಳು–ಅಜ್ಞಾನಿಗಳು, ಕಳ್ಳರು–ಪ್ರಾಮಾಣಿಕರು, ಸ್ವಾರ್ಥಿಗಳು–ನಿಸ್ವಾರ್ಥಿಗಳು, ಸಂಕುಚಿತಮನೋಭಾವನೆಯುಳ್ಳವರೂ–ವಿಶಾಲಮನೋಭಾವನೆಯುಳ್ಳವರೂ ಇದ್ದಾರೆ. ಹೀಗೆ ನಾನಾ ರೀತಿಯ ಗುಣಗಳುಳ್ಳ ಜನರನ್ನು ಕಾಣಬಹುದಾಗಿದೆ. ಇದು ಒಂದು ರೀತಿಯ ವ್ಯವಸ್ಥೆಯಾದರೆ ಜಾತಿ ಸಂಘರ್ಷಗಳು ಅಧಿಕಾರಕ್ಕಾಗಿ ಕಚ್ಚಾಟ, ಒಬ್ಬನ ಬೆಳವಣಿಗೆಯನ್ನು ಕಂಡು ಇನ್ನೊಬ್ಬರು ಅಸೂಯೆ ಪಡುವುದು ಇಂತಹ ವ್ಯವಸ್ಥೆಯನ್ನು ಸಮಾಜದಲ್ಲಿ ನಾವು ಕಾಣುತ್ತಿದ್ದೇವೆ.

ಈ ಎಲ್ಲಾ ಅವ್ಯವಸ್ಥೆಯನ್ನು ಬದಿಗೊತ್ತಿ ಇಂದಿನ ಯುವ ಜನತೆ ಕೃತಕ ಬುದ್ಧಿ ಮತ್ತೆಯಂತಹ ತಂತ್ರಜ್ಞಾನವನ್ನು ಅರಿತು ಭಾರತದ ಮೂಲ ತತ್ವಗಳಾದ ಶಾಂತಿ, ಸಹನೆ, ಪ್ರೀತಿ ಮತ್ತು ವಿಶ್ವಾಸದ ಅಡಿಯಲ್ಲಿ ಭಾರತದ ವಿಕಸನಕ್ಕೆ ಪ್ರಯತ್ನಿಸಬೇಕು. ನಮ್ಮಲ್ಲಿರುವ ಹೇರಳವಾದ ಸಂಪನ್ಮೂಲಗಳನ್ನು ಸದುಪಯೋಗಪಡಿಸಿಕೊಂಡು ಬದುಕಿನ ಮೂಲಭೂತ ಸೌಕರ್ಯಗಳ ಅವಶ್ಯಕತೆಗಾಗಿ ಹೊಸಹೊಸ ಬದಲಾವಣೆಗಳನ್ನು ತರುವುದರ ಮೂಲಕ ಹೊಸಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಅಭಿವೃದ್ಧಿಗಾಗಿ ಎಲ್ಲರೂ ಒಟ್ಟಾಗಿ ಒಗ್ಗಟ್ಟಾಗಿ ಸಹಕಾರ ಮನೋಭಾವನೆಯಿಂದ ಕರ್ತವ್ಯಗಳನ್ನು ಮಾಡಿದಾಗ ಮಾತ್ರ ವಿಕಸಿತ ಭಾರತವನ್ನು ಕಾಣಲು ಸಾಧ್ಯ.



ಆರ್.ರಂಗನಾಥ್
ಬೆಂಗಳೂರು.
ಮೊ : 7829999060

ಆತ್ಮವಿಶ್ವಾಸದ ಅಡಿಕೆ :: ತರಲಾರದು ಭಂಗದ ಬದುಕ

ಹೊನ್ನಾಳಿ ತಾಲ್ಲೂಕಿನಲ್ಲಿ (ನ್ಯಾಮತಿ ತಾಲ್ಲೂಕು ಒಳಗೊಂಡಂತೆ) ಇರುವುದೇ ಹದಿನೈದು ಇಪ್ಪತ್ತು ಹಳ್ಳಿಗಳಲ್ಲಿ. ನಮ್ಮ ನೊಳಂಬ ಸಮುದಾಯ. ಈ ಹಳ್ಳಿಗಳ ಮುಖ್ಯ ಉದ್ಯೋಗ, ವ್ಯವಸಾಯ ಮತ್ತು ಹೈನುಗಾರಿಕೆ. ೯೯% ಮಳೆಯಾಶ್ರಿತ ಪ್ರದೇಶ. ಇಂತ ಪ್ರದೇಶದಲ್ಲಿ ನಮ್ಮ ಜನ ಬದುಕು ಕಟ್ಟಿಕೊಂಡು ಬಂದಿದ್ದೇ. ಮಳೆಯಾದರೆ ಬೆಳೆ : ಬೆಳೆಯಾದರೆ ಬದುಕು. ಎಂಬ ಅಚಲ ನಂಬುಗೆಯ ಮೇಲೆ. ಇತ್ತೀಚಿನ ವರ್ಷಗಳಲ್ಲಿ ದಿಕ್ಕೆಟ್ಟ ಮಳೆಯಿಂದಾಗಿ, ನಮ್ಮವರ ಬದುಕು ದಿಕ್ಕೆಟ್ಟು. ವ್ಯವಸಾಯದಿಂದ ವಿಮುಖವಾಗಿ, ಪ್ಯಾಟೆಸೇರಿ, ಅಲ್ಲಿ ಎಂತಾದೋ ಕೆಲಸ ಮಾಡುತ್ತಾ, ಊರಾಗಿನ ಜಮೀನಿನಲ್ಲಿ ಮಳೆ ಬಂದು ಹದ ಆದಾಗ. ಮೆಕ್ಕೆಜೋಳದ ಕಾಳು ಉದರಿಸಿ ಹೋಗಿ, ತಮ್ಮ ಹೊಲ :: ತಮ್ಮ ಕಸುಬು ಪಳೆಯುಳಿಕೆಯಂತೆ ಉಳಿಸಿಕೊಂಡು ಅಪರೂಪಕ್ಕೆ ಬಂದು ಹೋಗುತ್ತಿದ್ದವರೇ ಊರುಗಳನ್ನು ತುಂಬಿರುವುದು ಕಾಣುವಂತಾಗಿದೆ. ಅವರ ಈ ಅರೆಕಾಲಿಕ ಕಸುಬು ಲಾಭತರದೆ ನಷ್ಟವನ್ನೇ ಬರಿಸಿದ್ದು ಹೆಚ್ಚು.

ಪ್ಯಾಟಿಯಿಂದ ಬಂದು ಊರುಗಳಲ್ಲಿನ ತಮ್ಮ ಜಮೀನಲ್ಲಿ ಬೋರ್ ಹಾಕಿಸಿ, ಬಂದ ಒಂದಿಂಚೋ ಎರಡಿಂಚೋ ನೀರಿನಲ್ಲಿ ತೋಟಕಟ್ಟಿ ಉತ್ತಮ ಬೆಳೆ ತೆಗೆದವರು ಇದ್ದಾರೆ. ಇದ ಕಂಡ ಊರಾಗಿ ೯೦% ನಮ್ಮ ಜನ ಬೋರ್ ಕೋರೆಸಿ ಸ್ಪರ್ಧಾತ್ಮಕವಾಗಿ ಅಡಿಕೆ ನಾಟಿಗೆ ಕೈಹಚ್ಚಿ ಕೊಂಡಿರುವುದೊಂದು ಶುಭದ ಸಂಕೇತ. ಬಹುತೇಕ ನಮ್ಮ ಹಳ್ಳಿಗಳ ರೈತರಲ್ಲಿ ಏನಾದರಾಗಲಿ ಒಂದು ಎರಡು ಎಕರೆ ಅಡಿಕೆ ತೋಟ ಕಟ್ಟುವ ಹುಮ್ಮಸ್ಸು ಪ್ರತಿ ಕುಟುಂಬದ ಯುವಕರಲ್ಲಿ ಕಂಡು ಬರುತ್ತಿದೆ. ಹಾಗೆ ತೋಟಕಟ್ಟಿದ ನಮ್ಮ ಯುವರೈತರ ಮುಖಗಳು ಕಂಗೊಳಿಸುತ್ತಿರುವುದು ಕಾಣಬರುತ್ತಿವೆ. ಆದರೆ ಈಗೀಗ ತಿಂಗಳಿಂದೀಚೆಗೆ ಪತ್ರಿಕಾ ಸುದ್ದಿ, ವಾಟ್ಸಪ್ ಸುದ್ದಿಯಿಂದ ನಮ್ಮ ಯುವ ಸ್ನೇಹಿತರು ಕಳೆಗುಂದಿದಂತಾಗಿರುವುದನ್ನು ನಾನು ಕಾಣುತ್ತಿದ್ದೇನೆ.



ಡಿ.ಬಿ.ಶಂಕರಪ್ಪ
ಪುತ್ತೇಶ ಕೃಪ, ಲಾಲ್ ಬಹದ್ದೂರ್ ಶಾಸ್ತ್ರಿ ನಗರ ಸವಳಂಗ ರಸ್ತೆ, ಶಿವಮೊಗ್ಗ. ಮೊ : 9448516344

ಪ್ರಿಯ ನನ್ನ ಯುವ ರೈತ ಮಿತ್ರರೇ, ಯಾವರೀತಿಯಿಂದಲೂ ಕಳೆಗುಂದುವುದಕ್ಕೆ ಕಾರಣವೇ ಇಲ್ಲ. ಇದಕ್ಕೆ ಹೆದರ ಬೇಕಾದವರು ನಾವು ನೀವಲ್ಲ. ಹೆದರ ಬೇಕಾದವರು ಹತ್ತು, ಇಪ್ಪತ್ತು ಎಕರೆಯ ನೀರಾವರಿ ಆಶ್ರಿತ ಅಡಿಕೆ ಬೆಳೆಗಾರರು. ಅವರೆಲ್ಲ ತೋಟದ ಕೆಲಸ ಕೂಲಿಯವರ ಮೇಲೆ. ಛಾನಲ್ ನೀರನ್ನು ಅವಲಂಭಿಸಿ. ಅವರ ತೋಟಗಳಲ್ಲಿ ಅಡಿಕೆ ಬಿಟ್ಟರೆ ಮಿಶ್ರ ಬೆಳೆ ಬೆಳೆಯಲು ನೀರು ಅವರ ಹಿಡಿತದಲ್ಲಿ ಇರುವುದಿಲ್ಲ. ನಮ್ಮ ಬೋರ್ ನೀರು ನಮ್ಮ ಹಿಡಿತದಲ್ಲಿ ಇರುತ್ತದೆ. ನಮ್ಮ ಅಡಿಕೆಯ ಜೊತೆಜೊತೆಯಾಗಿ ನಾವು ಕಾಳು ಮೆಣಸು, ಏಲಕ್ಕಿ, ಜಾಯಿಕಾಯಿ, ಲವಂಗ, ಕಾಪಿ, ಕೋಕೊ, ಬಾಳೆ ಇನ್ನು ಅನೇಕ ಮಿಶ್ರ ಬೆಳೆ, ಬೆಳೆಯ ಬಹುದಾಗಿದೆ.

ಯಾವ ಆಂತಕವಿಲ್ಲದೆ ಧೈರ್ಯವಾಗಿರಿ. ನಮ್ಮ ರೈತರು ಕೆಲವರ ಬಾಯಿ ಮಾತಿಗೆ ಹೆದರಿ ಅಡಿಕೆ ಬೆಳೆಗಾರರು ತೆಲೆ ಮೇಲೆ ಕೈಹೊತ್ತುಕೊಂಡು ಕೂರಬೇಕಿಲ್ಲ. ಇನ್ನು ಅಡಕೆ ಬೆಳೆಯ ಬೇಕೆಂಬುವವರು ಧೈರ್ಯವಾಗಿ ಅಡಿಕೆ ಹಾಕಿ. ಬೋರ್ ನಲ್ಲಿ ಎರಡು ಇಂಚು ನೀರಿದೆ ಎಂದು ಹಿಂದೆಗೆಯ ಬೇಡಿ. ನಮ್ಮಲ್ಲಿನ ಕುಟುಂಬಗಳು ಸ್ವಂತ ಕೆಲಸ ಮಾಡುವುದರಿಂದ, ಒಂದು ಕುಟುಂಬಕ್ಕೆ ಕಡಿಮೆ ಅಂದರೆ ಅರ್ಧ ಎಕರೆ ಅಡಿಕೆಯ ಮಿಶ್ರ ಬೆಳೆಯ ತೋಟ ಇದ್ದರೆ ನೆಮ್ಮದಿಯಾಗಿ ಬದುಕು ಸಾಗಿಸಬಹುದು.

ಅಡಿಕೆ ಮಿಶ್ರಬೆಳೆಯ ತೋಟ ಎರಡೆಕ್ಕೆರೆ ಇದ್ದರೆ ಸಾಕು ಬೆಂಗಳೂರಿನಲ್ಲಿನ ಒಬ್ಬ ಇಂಜನಿಯರ್ ಕೆಲಸವಿದ್ದಂತೆ. ಬೆಂಗಳೂರಿನಲ್ಲಿ 'ವರ್ಕ ಪ್ರಮ್ ಹೋಂ' ಕೆಲಸಮಾಡುವ ಹೆಣ್ಣು ಮಗಳು. ಹೈನುಗಾರಿಕೆಯನ್ನು ಹೈಟೆಕ್‌ಗೆ ಅಳವಡಿಸಿಕೊಂಡು ಸಂಪನ್ಮೂದ್ದ ಹೈನುಗಾರಿಕೆ ಕೈಗೊಳ್ಳಬಹುದಾಗಿದೆ. ನಮ್ಮೂರಾಗೆ ನಮ್ಮ ಜನರಿಗೆ ನೀವು ಮಾರ್ಗದರ್ಶಕರಾಗಿ ನಿಲ್ಲುವ, ಕರ್ತವ್ಯ ಮಾಡುವ, ಶ್ರದ್ದೆ ಇರಬೇಕು. ಇಲ್ಲ ದುಃಶ್ಚಟಗಳು ಗ್ರಾಮಾಂತರ ಪ್ರದೇಶಗಳಲ್ಲಿ ಕ್ಷಣಕ್ಷಣಕ್ಕೂ ಬಾಯಿತೆರೆದುಕೊಂಡು ಬೆಂಬತ್ತುವ ವಿಪುಲ ಅವಕಾಶಗಳು ವಿಜೃಂಬಿಸುತ್ತಿರುತ್ತವೆ. ಅವಾವಕ್ಕೂ ತಿರುಗಿ ನೋಡದಂತಿದ್ದರೆ. ಬಚಾವಾಗಬಹುದು. (ಯಾವುದೋ ಹ್ಯಾವಕ್ಕೆ ಸೀಮಿತ ವಲಯದ ಚುನಾವಣೆಗೆ ಹ್ಯಾಗೆ ಲಕ್ಷಕ್ಕಿಂತಹೆಚ್ಚು ಖರ್ಚು ಮಾಡಿದ್ದು ನೋಡಿ ನಾಚಿಕೆ ಪಟ್ಟುಕೊಂಡಿದ್ದೀರಿ)

ಕೊನೆಯುದಾಗಿ ತೋಟದ ಬೆಳೆಗಾರರಿಗೆ ಏಳೆಂಟು ವರ್ಷ ಕಾಯುವ ತಾಳ್ಮೆ ಇರಬೇಕು. ಆಮೇಲೆ ಅದೇ ತೋಟ ನಿಮ್ಮನ್ನ, ನಿಮ್ಮ ಮಕ್ಕಳನ್ನ, ನಿಮ್ಮ ಮೊಮ್ಮಕ್ಕಳನ್ನ ಇನ್ನೂ.. ಇನ್ನೂ ಎಲ್ಲರನ್ನ ಕಾಯುವ ಕೆಲಸ

ತೋಟದ್ದಾಗಿರುತ್ತದೆ. ಯಾರೋ ಹೆದರಿಸುತ್ತಾರೆ, ಈ ವರ್ಷ ಮಳೆ ಕಡಿಮೆಯಾಗಿ ಬೋರ್‌ಗಳು ಬತ್ತುವ ಆತಂಕ ನಮ್ಮನ್ನು ಕಾಡುತ್ತಿದೆ. ತೋಟವೆಲ್ಲಿ ಒಣಗೀತೆಂಬ ಆತಂಕ. ಅನೇಕ ನಿದ್ದೆಯಿಲ್ಲದ ದಿನಗಳು. ಬೆನ್ನಹತ್ತಿ ಕಾಡುತ್ತಿದೆ. ಇದು ನನ್ನ ಒಬ್ಬನ ಪ್ರಶ್ನೆಯಲ್ಲ, ಇಡೀ ತಾಲ್ಲೂಕಿನ ಪ್ರಶ್ನೆ. ಈಗ್ಗೆ ಆರುವರ್ಷದ ಹಿಂದೆ ಇದೇ ಪರಿಸ್ಥಿತಿ ಬಂದಿತ್ತು. ಕೋಡಿಕೊಪ್ಪದ ಊರ ರೈತರೆಲ್ಲ ಸೇರಿ ಹೊನ್ನಾಳಿ ಹೊಳೆಯಿಂದ ಟ್ಯಾಂಕರ್‌ನಲ್ಲಿ ತಮ್ಮ ತೋಟಗಳಿಗೆ ನೀರು ಹೊಡೆಸಿದರು. ನನ್ನ ತೋಟಕ್ಕೂ ವಾರದಲ್ಲಿ ಒಂದು ದಿನದಂತೆ ನೀರು ಹೊಡೆಸಲು ಅವರಿಂದ ಅವಕಾಶ ಸಿಕ್ಕಿತು. ನನ್ನ ಅಡಿಕೆ ತೋಟ ಉಳಿಯಿತು. ಆವತ್ತೂ ನಾನು ಕೈಕಟ್ಟಿ ಕುಳಿತಿದ್ದರೆ, ಈವತ್ತು ಆ ತೋಟದಿಂದ ನಾನು ಉಣ್ಣುತ್ತಿದ್ದಿಲ್ಲ. ದೇವರು ಯಾವುದೋ ಒಂದುರೀತಿ ನಮ್ಮ ಕೈ ಹಿಡಿಯುತ್ತಾನೆ. ನಮ್ಮ ಪ್ರಾಮಾಣಿಕ ಕಾಯಕ ಮುಖ್ಯ.

ಇಲ್ಲಿ ಹೇಳಿರುವುದೆಲ್ಲ ಸ್ವತಃ ಅನುಭವದ ಮಾತು... ಯಾವ ಬೋಗಳೆ ಬರಹವಲ್ಲ.

ದೇವನೊಬ್ಬ ನಾಮ ಹಲವು

ನೀರಿನ ಮೂಲ ದಾತು ಆಮ್ಲಜನಕ ಮತ್ತು ಜಲಜನಕ.



ಆದರೆ ನೀರನ್ನು ಬೇರೆ ಬೇರೆ ಭಾಷೆಗಳಲ್ಲಿ ಬೇರೆ ಬೇರೆಯಾಗಿ ಕರೆಯುತ್ತಾರೆ. ಸಂಸ್ಕೃತದಲ್ಲಿ 'ಜಲ', ಕನ್ನಡದಲ್ಲಿ 'ನೀರು', ಹಿಂದಿಯಲ್ಲಿ 'ಪಾನಿ', ತೆಲುಗಿನಲ್ಲಿ 'ನೀಳ್ಳು', ತಮಿಳಿನಲ್ಲಿ 'ತಣ್ಣಿ', ಹಾಗೂ ಇಂಗ್ಲೀಷ್ ಭಾಷೆಯಲ್ಲಿ 'ವಾಟರ್' ಎಂದು ಕರೆಯುತ್ತಾರೆ.

ಯಾವ ಭಾಷೆಯಲ್ಲಿ ಆದರೂ ನೀರನ್ನು ಬೇರೆ ಬೇರೆಯಾಗಿ ಕರೆದರೂ ಮೂಲಧಾತು ಒಂದೆ. ಹಾಗೆಯೇ, ನಾವು ದೇವರನ್ನು ಬೇರೆ ಬೇರೆ ನಾಮದಿಂದ ಕರೆದರೂ ದೇವನೊಬ್ಬನೆ. ಹೆಸರು ಮಾತ್ರ ಬೇರೆ ಬೇರೆ ಆಗಿರುತ್ತದೆ. ಅವನು ದಯಾಮಯನು ಹಾಗೂ ಸರ್ವಾಂತರ್ಯಾಮಿ ಆಗಿದ್ದು, ಅರಿಯದ ಭಕ್ತರಿಗೆ ದೇವರು ಹಲವಾರು, ಅರಿತ ಭಕ್ತನಿಗೆ ದೇವರು ಒಬ್ಬನೇ, ಇದಕ್ಕೇನೆ 'ದೇವನೊಬ್ಬ ನಾಮ ಹಲವು' ಎಂದು ವಿಶ್ವಗುರು ಬಸವಣ್ಣನವರು ಹೇಳಿರುವುದು.

ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣನವರು ಇಬ್ಬರು ಮೂವರು ದೇವರೆಂದು ಉಬ್ಬಿ ಉಬ್ಬಿ ಮಾತನಾಡಬೇಡ ದೇವನೊಬ್ಬನೇ ಕಾಣಿರೋ ಇಬ್ಬರೆಂಬುದು ಹುಸಿ ನೋಡಾ ಕೂಡಲ ಸಂಗಮದೇವನಲ್ಲದೆ ಮತ್ತೊಂದಿಲ್ಲ ಎಂದಿತ್ತು ವೇದ. ನೀರಿನ ದಾತುಗಳಾದ ಆಮ್ಲಜನಕ ಮತ್ತು ಜಲಜನಕಗಳು ಗಾಳಿಯಲ್ಲಿದ್ದರು ನೀರನ್ನು ಕಾಣಲು ಸಾಧ್ಯವಿಲ್ಲ.

ಗಾಳಿ ಎಲ್ಲಾ ಕಡೆ ಆವರಿಸಿದ್ದರು ನೋಡಲು ಸಾಧ್ಯವಿಲ್ಲ, ಹಾಗೆಯೇ ದೇವರು ಎಲ್ಲಾ ಕಡೆ ಇದ್ದರು ನೋಡಲು ಸಾಧ್ಯವಿಲ್ಲ. ಎರಡು ದಾತುಗಳು ಸಂಯೋಜನೆ ಆದರೆ ಮಾತ್ರ ನೀರನ್ನು ಕಾಣಲು ಸಾಧ್ಯ.

ಹಾಗೆಯೇ ಮನುಷ್ಯ ಬಸವಣ್ಣನವರ ಸಪ್ತಶಿಲೆಗಳಾದ

"ಕಳಬೇಡ, ಕೊಲಬೇಡ
ಹುಸಿಯ ನುಡಿಯಲುಬೇಡ, ಮುನಿಯಬೇಡ
ಅನ್ಯರಿಗೆ ಅಸಹ್ಯ ಪಡಬೇಡ,
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ,
ಇದೇ ಅಂತರಂಗ ಶುದ್ಧಿ,
ಇದೇ ಬಹಿರಂಗ ಶುದ್ಧಿ,
ಇದೇ ನಮ್ಮ ಕೂಡಲ
ಸಂಗಮದೇವನೊಲಿಸುವ ಪರಿ"

ಆದ್ದರಿಂದ ಅಂತರಂಗ–ಬಹಿರಂಗಗಳು ಶುದ್ಧವಾಗಿದ್ದರೆ ಮಾತ್ರ ಭಗವಂತನ ಸಾಕ್ಷಾತ್ಕಾರ ಸಾಧ್ಯ.



ಆರ್.ರಾಜಯ್ಯ
ನಿವೃತ್ತ ಶಿಕ್ಷಕರು, ವ್ಯವಸ್ಥಾಪಕರು,
ನೊಳಂಬ ಲಿಂಗಾಯತ ಸಂಘ,
ಬಸವೇಶ್ವರನಗರ, ಬೆಂಗಳೂರು.

ನೊಳಂಬವಾಣಿ ಪತ್ರಿಕೆಯ ಚಂದದಾರರಾಗಲು ಮನವಿ

ನೊಳಂಬರ ಕೆರೆಕಟ್ಟೆ ಬಾವಿಗಳು

ಹಿಂದಿನ ಸಂಚಿಕೆಯಿಂದ.....

ಸಾಂಸ್ಕೃತಿಕ ಶ್ರೀಮಂತಿಕೆಯ ವಿಶಾಲ ಭಾರತದ ಸರ್ವತೋಮುಖ ಪ್ರಗತಿಗೆ ರಾಜಘಟ್ಟಗಳನ್ನು ಆಡಳಿತ ನಡೆಸಿದ ರಾಜರುಗಳು ಆಡಳಿತಾಧಿಕಾರಿಗಳು ಕೈಗೊಂಡಿರುವ ಕಾರ್ಯಗಳು ಪ್ರೇರಣೆಯಾಗಿವೆ. ದ್ವೀಪ ರಾಷ್ಟ್ರ ಭಾರತ ಅತ್ಯಂತ ಶ್ರೇಷ್ಠ ಪ್ರಕೃತಿ ಸಂಪನ್ಮೂಲಗಳನ್ನು ಹೊಂದಿರುವ ರಾಷ್ಟ್ರ. ಮಾನವ ಹಾಗೂ ಪಶುಪಕ್ಷಿಗಳಿಗೆ ಸಿಗುವ ಆಹಾರ, ಧಾನ್ಯ, ಹಣ್ಣು, ಹಂಪಲು ಇತ್ಯಾದಿ ಮೂಲ ವಸ್ತುಗಳನ್ನು ಶ್ರೇಷ್ಠ ಗುಣಮಟ್ಟದಲ್ಲಿ ನೀಡುವ ಶ್ರೇಷ್ಠಭೂಮಿ ಕಾರಣಾಂತರಗಳಿಂದ ಇಂದು ಶೋಷಣೆಯಾಗುತ್ತಿರುವುದು ವಿಷಾದನೀಯ. ಈ ಬೆಳವಣಿಗೆಯ ಬಗ್ಗೆ ಎಲ್ಲರೂ ಎಚ್ಚೆತ್ತು ಜಾಗೃತರಾಗಿ ಮುಂದಿನ ಪೀಳಿಗೆಗೆ ಒಳಿತಾಗಲು ಪ್ರಯತ್ನಿಸಬೇಕಾಗಿದೆ.

ದಕ್ಷಿಣ ಭಾರತದ ಹೆಂಜೇರು/ಹೇಮಾವತಿ ಪುಣ್ಯ ಕ್ಷೇತ್ರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಡಳಿತ ನಡೆಸಿದ ನೊಳಂಬ ಅರಸರು ಪ್ರಜಾ ಸಮುದಾಯಕ್ಕೆ ಸರಳ ಹಾಗೂ ಮೂಲಭೂತ ಸೌಕರ್ಯಗಳ ಸದುಪಯೋಗವನ್ನು ನೀಡಿ ಉತ್ತಮ ಸ್ಥಾನಗಳನ್ನು ಸ್ಥಾಪಿಸಿದ್ದರು. ಇದೇ ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಆಡಳಿತದಲ್ಲಿ ಮುಖ್ಯಸ್ಥರು ಕೊಟ್ಟ ಕೊಡುಗೆ ಮೂಲಸೌಕರ್ಯವಾದ ನೀರಾವರಿಗೆ ಮುಖ್ಯ ಗಮನ ಕೊಟ್ಟು ಹಲವಾರು ಕೆರೆ ಕಟ್ಟೆ ರಸ್ತೆಗಳ ನಿರ್ಮಾಣ ಮಾಡುವ ಮೂಲಕ ಜಲಸಂಪನ್ಮೂಲ ಅಭಿವೃದ್ಧಿಗೆ ಕಾರಣೀಭೂತ ರಾಗಿರುವುದನ್ನು ತಿಳಿಯಬಹುದು.

ನೊಳಂಬರ ಈ ಪುಣ್ಯ ಕಾರ್ಯಗಳ ಬಗ್ಗೆ ಇತಿಹಾಸದ ಮೂಲಕ ತಿಳಿಯಲು ಇಂದು ಹಲವಾರು ಭಾಗಗಳಲ್ಲಿ ಶಿಲಾ ಶಾಸನಗಳಿರುವುದುದು ಆಧಾರವಾಗಿರುತ್ತದೆ. ಇದೇ ರೀತಿ ನಮ್ಮ ಪೂರ್ವಿಕರು ಹಿರಿಯರು ಹೇಳುತ್ತಿದ್ದ ಇತಿಹಾಸದ ಬಗೆಗಿನ ಸತ್ಯ ಕಥೆಗಳು ಹಾಗು ಮಾಹಿತಿಗಳು ಸಹ ನಮಗೆ ತಿಳಿಯುತ್ತದೆ. ಈಗಾಗಲೇ ಹಲವಾರು ವಿದ್ವಾಂಸರಿಂದ ಪ್ರಕಟವಾಗಿರುವ ಕೃತಿಗಳ ಮೂಲಕ ತಿಳಿಯಬಹುದಾಗಿದೆ. ಇಂತಹ ಅಭಿವೃದ್ಧಿಪರ ಕೆಲಸಗಳ ಮೂಲಕ ಯಶಸ್ಸು ಸಾಧಿಸಿ ಕಲ್ಪತರು ನಾಡು ಎಂದು ಖ್ಯಾತಿ ಪಡೆದಿರುವ ಸ್ಥಳ ತಿಪಟೂರು. ವಿಶ್ವದಲ್ಲೇ ಅತಿ ಗುಣಮಟ್ಟ ಹಾಗೂ ರುಚಿಕರವಾದ ಕೊಬ್ಬರಿಯನ್ನು ನೀಡುವ ತಿಪಟೂರು ರಾಷ್ಟ್ರದಲ್ಲೇ ಮುಖ್ಯ ಕೊಬ್ಬರಿ ಮಾರುಕಟ್ಟೆಯನ್ನು ಹೊಂದಿದೆ. ತೆಂಗು ವಾಣಿಜ್ಯ ಬೆಳೆಯಾದರೆ ರಾಗಿ ಪ್ರಮುಖ ಆಹಾರ ಧಾನ್ಯ "ರಾಗಿ ತಿನ್ನುವವ ನಿರೋಗಿ" ಎಂಬ ಗಾದೆ ಮಾತಿನಂತೆ ಕಲ್ಪತರು ನಾಡಿನ ರಾಗಿ, ತೆಂಗನ್ನು ಸೇವಿಸುವವರೇ ಆರೋಗ್ಯವಂತರು ಶಕ್ತಿವಂತರು ಆಗಿರುತ್ತಾರೆ. "ಕಲ್ಪತರು, ಕಾಮಧೇನು" ನಂಬಿದವರ ಕೈ ಬಿಡರು ಎಂಬುದೇ ಈ ಭಾಗದ ಜನರ ದೃಡ ನಂಬಿಕೆ. ಅತ್ಯುತ್ತಮ ಗುಣಮಟ್ಟದ ರೇಷ್ಮೆ ಉತ್ಪನ್ನದಲ್ಲು ತಿಪಟೂರು ಮುಂಚೂಣಿಯಲ್ಲೇ ಇದೆ. ಈ ಕೃಷಿ ಉತ್ಪನ್ನಗಳಿಗೇ ಮೂಲಧಾರವಾದ ಜಲಸಂಪತ್ತನ್ನು ರಕ್ಷಿಸಿ ನಿರ್ಮಿಸುತ್ತಿರುವುದು ಕೆರೆ, ಕಟ್ಟೆಗಳು.

ಕರ್ನಾಟಕದ ರಾಜಧಾನಿ ಬೆಂಗಳೂರು – ಹೊನ್ನಾವರ ಮುಖ್ಯ ರಸ್ತೆಯಲ್ಲಿ... ಬೆಂಗಳೂರಿನಿಂದ 145 ಕಿ.ಮೀ... ಪ್ರಯಾಣ ಬೆಳೆಸಿದರೆ ಕಲ್ಪತರು ನಾಡು ತಿಪಟೂರು ಸಿಗುತ್ತದೆ. ಇದೇ ರೀತಿ ಸಮಾನ ಅಂತರದಲ್ಲಿರುವ ರೈಲ್ವೆ ರಸ್ತೆ, ಜಿಲ್ಲಾ ಕೇಂದ್ರವಾಗುವ ಸನಿಹದಲ್ಲಿರುವ ನಗರದಲ್ಲಿ ಬಹುತೇಕ ಎಲ್ಲಾ ರೈಲುಗಳ ನಿಲುಗಡೆ ಇದೆ. ಅತ್ಯುತ್ತಮ ರಸ್ತೆ ಸಂಪರ್ಕದ ಕಾರಣ ಹಿಂದೆ ತಾಲ್ಲೂಕು ಕೇಂದ್ರವಾಗಬೇಕಿದ್ದ ಹೊನ್ನವಳ್ಳಿಯ ಬದಲು ತಾಲ್ಲೂಕು ಕೇಂದ್ರವಾದ ತಿಪಟೂರು ಬೆಳವಣಿಗೆ ಕಂಡು ಪ್ರಮುಖ ವ್ಯಾಪಾರ ಕೇಂದ್ರ ಹಾಗೆಯೇ ವಿದ್ಯಾಕೇಂದ್ರವೂ ಆಗಿದೆ. ಹಿಂದೆ ಶನಿವಾರ, ಬುಧವಾರ ಸಂತೆ ದಿನವಿದ್ದು ಇಂದು ಸೋಮವಾರ ಶುಕ್ರವಾರಕ್ಕೆ ಬದಲಾಗಿದೆ. ಈ ದಿನಗಳಲ್ಲಿ ತಿಪಟೂರಿನ ಸಂಪರ್ಕದ ರಸ್ತೆಗಳಲ್ಲಿ ಸಂಚರಿಸಲು ಪ್ರಯಾಣಿಕರಿಗೆ ವಿಶೇಷವಾಗಿ ಕಾಣುತ್ತದೆ. ಹೊನ್ನಾವರಿ ತುಂಬಿ ಬರುತ್ತಿರುವ ವಾಹನಗಳು.. ಎರಡು ದಿಕ್ಕಿಗೆ ತಿರುಗಿ ನೋಡಿದರೆ. ತೆಂಗು ಅಡಿಕೆ ತೋಟಗಳು. ಬಲ ಪಾರ್ಶ್ವದಲ್ಲಿ ಕೆ.ಬಿ.ಕ್ರಾಸ್ ಬಳಿ ನರಸಿಂಹ ಸ್ವಾಮಿ ಬೆಟ್ಟ, ಎಡ ಪಾರ್ಶ್ವದಲ್ಲಿ ಕರಡಿ ಗುಡ್ಡ. ಮುಂದೆ ಸಾಗಿದರೆ ಅರಸೀಕೆರೆ ಬಳಿ ಚಿಕ್ಕ ತಿರುಪತಿ ಬೆಟ್ಟ, ಜೇನುಕಲ್ಲು ಸಿದ್ದೇಶ್ವರ ಸ್ವಾಮಿ



ಶಿವಕುಮಾರ್ .ಎಸ್
ಈಡೇನಹಳ್ಳಿ, ತಿಪಟೂರು ತಾ.
ತುಮಕೂರು ಜಿಲ್ಲೆ.

ಬೆಟ್ಟಗಳು ಕಾಣುತ್ತವೆ. ಇದೇ ರೀತಿ ಕೆರೆ, ಕಟ್ಟೆ, ಕಲ್ಯಾಣಿ, ಬಾವಿಗಳು ಇತ್ತೀಚಿನ ದಿನಗಳಲ್ಲಿ ನೀರು ಕಾಣುವ ಹೇಮಾವತಿ ಕಾಲುವೆ, ನಿರ್ಮಾಣಗೊಳ್ಳುತ್ತಿರುವ ಎತ್ತಿನಹೊಳೆ ಕಾಲುವೆ ಪ್ರಯಾಣಿಕರ ಗಮನ ಸೆಳೆಯುತ್ತವೆ.

ತಿಪಟೂರು ಈಡೇನಹಳ್ಳಿ ಕೆರೆ ಕಟ್ಟೆಗಳು

ಪೂರ್ವಕ್ಕೆ ಕೆರೆ ಕೋಡಿ, ಎಂ.ಎಸ್.ನೀಲಕಂಠ ಸ್ವಾಮಿ ಸರ್ಕಲ್ ಸಿರಾ ರಸ್ತೆ, ಪಶ್ಚಿಮಕ್ಕೆ ಕಲ್ಪತರು ಕಾಲೇಜ್, ನಡುವೆ ಇದ್ದ ತಿಪಟೂರು ನಗರ ಇಂದು ಈ ಎರಡು ಸ್ಥಳಗಳನ್ನು ನಗರದ ನಡುಭಾಗಕ್ಕೆ ಸೇರಿಸಿಕೊಂಡು ಬೆಳೆಯುತ್ತಿದೆ. ತಿಪಟೂರಿಗೆ ಇದ್ದ ಒಂದು ರೈಲ್ವೆ ನಿಲ್ದಾಣದ ಜೊತೆಗೆ ಶಾರದಾನಗರ ಹಾಗೂ ಬನಶಂಕರಿ ನಿಲ್ದಾಣಗಳು ಸೇರಿ ಮೂರು ರೈಲ್ವೆ ನಿಲ್ದಾಣಗಳಾಗಿವೆ. ದೇಶದ ಪ್ರಮುಖ ಕೊಬ್ಬರಿ ಮಾರ್ಕೆಟ್ ಇದ್ದರೂ ತಿಪಟೂರಿನಲ್ಲಿ ವರ್ಷದಲ್ಲಿ ನಡೆಯುವ ಗಣೇಶೋತ್ಸವ ಹಾಗೂ ಗ್ರಾಮದೇವತೆ ಕೆಂಪಮ್ಮ ದೇವರ ಜಾತ್ರಾ ಮಹೋತ್ಸವಗಳು ಮೈಸೂರಿನ ದಸರದಂತೆ ಪ್ರಖ್ಯಾತಿಯಾಗಿದೆ.

ಬೆಂಗಳೂರಿನಿಂದ ತಿಪಟೂರಿಗೆ ಪ್ರವೇಶಿಸಿದಾಗ ರಸ್ತೆಯ ಬಲಭಾಗದಲ್ಲಿ ಇರುವುದು ಇಂದು ನಗರಕ್ಕೆ ಕೇಂದ್ರ ಭಾಗವಾಗುತ್ತಿರುವ ಈಡೇನಹಳ್ಳಿ ತಿಪಟೂರು ಕೆರೆ. ಎಡ ಭಾಗದಲ್ಲಿ ಕೆಂಪಮ್ಮ, ರತ್ನೇಶ್ವರ ದೇವಾಲಯಗಳು. ತಿಪಟೂರು ಕೆರೆಯ ಹಿಂಭಾಗದ ಪ್ರದೇಶ ತುಮಕೂರು ನಗರ ವ್ಯಾಪ್ತಿಗೆ ಸೇರಿದೆ. ಇಂದು ಈಡೇನಹಳ್ಳಿ ಗ್ರಾಮ ವ್ಯಾಪ್ತಿಯಲ್ಲಿದೆ. ಇಂದು ನಗರ ನಿರ್ಮಾಣಕ್ಕಾಗಿ ಸೇರಿರುವ ಮಾರನಗೆರೆ ಕೆರೆ ಹಾಗೂ ಈಡೇನಹಳ್ಳಿ ವ್ಯಾಪ್ತಿಯಲ್ಲಿರುವ ವಡ್ಡರಕಟ್ಟೆ, ಗಿಡ್ಡನಕಟ್ಟೆ ಜಲಸಂಗ್ರಹ ಪ್ರಮುಖ ಸ್ಥಳಗಳು.

ತಿಪಟೂರು ಪ್ರಮುಖವಾಗಿ ಗಂಗರು, ಹೊಯ್ಸಳರು, ವಿಜಯನಗರ, ಮೈಸೂರು ನೊಳಂಬರ ಆಳ್ವಿಕೆಗೆ ಸೇರಿರುವುದು ಇತಿಹಾಸದ ಮೂಲಕ ತಿಳಿಯುತ್ತದೆ. ಎಲ್ಲಾ ರಾಜರ ಕಾಲದಲ್ಲೂ ವಿವಿಧ ಸ್ಥಳ, ಊರುಗಳಲ್ಲಿ ಕೆರೆ ಕಟ್ಟೆ, ಬಾವಿಗಳನ್ನು ನಿರ್ಮಾಣವಾಗಿರುವುದು ತಿಳಿಯುತ್ತದೆ. ತಿಪಟೂರು ಕೆರೆಯ ಪಕ್ಕ ಕಲ್ಲೇಶ್ವರಸ್ವಾಮಿ ದೇವಾಲಯ ಹಾಗೂ ಈಡೇನಹಳ್ಳಿ ಕಲ್ಲೇಶ್ವರಸ್ವಾಮಿ, ರಂಗನಾಥಸ್ವಾಮಿ ದೇವಾಲಯಗಳ ಬಳಿ ಹಲವಾರು ವೀರಗಲ್ಲುಗಳು, ಶಾಸನಗಳು, ಮಹಾಸತಿ ಕಲ್ಲುಗಳನ್ನು ಕಾಣಬಹುದು. ಹಾಗೆಯೇ ಈಡೇನಹಳ್ಳಿ ಪಾಳ್ಯದ ಬಳಿ ವಡ್ಡರಕಟ್ಟೆಗೆ ವಿಶೇಷವಾಗಿ ಎರಡು ತೂಬುಗಳಿವೆ. ಒಂದು ಒಂದು ತೂಬಿನ ಮೇಲೆ ನೊಳಂಬ ನಂದಿ ಇದ್ದು, ಮತ್ತೊಂದು ತೂಬಿನಮೇಲೆ ಗಣೇಶ ಕೆತ್ತನೆ ಇರುವುದನ್ನು ಕಾಣಬಹುದು. ವಡ್ಡರಕಟ್ಟೆ, ಗಿಡ್ಡಿನಕಟ್ಟೆ ಎರಡು ತಲಾ 18 ಎಕರೆ ಭೂಪ್ರವೇಶದಲ್ಲಿದ್ದು ಐತಿಹಾಸಿಕ ಕಟ್ಟೆಗಳಾಗಿವೆ. ತಿಪಟೂರು ಕೆರೆಗೆ ಅತಿ ಸಮಿಪದಲ್ಲೇ ಇರುವ ವಡ್ಡರಕಟ್ಟೆ ತಿಪಟೂರು K.S.R.T.C ಬಸ್ ಡಿಪೋದ ಹತ್ತಿರ ಇದೆ. ತಿಪಟೂರು ಕೆರೆಯ ನಿರ್ಮಾಣಕ್ಕೂ ಮೊದಲಿನ ಕಟ್ಟೆಗಳೆಂದು ಹಿಂದಿನ ಹಿರಿಯರು ಹೇಳುತ್ತಿದ್ದರು. ನೊಳಂಬರ ಕಾಲದಲ್ಲಿ ಈಡೇನಹಳ್ಳಿಯಲ್ಲಿ ಗರಡಿ ಕೇಂದ್ರವಿದ್ದು ದೊಣ್ಣೆವರಸೆ ತರಬೇತಿ ನೀಡುತ್ತಿದ್ದ ಬಗ್ಗೆ ತಿಳಿಯುತ್ತದೆ. ಇಂದು ಸಹ ಗ್ರಾಮ ನೊಳಂಬರ ಸಾಂಸ್ಕೃತಿಕ ಗ್ರಾಮವಾಗಿ ಹಲವಾರು ದೇವತಾಕಾರ್ಯಗಳು ಹಿಂದಿನ ರೀತಿಯಲ್ಲಿ ನಡೆಯುತ್ತಿವೆ.

ತಿಪಟೂರು ಹೆಸರಿನ ಮೂಲ

ನಡೆ, ನುಡಿ ಎರಡರಲ್ಲೂ ಶಾಂತರು, ವೀರರು ಆಗಿದ್ದ ಹೀ.ಚಿ. ಶಾಂತವೀರಯ್ಯನವರು ತಿಳಿಸಿರುವಂತೆ 8ನೇ ಶತಮಾನದಿಂದ ಪ್ರಾರಂಭಿಸಿ ಆಡಳಿತ ನಡೆಸಿರುವ ನೊಳಂಬರಿಗೆ ಹಲವಾರು ಸಾಮಂತ ರಾಜರೂ ಇರುವುದು ತಿಳಿಯುತ್ತದೆ. ನೊಣವಿನಕೆರೆ ಉಪರಾಜಧಾನಿಯಾದರೆ ಹೇಮಾವತಿ, ಮಧುಗಿರಿ ರಾಜಧಾನಿಗಳಾಗಿ ಪ್ರಖ್ಯಾತವಾಗಿವೆ. ನೊಳಂಬರ ಆಳ್ವಿಕೆ ಸಮಯದಲ್ಲಿ ನಿರ್ಮಾಣವಾಗಿರುವ ಕೆರೆ, ಕಟ್ಟೆಗಳ ಸನಿಹದಲ್ಲೇ ಕಲ್ಲೇಶ್ವರಸ್ವಾಮಿ ದೇವಾಲಯಗಳು ನಿರ್ಮಾಣವಾಗಿವೆ. ನೊಳಂಬರ ಮೂರು ರಾಜರಿಗೆ ಇಲ್ಲಿ ಪಟ್ಟ ಕಟ್ಟಲಾಗಿದೆ. ಅಂದಿನಿಂದ ಊರಿಗೆ ತಿಪಟೂರು ಎಂಬ ಹೆಸರು ಬಂದಿದೆ.

ತಿಪಟೂರು ನಗರದ ಕೇಂದ್ರಸ್ಥಳದಿಂದ 4 ಕಿ.ಮೀ ದೂರ ಸುತ್ತಲಿನ ಹಳ್ಳಿಗಳೆಲ್ಲವು ನಗರವ್ಯಾಪ್ತಿಗೆ ಸೇರುವ ಕಾಲವಿದು. ಈ ಎಲ್ಲಾ ಗ್ರಾಮವ್ಯಾಪ್ತಿಯ ಭೂ ಪ್ರದೇಶದಲ್ಲೂ ಅಂತರಜಲಾಭಿವೃದ್ಧಿಗೆ ಮೂಲವಾಗಿದ್ದದ್ದು ತಿಪಟೂರು ಕೆರೆ. ನಾಗರೀಕರಿಗೆ ಬೇಕಾಗುವ ಮೂಲ ಸೌಕರ್ಯಕ್ಕಾಗಿ, ಕಛೇರಿಗಳು, ರಸ್ತೆ, ವ್ಯಾಪಾರ ಕೇಂದ್ರ ಮುಂತಾದ ಉದ್ದೇಶಕ್ಕಾಗಿ ಕೆರೆಯ 40 ಭಾಗ ಪರಿವರ್ತನೆಯಾಗಿ 60 ಭಾಗದಲ್ಲಿ ಜಲಸಂಗ್ರಹ ಸ್ಥಳವಾಗಿ ಉಳಿದಿದೆ. ಮಾನ್ಯ ಶಾಸಕರಾದ ಕೆ.ಷಡಕ್ಷರಿಯವರ ದೃಢ ಸಂಕಲ್ಪದಂತೆ ಇಂದು ಕೆರೆಯ ಏರಿ, ಸುತ್ತಲಿನ ರಸ್ತೆಗಳು, ದುರಸ್ತಿಗೊಂಡು ಅತ್ಯುತ್ತಮ ಕಾರ್ಯ ನಡೆಯುತ್ತಿದೆ. ಶಾಸಕರ ಮಠದಾಸೆಯಂತೆ ನೊಣವಿನಕೆರೆಯ ಸಂಪರ್ಕದಿಂದ ನೀರಿನ ವ್ಯವಸ್ಥೆಯಾದರೆ ಸರ್ವೋತ್ತಮ ಕೆಲಸವಾದಂತೆ ಆಗುತ್ತದೆ.

ಮುಂದುವರಿಯುವುದು

ಮೈಕ್ರೋಗ್ರೀನ್ಸ್: ಆರೋಗ್ಯಕರ ಜೀವನದತ್ತ ಹಸಿರು ಹೆಜ್ಜೆ

ಮೈಕ್ರೋಗ್ರೀನ್ಸ್ ಎಂದರೆ ತರಕಾರಿಗಳು ಮತ್ತು ಗಿಡಮೂಲಿಕೆಗಳ ಮೃದುವಾದ ತಾಜಾ ಮೊಳಕೆ ಸಸಿಗಳು. ಇವುಗಳು ತಮ್ಮ ಆರರ್ಷಕ ಬಣ್ಣ ವಿಶಿಷ್ಟರುಚಿ ಮತ್ತು ಹೆಚ್ಚು ಪೌಷ್ಟಿಕಾಂಶಗಳ ಕಾರಣದಿಂದ ಇತ್ತೀಚಿನ ದಿನಗಳಲ್ಲಿ ಅತಿ ಹೆಚ್ಚಿನ ಗಮನ ಸೆಳೆಯುತ್ತಿವೆ. ಇಂದಿನ ಆಧುನಿಕ ಪ್ರಪಂಚದಲ್ಲಿ ಹೆಚ್ಚುತ್ತಿರುವ ಮಾಲಿನ್ಯ, ರಾಸಾಯನಿಕ ಬಳಕೆಗಳಿಂದ ಬೇಸತ್ತ ಜನರು ಆರೋಗ್ಯಯುತವಾದ ಆಹಾರಗಳನ್ನು ಬಳಸಲು ಇಚ್ಚಿಸುತಿದ್ದಾರೆ. ಅಂತಹ ಆರೋಗ್ಯಕರ ಆಹಾರಗಳ ಪಟ್ಟಿಯಲ್ಲಿ ಮೈಕ್ರೋಗ್ರೀನ್ಸ್‌ಗಳ ಕೂಡ ಅಗ್ರಸ್ಥಾನದಲ್ಲಿವೆ. ಬೀಜ ಮೊಳಕೆಯಾದ ಕೇವಲ 7 ರಿಂದ 21 ದಿನಗಳೊಳಗೆ ಇವುಗಳನ್ನು ಕೊಯ್ಲು ಮಾಡಿ ಬಳಸಲಾಗುತ್ತದೆ. ಇವು ಕೇವಲ ಅಕಶರ್ಷಕ ಆಹಾರವಲ್ಲಇವುಗಳಲ್ಲಿ ಜೀವಸತ್ವಗಳು, ಖನಿಜಾಂಶಗಳು, ಆ್ಯಂಟಿಆಕ್ಸಿಡೆಂಟ್‌ಗಳು& ದೇಹಕ್ಕೆ ಉಪಯುಕ್ತವಾದ ಪೋಷಕಾಂಶಗಳು ಹೇರಳವಾಗಿ ದೊರೆಯುತ್ತವೆ. ಆರೋಗ್ಯವನ್ನು ಉತ್ತಮಗೊಳಿಸುವ ಆಹಾರಗಳು ಹಾಗೂ ಪೌಷ್ಟಿಕ ಆಹಾರ ಪದ್ದತಿಗಳಲ್ಲಿ ಹೆಚ್ಚುತ್ತಿರುವ ಆಸಕ್ತಿಯ ಹಿನ್ನೆಲೆಯಲ್ಲಿ, ಮೈಕ್ರೋಗ್ರೀನ್ಸ್‌ಗಳು ಕಡಿಮೆ ಅವಧಿಯಲ್ಲಿ ಹೆಚ್ಚಿನ ಪೋಷಕಾಂಶಗಳನ್ನು ಪೂರೈಸುವ, ಆಹಾರದ ಗುಣ ಮಟ್ಟವನ್ನು ವೃದ್ಧಿಸಲು ಸಹಕಾರಿಯಾಗಿವೆ.ಸಾಮಾನ್ಯವಾಗಿ ಸಂಪೂರ್ಣವಾಗಿ ಬೆಳೆದ ತರಕಾರಿಗಳಿಗಿಂತಲೂ, ಅತಿ ಹೆಚ್ಚು ಪೋಷಕಾಂಶಗಳು ಈ ಮೊಳಕೆಯ ಹಂತದಲ್ಲೇ ಹೆಚ್ಚಾಗಿರುತ್ತವೆ. ಇವು ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುವುದಲ್ಲದೇ, ಅನೇಕ ರೋಗಗಳನ್ನು ತಡೆಗಟ್ಟಲು ಸಹ ಸಹಕಾರಿಯಾಗಿವೆ.

ಮೈಕ್ರೋಗ್ರೀನ್ಸ್ ಎಂದರೇನು ?

ಮೈಕ್ರೋಗ್ರೀನ್ಸ್ ಎಂದರೆ ಸಸಿ ತನ್ನ ಮೊದಲ ನಿಜವಾದ ಎಲೆಗಳನ್ನು ಹೊರತಂದ ನಂತರ ಆದರೆ ಸಂಪೂರ್ಣ ಬೆಳವಣಿಗೆಗೆಂತ ಮೊದಲು ಕೊಯ್ಲು ಮಾಡುವ ಎಳೆ ಸಸಿಗಳು ಬೀಜ ಬಿತ್ತಿದ ನಂತರ 7–21 ದಿನಗಳೊಳಗಾಗಿ ಇವುಗಳನ್ನು ಬಳಸಲಾಗಿತ್ತದೆ. ಇವು ಮೊಳಕೆ ಕಾಳುಗಳಿಗಿಂತ ಭಿನ್ನವಾಗಿವೆ. ಎಲೆಗಳು ಕಾಣಿಸಿಕೊಳ್ಳುವ ಮೊದಲೆ ಮೊಳಕೆಗಳನ್ನು ಉಪಯೋಗಿಸಲಾಗುತ್ತದೆ ಮತ್ತು ಕತ್ತಲೆ ಅಥವಾ ಕಡಿಮೆ ಬೆಳಕಿನಲ್ಲಿ ಇವುಗಳನ್ನು ಬೆಳೆಸಲಾಗುತ್ತದೆ. ಆದರೆ, ಈ ಮೈಕ್ರೋಗ್ರೀನ್ಸ್‌ಗಳನ್ನು ಬೆಳಕಿನಲ್ಲಿಬೆಳೆಯಲಾಗುತ್ತದೆ. ಇದರಿಂದ ಪತ್ರಹರಿತ್ತು ಮತ್ತು ಇತರ ಉಪಯುಕ್ತ ಸಂಯೋಗಗಳನ್ನು ಉತ್ಪಾದಿಸಲು ನೆರವಾಗುತ್ತದೆ. ಸಾಮಾನ್ಯವಾಗಿ ಮೈಕ್ರೋಗ್ರೀನ್ಸ್‌ಗಳನ್ನಾಗಿ ಬೆಳೆಯಬಹುದಾದ ಬೆಳೆಗಳೆಂದರೆ ಬ್ರೋಕೋಲಿ, ಮೂಲಂಗಿ, ಸಾಸಿವೆ, ಬೀಟ್‌ರೂಟ್, ಪಾಲಕ್, ಮೆಂತೆ,ಸೋಂಪು, ಕೊತ್ತಂಬರಿ. ಪ್ರತಿಮೈಕ್ರೋಗ್ರೀನ್ಸ್ ತನ್ನದೇ ಆದ ರುಚಿ ಮತ್ತು ಪೋಷಕಾಂಶಗಳನ್ನು ಹೊಂದಿರುತ್ತದೆ. ಆರಂಬಿಕ ಬೆಳೆವಣಿಯ ಹಂತದಲ್ಲಿ ನಡೆಯುವ ಚಯಾಪಚಯ ಕ್ರಿಯೆಗಳು ಜೀವಸತ್ವಗಳು, ಖನಿಜಾಂಶಗಳು ಹಾಗೂ ಆ್ಯಂಟಿಆಕ್ಸಿಡೆಂಟ್ ಸಂಯುಕ್ತಗಳ ನಿರ್ಮಾಣಕ್ಕೆ ಸಹಕರಿಸುತ್ತವೆ ಹಾಗೂ ಆರೋಗ್ಯಕರ ಪ್ರಯೋಜನಗಳನ್ನು ಒದಗಿಸುತ್ತವೆ. ಮೈಕ್ರೋಗ್ರೀನ್ಸ್‌ಗಳಲ್ಲಿ ಇರುವ ಸಸ್ಯ ಪೋಷಕಾಂಶಗಳು ಫೈಟೋನ್ಯೂಟ್ರಿಯೆಂಟ್ಸ್ ಅಥವಾ ಫೈಟೋಕೆಮಿಕಲ್ಸ್ ಎಂದರೆ ಸಸ್ಯಗಳಲ್ಲಿ ಇರುವ ದೇಹಕ್ಕೆ ಉಪಯುಕ್ತವಾಗಿರುವ ಜೈವಿಕ ಸಂಯೋಗಗಳು ಇವು ದೇಹಕ್ಕೆ ಹೆಚ್ಚುವರಿ ಆರೋಗ್ಯ ಲಾಭಗಳನ್ನು ಒದಗಿಸುತ್ತವೆ.

1. ಫಿನಾಲಿಕ್ ಸಂಯುಕ್ತಗಳು ಮತ್ತು ಫ್ಲೆವೋನಾಡ್ಸ್‌ಗಳು:

ಇವು ಬಲವಾದ ಆ್ಯಂಟಿಆಕ್ಸಿಡೆಂಟ್‌ಗಳಾಗಿದ್ದು ದೇಹದ ಕೋಶಗಳನ್ನು ಹಾನಿಗೊಳಿಸುವ ಫ್ರೀರ್ಯಾಡಿಕಲ್ಸ್‌ಗಳ ವಿರುದ್ದ ರಕ್ಷಣೆ ನೀಡುತ್ತವೆ ಮೈಕ್ರೋಗ್ರೀನ್ಸ್‌ಗಳಾದ ಕೆಂಪು ಕೋಸು, ಬ್ರೋಕೋಲಿ ಮತ್ತು ಮೂಲಂಗಿ ಆರ್ಥಿಕ ಫಿನಾಲಿಕ್ಸ್‌ಗಳನ್ನು ಮತ್ತು ಫ್ಲೆವೋನಾಡ್ಸ್‌ಗಳನ್ನು ಹೊಂದಿದ್ದು ಉರಿಯೂತವನ್ನು ಕಡಿಮೆ ಮಾಡುತ್ತವೆ.



ಡಾ. ಶಶಿಕುಮಾರ್ ಎಸ್.
ಪ್ರಾಧ್ಯಾಪಕರು ಹಾಗೂ ಸಂಪಾದಕರು,
ಸಂವಹನ ಕೇಂದ್ರ ತೋವಿವಿ, ಬಾಗಲಕೋಟ.
Email: shashikumar2482@gmail.com
Cell: 9741900255

2. ಕ್ಯಾರೋಟಿನಾಡ್ಸ್‌ಗಳು : ಬೀಟಾ ಕ್ಯಾರೋಟಿನೆ, ಲ್ಯೂಟಿನ್ ಮತ್ತು ಜಿಯಾಕ್ಸಾಂಥಿನ ಗಳಂತಹ ಕ್ಯಾರೋಟಿನಾಯ್ಡ್‌ಗಳು ಮೈಕ್ರೋಗ್ರೀನ್ಸ್‌ಗಳು ಆಕರ್ಷಕ ಬಣ್ಣಗಳನ್ನು ನೀಡುತ್ತವೆ. ಇವು ಕಣ್ಣಿನ ಆರೋಗ್ಯ, ಚರ್ಮದ ಆರೋಗ್ಯ ಕಾಪಾಡುವಲ್ಲಿ ಸಹಾಕಾರಿ ಮತ್ತು ರೋಗ ನಿರೋಧಕ ಶಕ್ತಿಯನ್ನು ವೃದ್ಧಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

3. ಗ್ಲೊಕೊಸಿನೋಲೇಟ್‌ಗಳು : ಬ್ರೋಕೋಲಿ ಮತ್ತು ಸಾಸಿವೆ ಮೈಕ್ರೋಗ್ರೀನ್ಸ್‌ಗಳಲ್ಲಿ ಇವು ಅಧಿಕವಾಗಿ ಕಂಡು ಬರುತ್ತವೆ. ಇವು ಸಲ್ಫೋರಫೇನ್ನಂತಹ ಜೈವಿಕ ಸಕ್ರಿಯ ಸಂಯುಕ್ತಗಳಾಗಿ ವಿಭಜನೆಯಾಗುತ್ತವೆ. ಇವು ಕ್ಯಾನ್ಸರ್ ತಡೆಗಟ್ಟುವಲ್ಲಿ ಮತ್ತು ದೇಹದಲ್ಲಿ ಉತ್ಪತ್ತಿಯಾಗುವ ವಿಷಪದಾರ್ಥಗಳನ್ನು ಹೊರಹಾಕುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

4. ಜೀವಸತ್ವಗಳು ಮತ್ತು ಖನಿಜಗಳು : ಮೈಕ್ರೋಗ್ರೀನ್ಸ್ ಗಳಲ್ಲಿ ವಿಟಮಿನ್ ಸಿ, ಇ ಮತ್ತು ಕೆ ಮತ್ತು ಕಬ್ಬಿಣ, ಸತು, ಕಾಲ್ಸಿಯಂ ಮತ್ತು ಪೋಟ್ಯಾಸಿಯಂನಂತಹ ಖನಿಜಗಳು ಹೇರಳವಾಗಿವೆ. ಮೈಕ್ರೋಗ್ರೀನ್ಸ್‌ಗಳಲ್ಲಿನ ಈ ಪೋಷಕಾಂಶಗಳುರೋಗನೊರೋಧಕ ಶಕ್ತಿ, ಮೂಳೆಯ ಆರೋಗ್ಯ ಮತ್ತು ಒಟ್ಟಾರೆ ಚಯಾಪಚಯ ಕ್ರಿಯೆಯನ್ನು ಸುಲಲಿತವಾಗಿಸುತ್ತವೆ.

ಮೈಕ್ರೋಗ್ರೀನ್ಸ್‌ಗಳಲ್ಲಿನ ಪೌಷ್ಟಿಕ ಮೌಲ್ಯ : ಅನೇಕ ಅಧ್ಯಯನಗಳ ಪ್ರಕಾರ ಮೈಕ್ರೋಗ್ರೀನ್ಸ್ ಸಾಮನ್ಯ ತರಕಾರಿಗಳಿಗಿಂತ ಹೆಚ್ಚು ಪೋಷಕಾಂಶಗಳನ್ನು ಹೊಂದಿವೆ ಎಂಬುದು ಸಾಬೀತಾಗಿದೆ. ಉದಾಹರಣೆಗೆ ಬ್ರೊಕೋಲಿ ಮೈಕ್ರೋಗ್ರೀನ್ಸ್‌ಗಳು ಸಂಪೂರ್ಣವಾಗಿ ಬೆಳೆದ ಬ್ರೋಕೋಲಿಗಳಿಗಿಂತಲೂ ಅಧಿಕ ಫಿನಾಲಿಕ್ಸ್ ಸಂಯುಕ್ತಗಳು ಮತ್ತು ಅಗತ್ಯ ಖನಿಜಗಳನ್ನು ಹೊಂದಿವೆ. ಹಾಗೆಯೇ ಬೀನ್ಸ್ ಮೈಕ್ರೋಗ್ರೀನ್ಸ್‌ಗಳು ಹೆಚ್ಚಿನ ಆಸ್ಕೊರ್ಬಿಕ್ ಆಮ್ಲ (ವಿಟಮಿನ್ ಸಿ) ಅಂಶವನ್ನು ಒದಗಿಸುತ್ತವೆ.ಸೂರ್ಯಕಾಂತಿ ಮೈಕ್ರೋಗ್ರೀನ್ಸ್‌ಗಳು ಅಧಿಕ ಮಟ್ಟದ ಕ್ಯಾಲ್ಸಿಯಂ ಮತ್ತು ಕ್ಯಾರೋಟಿನಾಯ್ಡ್‌ಗಳನ್ನು ಹೊಂದಿರುತ್ತವೆ.

ಆರೊಗ್ಯ ಪ್ರಯೋಜನಗಳು :

1. ಆ್ಯಂಟಆಕ್ಸಿಡೆಂಟ್ ಮತ್ತು ಉರಿಯುತ ವಿರೋಧಿ ಗುಣಗಳು : ಇವು ಕೋಶ ಹಾನಿ ಕಡಿಮೆ ಮಾಡುತ್ತವೆ. ವೃದ್ಧಾಪ್ಯ ಪ್ರಕ್ರಿಯೆ ನಿಧಾನ ಗೊಳಿಸುತ್ತವೆ ಹಾಗೂ ಹೃದಯ ರೋಗ ಮತ್ತು ಮಧುಮೇಹಂತಹ ರೋಗಗಳ ಅಪಾಯವನ್ನು ಕಡಿಮೆ ಮಾಡುತ್ತವೆ.

2. ರೋಗನೊರೋಧಕ ಶಕ್ತಿ ಹೆಚ್ಚಿಸುವುದು : ಮೈಕ್ರೋಗ್ರೀನ್ಸ್‌ಗಳಲ್ಲಿನ ಅಧಿಕ ವಿಟಮಿನ್ ಸಿ ಮತ್ತು ಇ ರೋಗನಿರೋಧಕ ಕೋಶಗಳ ಕಾರ್ಯಕ್ಷಮತೆ ಹೆಚ್ಚಿಸುತ್ತವೆ ಮತ್ತು ಸೋಂಕುಗಳ ವಿರುದ್ಧ ದೇಹವನ್ನು ರಕ್ಷಿಸುತ್ತವೆ.

3. ಹೃದಯದ ಆರೋಗ್ಯ : ಕೊಲೆಸ್ಟ್ರಾಲ್ ನಿಯಂತ್ರಣಕ್ಕೆ ಸಹಾಯ ಮಾಡುತ್ತವೆ. ರಕ್ತದೊತ್ತಡ ಕಡಿಮ ಮಾಡಲು ನೆರವಾಗುತ್ತವೆ. ಹೃದಯ ಸಂಬಂಧಿತ ರೋಗಗಳ ಅಪಾಯ ಕಡಿಮೆ ಮಾಡುತ್ತವೆ.

4. ಕ್ಯಾನ್ಸರ್ ತಡೆಗಟ್ಟುವ ಸಾಮರ್ಥ್ಯ : ವಿಶೇಷವಾಗಿ ಬ್ರಾಸಿಕಾ ಕುಟುಂಬಕ್ಕೆ ಸೇರಿರುವ ಮೈಕ್ರೋಗ್ರೀನ್ಸ್ ಗಳಲ್ಲಿರುವ ಸಲ್ಫೋರಫೇನ್ ಕ್ಯಾನ್ಸರ್ ಕೋಶಗಳ ಬೆಳವಣಿಗೆಯನ್ನು ತಡೆಯಲು ಸಹಾಯ ಮಾಡುತ್ತವೆ. ಮಾನವನ ವೈದಕೀಯ ದತ್ತಾಂಶವು ಸೀಮಿತವಾಗಿದ್ದರೂ, ಪ್ರಯೋಗದ ಪುರಾವೆಗಳು ಕಾನ್ಸರ್ ತಡೆಗಟ್ಟುವ ಪರಿಣಾಮಗಳನ್ನು ಸೂಚಿಸುತ್ತವೆ.

5. ಪೋಷಕಾಂಶಗಳ ಕೊರತೆ ನಿವಾರಣೆ : ಕಬ್ಬಿಣ ಕ್ಯಾಲ್ಸಿಯಂ ಮತ್ತು ಜೀವಸತ್ವ ಕೊರತೆಗಳನ್ನು ತಡೆಗಟ್ಟಲು ಸಹಾಯಕಾರಿ.

ಆಹಾರದಲ್ಲಿ ಮೈಕ್ರೋಗ್ರೀನ್ಸ್‌ಗಳ ಬಳಕೆ : ಮೈಕ್ರೋಗ್ರೀನ್ಸ್ ಅನ್ನು ಹಲವಾರು ರೀತಿಯಲ್ಲಿ ಬಳಸಬಹುದು.

1. ಸಲಾಡ್‌ಗಳಲ್ಲಿ : ವಿವಿಧ ಮೈಕ್ರೋಗ್ರೀನ್ಸ್‌ಗಳನ್ನು ಒಂದು ಹಿಡಿಯಷ್ಟು ಸೇವಿಸುವುದರಿಂದ ಉತ್ತಮ ರುಚಿ, ಬಣ್ಣ ಮತ್ತು ಪೋಷಕಾಂಶಗಳು ದೊರೆಯುತ್ತವೆ.

2. ಸ್ಯಾಂಡ್‌ವಿಚ್‌ಗಳಲ್ಲಿ : ಒಂದು ಪದರದಷ್ಟು

ಮೈಕ್ರೋಗ್ರೀನ್ಸ್‌ಗಳನ್ನು ಬಳಸಬಹುದು

3. ಸ್ಮೂಥಿಗಳಲ್ಲಿ : ವಿವಿಧ ಮೈಕ್ರೋಗ್ರೀನ್ಸ್‌ಗಳನ್ನು ರುಬ್ಬಿ ಸ್ಮೂಥಿಗಳಲ್ಲಿ ಬಳಸಬಹುದು

4. ಅಲಂಕಾರಕ್ಕಾಗಿ : ಸೂಪ್, ಆಮ್ಲೆಟ್, ಪಿಜ್ಜಾ ಮುಂತಾದ ಆಹಾರಗಳಲ್ಲಿ ಅಲಂಕಾರಕ್ಕಾಗಿ ಮೈಕ್ರೋಗ್ರೀನ್ಸ್‌ಗಳನ್ನು ಬಳಸಬಹುದಾಗಿದೆ.

5. ಹಸಿಯಾಗಿ : ಮೈಕ್ರೋಗ್ರೀನ್ಸ್‌ಗಳನ್ನು ಹಾಗೆಯೇ ಹಸಿಯಾಗಿ ತಿನ್ನುವುದು ಅಥವಾ ಅಡುಗೆಯಾದ ನಂತರ ಸಿದ್ದ ಪಡಿಸಿದ ಪದಾರ್ಥಗಳಿಗೆ ಸೇರಿಸುವುದರಿಂದ ಹಲವು ಸೂಕ್ಷ್ಮ ಜೀವಸತ್ವಗಳು ಮತ್ತು ಪೋಷಕಾಂಶಗಳನ್ನು ಸಂರಕ್ಷಿಸಿ ಉತ್ತಮ ಆರೋಗ್ಯ ಲಾಭಗಳನ್ನು ಪಡೆಯಬುದು.

ಮೈಕ್ರೋಗ್ರೀನ್ಸ್ ಕೃಷಿ ಮತ್ತು ಪರಿಸರ ಸೇಹಿತತ್ವ

ಮೈಕ್ರೋಗ್ರೀನ್ಸ್‌ಗಳನ್ನು ಎಲ್ಲಾ ರೀತಿಯ ಪರಿಸರದಲ್ಲಿ ಬೆಳೆಯಬುಹುದು ಇದರಿಂದ ವಾಣಿಜ್ಯ ಮತ್ತು ಸಣ್ಣ ಪ್ರಮಾಣದ ಬೆಳೆಗಾರರಿಗೆ ಇಬ್ಬರಿಗೂ ಲಾಭದಾಯಕ. ಇವು ಮಣ್ಣಿನಲ್ಲಿ, ಜಲಕೃಷಿ ವ್ಯವಸ್ಥೆಗಳಲ್ಲಿ ಅಥವಾ ಕಾಂಪೋಸ್ಟ್ ಮಾಧ್ಯಮಗಳಲ್ಲಿಯೂ ಸಹ ಬೆಳೆಯಬುದು. ಇದಕ್ಕೆ ಸ್ಥಳ ಮತ್ತು ಸಂಪನ್ಮೂಲಗಳ ಅವಶ್ಯಕತೆ ಅತಿ ಕಡಿಮೆ ಇರುತ್ತದೆ. ನಿಯಂತ್ರಿತ ಬೆಳಕು, ತಾಪಮಾನ ಮತ್ತು ತೇವಾಂಶದ ಲಭ್ಯತೆಯಲ್ಲಿ ಒಳಾಂಗಣ ಕೃಷಿಯು ಋತುಮಾನದ ನಿರ್ಬಂಧಗಳನ್ನು ಲೆಕ್ಕಿಸದೇ ವರ್ಷವಿಡೀ ಉತ್ಪಾದನೆಗೆ ಅವಕಾಶ ನೀಡುತ್ತದೆ. ಈ ಎಲ್ಲ ಅನುಕೂಲಗಳಿಂದಾಗಿ ಈ ಮೈಕ್ರೋಗ್ರೀನ್ಸ್‌ಗಳನ್ನು ನಗರ ಕೃಷಿ, ಲಂಬ ಉದ್ಯಾನಗಳು ಮತ್ತು ಸ್ಥಳಾವಕಾಶ ಸೀಮಿತವಾಗಿರುವ ಸಣ್ಣ ಮನೆಗಳಲ್ಲಿ ಆಕರ್ಷಕವಾಗಿ ಬೆಳೆಸಬಹುದು.

ಮೈಕ್ರೋಗ್ರೀನ್ಸ್‌ಗಳ ತ್ವರಿತ ಬೆಳವಣಿಗೆಯ ಚಕ್ರ ಸಾಮಾನ್ಯವಾಗಿ 7 ರಿಂದ 21 ದಿನಗಳಲ್ಲಿ ಬಳಕೆಗೆ ಯೋಗ್ಯವಾಗಿರುತ್ತವೆ. ಕೊಯ್ಲು ಮಾಡಬಹುದಾದ ಗಾತ್ರವನ್ನು ತಲುಪಲು ಹಲವು ತಿಂಗಳುಗಳ ಅಗತ್ಯವಿರುವ ಸಾಂಪ್ರದಾಯಕ ತರಕಾರಿಗಳಿಗೆ ಹೋಲಿಸಿದರೆ, ಇವುಗಳು ಅಲ್ಪಾವಧಿಯಲ್ಲಿಯೇ ಉತ್ತಮ ಇಳುವರಿ ಹಾಗೂ ಪ್ರತಿ ಚದರ ಅಡಿಗೆ ಗರಿಷ್ಟ ಇಳುವರಿಯನ್ನು ನೀಡುತ್ತವೆ. ವಿಶೇಷವಾಗಿ ಹೈಡ್ರೋಫೋನಿಕ್ ಅಥವಾ ನಿಯಂತ್ರಿತ ಪರಿಸರ ವ್ಯವಸ್ಥೆಗಳಲ್ಲಿ ಬೆಳೆಸಿದಾಗ ಅಲ್ಪಾವದಿಂಯು ಬೆಳವಣಿಗೆಯಿಂದ ನೀರಿನ ಬಳಕೆ ಮತ್ತು ಶಕ್ತಿಯ ಅವಶ್ಯಕತೆಗಳನ್ನು ಸಹ ಕಡಿಮೆ ಮಾಡುತ್ತವೆ. ಇದರ ಪರಿಣಾಮವಾಗಿ ಅನೇಕ ಸಾಂಪ್ರದಾಯಿಕ ಬೆಳೆಗಳಿಗಿಂತ ಕಡಿಮೆ ಪರಿಸರದ ಪರಿಣಾಮವನ್ನು ಹೊಂದಿರುವ ಹೆಚ್ಚು ಉಪಯುಕ್ತ ಆಹಾರ ಉತ್ಪಾದನಾ ಮಾದರಿಯನ್ನು ಇವು ಪ್ರಸುತ್ತ ಪಡಿಸುತ್ತವೆ.

ವಿಶೇಷವಾಗಿ ನಿಯಂತ್ರಿತ ಪರಿಸರದಲ್ಲಿ ಬೆಳಿಸಿದಾಗ, ಅತಿ ಕಡಿಮೆ ಸಂಪನ್ಮೂಲಗಳ ಅವಶ್ಯಕತೆ ಇರುತ್ತದೆ. ಅತಿ ಕಡಿಮೆ ರಸಗೊಬ್ಬರಗಳನ್ನು ಮತ್ತು ಕೀಟನಾಶಕಗಳೀಂದ ಇವುಗಳನ್ನು ಸರಾಗವಾಗಿ ಬೆಳೆಯಬಹುದು. ಇವುಗಳ ಗಾತ್ರ ಮತ್ತು ಅಲ್ಪಾವಧಿ ಕೊಯ್ಲು ಕೀಟಗಳನ್ನು ಮತ್ತು ರೋಗಗಳಿಂದ ಉಂಟಾಗುವ ಅಪಾಯವನ್ನು ಕಡಿಮೆ ಮಾಡವುದಲ್ಲದೆ, ರಾಸಾಯನಿಕಗಳ ಬಳಕೆಯನ್ನು ಗಣನೀಯವಾಗಿ ತಗ್ಗಿಸುತ್ತದೆ.

ಅಂತಿಮವಾಗಿ, ಮೈಕ್ರೋಗ್ರೀನ್ಸ್‌ಗಳು ಜಾಗತಿಕ ಆಹಾರ ಭದ್ರತೆ ಮತ್ತು ಆಹಾರ ವೈವಿಧ್ಯತೆ ನೀಡುವ ಭರವಸೆಯನ್ನು ಹೊಂದಿವೆ. ನಗರ ಜನಸಂಖ್ಯೆ ಮತ್ತು ಸೀಮಿತ ಕೃಷಿಗೆಯೋಗ್ಯ ಭೂಮಿಯನ್ನು ಹೊಂದಿರುವ ಪ್ರದೇಶಗಳು ವರ್ಷಪೂರ್ತಿ ಈ ಮೈಕ್ರೋಗ್ರೀನ್ಸ್‌ಗಳನ್ನು ಬೆಳೆಯಬಹುದು. ಇವು ಅಗತ್ಯ ಜೀವಸತ್ವಗಳು ಮತ್ತು ಖನಿಜಗಳ ಲಭ್ಯತೆಯನ್ನು ಪೂರೈಸುತ್ತವೆ. ಸಾರಿಗೆ ಅಗತ್ಯಗಳನ್ನು ಮತ್ತು ಆಹಾರ ವ್ಯರ್ಥವನ್ನು ಕಡಿಮೆ ಮಾಡುತ್ತದೆ. ಸ್ಥಳೀಯ ಆಹಾರ ವ್ಯವಸ್ಥೆಗಳಲ್ಲಿ ಮೈಕ್ರೋಗ್ರೀನ್ಸ್‌ಗಳನ್ನು ಸರಿಯೋಜಿಸುವ ಮೂಲಕ ಸುಸ್ಥಿರ, ಪೌಷ್ಟಿಕಾಂಶ ಸಮೃದ್ಧ ಆಹಾರ ಪದ್ಧತಿಗನ್ನು ಉತ್ತೇಜಿಸಬಹುದು.

ಸವಾಲುಗಳು :

ಮೈಕ್ರೋಗ್ರೀನ್ಸ್‌ಗಳಿಂದ ಹಲವಾರು ಆರೋಗ್ಯಕರ ಪ್ರಯೋಜನಗಳಿದ್ದರೂ, ಕೆಲವು ಅಗತ್ಯ ವಿಷಯಗಳ ಕುರಿತು ಜಾಗೃತಿ ವಹಿಸಬೇಕಾಗುತ್ತದೆ.

ಮುಂದುವರೆಯುವುದು.....

ನೊಳಂಬ ಲಿಂಗಾಯತ ಸಂಘ (ರಿ)

ಬಸವೇಶ್ವರನಗರ, ಬೆಂಗಳೂರು–560079

ಸಂಘದ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರುಗಳ ಹೆಸರು ಮತ್ತು ವಿಳಾಸ

ಅಧ್ಯಕ್ಷರು :
1 ಶ್ರೀ ಬಿ.ಕೆ.ಚಂದ್ರಶೇಖರ್, ಬಿ.ಎಸ್ಸಿ, ಎಲ್.ಎಲ್.ಬಿ.
ನಂ.27, 4ನೇ 'ಬಿ' ಮುಖ್ಯ ರಸ್ತೆ,
ಮಹಾಲಕ್ಷ್ಮಿ ಮುಂದುವರೆದ ಬಡಾವಣೆ,
ಬೆಂಗಳೂರು–560086. ಮೊ : 9448374939

ಕಾರ್ಯದರ್ಶಿ :
2. ಶ್ರೀ ಚನ್ನವೀರಪ್ಪ ಬಿ. ಬಾಸೂರು ಬಿ.ಇ.,
ಮಹಂತ್ ಕನ್‌ಸ್ಟ್ರಕ್ಷನ್, ನಂ.18, 4ನೇ 'ಎ' ಅಡ್ಡರಸ್ತೆ,
ಅಟ್ಟೂರು ಲೇಔಟ್, ಯಲಹಂಕ,
ಬೆಂಗಳೂರು–560064. ಮೊ : 9845418589

ಉಪಾಧ್ಯಕ್ಷರುಗಳು :
3. ಶ್ರೀ ಜಿ.ರುದ್ರೇಗೌಡ ಎಂ.ಎಸ್ಸಿ, ಎಂ.ಫಿಲ್,
(ಮಾದೇನಹಳ್ಳಿ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ.) ನಂ. 9/1–2, 1ನೇ ಅಡ್ಡರಸ್ತೆ, 2ನೇ ಫಟ್ಟ,
ಗೃಹಲಕ್ಷ್ಮಿ ಬಡಾವಣೆ, ಕಮಲಾನಗರ, ಬೆಂಗಳೂರು
ಉತ್ತರ, ಬಸವೇಶ್ವರನಗರ, ಬೆಂಗಳೂರು–560079
ಮೊ : 8792117999

4. ಡಾ॥ ಸಿ.ಎಸ್.ಮೋಹನ್ ಕುಮಾರ್ ಬಿ.ಇ.
'ಸಿದ್ಧರಾಮೇಶ್ವರ ನಿಲಯ' ಸಿಟಿ ಕ್ಲಬ್ ಹತ್ತಿರ,
ಶಿರಾ ಗೇಟ್, ತುಮಕೂರು,
ತುಮಕೂರು ಜಿಲ್ಲೆ –572106. ಮೊ : 7349219356

5. ಶ್ರೀ ಉಮೇಶ್ ಕಾಟಿಕೆರೆ, ಬಿ.ಎಸ್ಸಿ,
ಕಾಟಿಕೆರೆ, ಜಾಜೂರು ಅಂಚೆ,
ಅರಸೀಕೆರೆ ತಾ॥ –573103 ಮೊ : 9448149346

ಖಜಾಂಚಿ :
6. ಶ್ರೀ ಬಿ.ಕುಭೇರಪ್ಪ ಎಂ.ಎ. ಉಪನ್ಯಾಸಕರು,
'ಸುಕುಲನಿಲಯ' ಹೆಂಜಗೊಂಡನಹಳ್ಳಿ ಬಡಾವಣೆ,
ವಿವೇಕಾನಂದ ಬಿ.ಇ.ಡಿ. ಕಾಲೇಜ್ ಹಿಂಭಾಗ,
ಅರಸೀಕೆರೆ ತಾಲ್ಲೂಕು–573103
ಮೊ : 9844622253

ಸಹ–ಕಾರ್ಯದರ್ಶಿಗಳು :
7. ಶ್ರೀ ಬಿ.ಆರ್.ಭುಜೇಂದ್ರ ಎಂ.ಎ. ಎಂ.ಫಿ.ಇಡಿ
ನಂ. 2619, 'ಸಂಮೃದ್ಧಿ' 'ಇ' ಬ್ಲಾಕ್, ಪಾರ್ಕ್ ಎದುರು,
ಸಹಕಾರನಗರ, ಬೆಂಗಳೂರು–560092.
ಮೊ : 9844551414

8. ಶ್ರೀ ಹೆಚ್.ಎಸ್.ಕಿರಣ್ ಕುಮಾರ್
ಬಿ.ಎ., ಎಲ್. ಎಲ್.ಎಲ್.ಬಿ., ವಕೀಲರು
ಹಾಲನೂರು, ಹಾಲನೂರು ಅಂಚೆ ಕಸಬಾ ಹೋಬಳಿ,
ತುಮಕೂರು ತಾ॥ ತುಮಕೂರು ಜಿ॥ –572107
ಮೊ : 9900215841

9 ಶ್ರೀ ಬಿ.ಪುಟ್ಟಮಲ್ಲೇಗೌಡ
ಬೆಳಗುಂಬ, ಬೆಳಗುಂಬ ಅಂಚೆ,
ಅರಸೀಕೆರೆ ತಾ॥–573103 ಮೊ : 8660433779

ಸದಸ್ಯರುಗಳು :
10. ಶ್ರೀ ಕೆ.ಬಿ.ಶಶಿಧರ
ನಂ.19, "ಶ್ರೀ ಗುರು ಸಿದ್ಧರಾಮೆಶ್ವರ ನಿಲಯ" ಮದರ್ ತೆರೆಸಾ ಸ್ಕೂಲ್ ಹತ್ತಿರ, 4ನೇ ಅಡ್ಡರಸ್ತೆ, 3ನೇ ಮುಖ್ಯ ರಸ್ತೆ, ವಾರಣಾಸಿ ಬಡಾವಣೆ (ಜಿಂಕೆತಿಮ್ಮನಹಳ್ಳಿ)
ರಾಮನಗರಮೂರ್ತಿ ಅಂಚೆ–560036
ಮೊ : 9845273053

11. ಶ್ರೀ ನಟರಾಜ್ ಎಸ್.ಆರ್.
ನಂ. 531, 63ನೇ ಕ್ರಾಸ್, 17ನೇ 'ಎ' ಮೈನ್, 5ನೇ ವಿಭಾಗ, ರಾಜಾಜಿನಗರ, ಬೆಂಗಳೂರು–560010
ಮೊ : 9845463631 (ಸಾಗರನಹಳ್ಳಿ, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ.)

12. ಶ್ರೀ ಎಂ.ದಯಾನಂದಸ್ವಾಮಿ
ಮಾದಿಹಳ್ಳಿ, ಮಾದಿಹಳ್ಳಿ ಅಂಚೆ ಕಸಬಾ ಹೋ
ತಿಪಟೂರು ತಾ। ತುಮಕೂರು ಜಿಲ್ಲೆ–572201
ಮೊ : 9241745554

13. ಶ್ರೀ ಬಿ.ಆರ್.ಯತಿರಾಜ್ ಎ.ಸಿ.ಪಿ.
ನಂ.409, 3ನೇ ಮಹಡಿ, ಸರವಣ ಎಸ್‌ಪ್ಲಂಡೆ
ಅಪಾರ್ಟ್‌ಮೆಂಟ್, ರಾಘವೇಂದ್ರ ರಸ್ತೆ,
ತುಮಕೂರು ರಸ್ತೆ, ಯಶವಂತಪುರ,
ಬೆಂಗಳೂರು–560071. ಮೊ : 9448061972

14. ಶ್ರೀ ಶೇಖರಪ್ಪ ಎನ್.ಬಿ. ಬಿನ್.ಬಸಪ್ಪ
ನಂ. 17, ಸರ್ವೆ ನಂ.49/1, 2ನೇ ಅಡ್ಡರಸ್ತೆ, ಜೆ.ಜೆ.
ಬೋರ್‌ವೆಲ್ ಹತ್ತಿರ, ಆಚಾರ್ಯ ಕಾಲೇಜ್ ರಸ್ತೆ,
ಶಾಂತಿನಗರ, ಅಚ್ಯುತಾನಗರ ಅಂಚೆ,
ಬೆಂಗಳೂರು–560107 ಮೊ : 9845333929

15. ಶ್ರೀ ಗುರುಪ್ರಸಾದ್ ಬಿ.
ಚೀಫ್ ಇಂಜಿನಿಯರ್ (ನಿ), #213, ಜಿ–ಬ್ಲಾಕ್,
10ನೇ ಅಡ್ಡರಸ್ತೆ, ಸಹಕಾರ ನಗರ,
ಬೆಂಗಳೂರು–560092 ಮೊ : 9448477020

16. ಶ್ರೀ ಮಂಜುನಾಥ ಎಸ್.ಸಿ., ಅಡ್ವಕೇಟ್,
#23012, 1ನೇ ಮಹಡಿ, ಪ್ರೆಸ್ಟೀಜ್ ಜಿಂದಾಲ್ ಸಿಟಿ,
ಜಿಂದಾಲ್ ನಗರ, ತುಮಕೂರು ರಸ್ತೆ, ನಾಗಸಂದ್ರ
ಅಂಚೆ ಬೆಂಗಳೂರು–560073. ಮೊ: 9448226484

17. ಶ್ರೀ ಲೋಕೇಶ್ವರ
ಸಹಾಯಕ ಪೊಲೀಸ್ ಕಮೀಷನರ್, ನಂ. 354,
'ಮಾತೃಶ್ರೀ ನಿಲಯ' ಚಿಕ್ಕಣ್ಣ ಗಾರ್ಡನ್,
ವಿನಾಯಕನಗರ, 5ನೇ ಅಡ್ಡರಸ್ತೆ,
ತಿಪಟೂರು, ತುಮಕೂರು ಜಿಲ್ಲೆ–572201
ಮೊ : 9880425974

18. ಶ್ರೀ ಮಂಜುನಾಥ್ ಹೆಚ್.ಎಂ.
ನಂ. 1681, 7ನೇ ಮೈನ್, 'ಇ' ಬ್ಲಾಕ್, 2ನೇ ಹಂತ,
ರಾಜಾಜಿನಗರ, ಬೆಂಗಳೂರು–560010
ಮೊ : 9448136858

19. ಶ್ರೀ ಬಿ.ಎಸ್.ರೇಣುಕಾರಾಧ್ಯ
ನಂ.46, ಕೆ.ಸಿ.ಟಿ, ಅಪಾರ್ಟ್‌ಮೆಂಟ್,
ಮಿನಿವಿಲಾಸ್ ಗಾರ್ಡನ್, ಕಮಲಾನಗರ,
ಬಸವೇಶ್ವರನಗರ, ಬೆಂಗಳೂರು–560079.
ಮೊ : 9342651563/9972999965

20. ಶ್ರೀ ಭೂಕಾಂತ್ ಬಿ.ಡಿ.
'ಬನಸಿರಿ ನಿಲಯ ಶಾಂತಿನಗರ, 2ನೇ ಕ್ರಾಸ್,
ಶಿಕಾರಿಪುರ ಟೌನ್, ಶಿಕಾರಿಪುರ ತಾ।
ಶಿವಮೊಗ್ಗ ಜಿಲ್ಲೆ–577427.
ಮೊ : 9448792121

21. ಶ್ರೀ ಬಿ.ಸಿ.ತಿಪ್ಪೇಶಪ್ಪ
#38, 1ನೇ ಮೈನ್, ಹೆಸರಘಟ್ಟ ಮೈನ್ ರೋಡ್,
8ನೇ ಮೈನ್ ಹತ್ತಿರ, ಟಿ. ದಾಸರಹಳ್ಳಿ,
ಬೆಂಗಳೂರು–560057. ಮೊ : 9900129320

22. ಶ್ರೀ ಚಂದ್ರಶೇಖರ್ ಎಂ.
#04, ಹಳೆ ಪೋಸ್ಟ್ ಆಫೀಸ್ ರಸ್ತೆ, ಗಣೇಶ
ದೇವಸ್ಥಾನ ಹತ್ತಿರ, ಗೋಕುಲಂ 3ನೇ ಹಂತ,
ಮೈಸೂರು–570002 ಮೊ : 9845370370

23. ಶ್ರೀ ಲಕ್ಷ್ಮಯ್ಯ ಜಿ.ಆರ್.
"ಭೂಮಿಕ" ನಂ.40, ಹೆಸರಘಟ್ಟ ಮುಖ್ಯರಸ್ತೆ,
ಎಂ.ಎಸ್. ರಾಮಯ್ಯ ಲೇಔಟ್, ನಾಗಸಂದ್ರ–560073
ಮೊ : 9448430824

24. ಶ್ರೀ ಮಲ್ಲಿಕಾರ್ಜುನ್ ಹೆಚ್.ಆರ್.
#154, 7ನೇ 'ಎ' ಮೈನ್, 3ನೇ ಹಂತ, 4ನೇ ಬ್ಲಾಕ್,
ಬಸವೇಶ್ವರನಗರ, ಬೆಂಗಳೂರು–560079.
ಮೊ : 9845147057

25. ಶ್ರೀ ಶಿವಕುಮಾರ್ ಆರ್.ಎನ್.
ನಂ.88, 5ನೇ ಅಡ್ಡರಸ್ತೆ, 7ನೇ ಮುಖ್ಯರಸ್ತೆ, ಸುಬ್ಬಣ್ಣ
ಗಾರ್ಡನ್, ವಿಜಯನಗರ,
ಬೆಂಗಳೂರು–560040 ಮೊ : 9483400187

26. ಶ್ರೀ ರಾಜಪ್ಪ ಟಿ.
ನಂ.06, 1ನೇ ಮಹಡಿ, 8ನೇ ಮುಖ್ಯ ರಸ್ತೆ, 3ನೇ
ಅಡ್ಡರಸ್ತೆ, ಭುವನೇಶ್ವರಿನಗರ, ಟಿ.ದಾಸರಹಳ್ಳಿ,
ಬೆಂಗಳೂರು ಉತ್ತರ, ಬೆಂಗಳೂರು–560057.
ಮೊ : 9902672883

27. ಶ್ರೀ ಯೋಗೀಶ್ ಎಂ.ಎಸ್.
ಮಾಜಿ ನಗರ ಸಭಾ ಸದಸ್ಯರು, ನಂ. 445, 'ಜನ್ಮ'
4ನೇ ಮುಖ್ಯ ರಸ್ತೆ, ಕೆ.ಆರ್.ಬಡಾವಣೆ, ತಿಪಟೂರು,
ತುಮಕೂರು ಜಿ॥–572201 ಮೊ : 9448326910

28. ಶ್ರೀ ಮಲ್ಲಿಕಾರ್ಜುನಯ್ಯ ಸಿ.
ನಂ. 819, 6ನೇ ಅಡ್ಡರಸ್ತೆ, 5ನೇ ಮುಖ್ಯ ರಸ್ತೆ,
ಎಂ.ಸಿ. ಲೇಔಟ್, ವಿಜಯನಗರ,
ಬೆಂಗಳೂರು –560040. ಮೊ : 9844090063

29. ಶ್ರೀ ಸುಧಾಕರ ಹೆಚ್.ಆರ್.
#85/5, 20ನೇ ಮುಖ್ಯ ರಸ್ತೆ, 14ನೇ ಅಡ್ಡರಸ್ತೆ,
ವಂಗಲಹಳ್ಳಿ, ಹೆಚ್.ಎಸ್.ಆರ್. ಲೇಔಟ್, 1ನೇ ಸೆಕ್ಟರ್,
ಬೆಂಗಳೂರು–560102 ಮೊ: 9845011686

30. ಶ್ರೀ ನಿಜಗುಣ ಎಂ.
ಕಲ್ಪತರು ಗ್ರಾಂಡ್ ಹೋಟೆಲ್, ಹಾಸನ ಸರ್ಕಲ್
ಹತ್ತಿರ, ಬಿ.ಹೆಚ್. ರಸ್ತೆ, ತಿಪಟೂರು,
ತಿಪಟೂರು ತಾ॥ ತುಮಕೂರು ಜಿಲ್ಲೆ–572201.
ಮೊ : 9743313589

31. ಶ್ರೀ ಚಂದ್ರಶೇಖರ್ ಬಿ.ಎಸ್.
ಬೆಳಗುಂಬ, ಬೆಳಗುಂಬ ಅಂಚೆ,
ಅರಸೀಕೆರೆ ತಾಲ್ಲೂಕು–573103 ಮೊ: 9620437089

32. ಶ್ರೀ ಶಿವಕುಮಾರ್ ಜಿ.ಆರ್.
ಗಂಗೂರು, ಸಾಣೇನಹಳ್ಳಿ ಅಂಚೆ ಹಳೇಬೀಡು
ಹೋಗಿ ಬೇಲೂರು ತಾ॥ ಹಾಸನ ಜಿಲ್ಲೆ–573121
ಮೊ : 9900216312

33. ಶ್ರೀ ಪರಮೇಶ್ ವೈ.ಸಿ.
ಯರೇಹಳ್ಳಿ, ಹಾದಿಕೆರೆ ಅಂಚೆ,
ತರೀಕೆರೆ ತಾ॥, ಚಿಕ್ಕಮಗಳೂರು ಜಿಲ್ಲೆ–577228
ಮೊ : 9981995499

34. ಶ್ರೀ ಮಲ್ಲಿಕಾರ್ಜುನ ಎ.ಜಿ.
ವಾರ್ಡ್ ನಂ.02, ಅಂಬೇಡ್ಕರ್ ಬಡಾವಣೆ. ಅಂಕುಶ
ಎಂಟರ್‌ಪ್ರೈಸಸ್, ಅಜ್ಜಂಪುರ ತಾ॥
ಚಿಕ್ಕಮಗಳೂರು ಜಿಲ್ಲೆ–577547. ಮೊ:9449490489

35. ಶ್ರೀ ಸಿದ್ಧೇಶ್ವರ ಬಿಷ್ಟಳ್ಳಿ
'ಸಾಹಿತ್ಯಧಾರೆ' ಸಿದ್ಧರಾಮ ಬಡಾವಣೆ, ಕಾಶಿಪುರ ರಸ್ತೆ,
ಶಿವಮೊಗ್ಗ–577204. ಮೊ : 9844084545

36. ಶ್ರೀ ನಾಗಭೂಷಣ್ ಎಸ್.ಆರ್.
ಶೆಟ್ಟಿಹಳ್ಳಿ, ಸಾಣೇಹಳ್ಳಿ ಪೋಸ್ಟ್ ಹೊಸದುರ್ಗ ತಾ
ಚಿತ್ರದುರ್ಗ ಜಿಲ್ಲೆ. ಮೊ: 9482241668

37. ಶ್ರೀ ಜಯಣ್ಣ ಡಿ., ವಕೀಲರು,
ಕಾವಲು ರಾಮಪ್ಪ ಬಡಾವಣೆ, ಹೊಳಲ್ಕೆರೆ ಪೋಸ್ಟ್
ಹೊಳಲ್ಕೆರೆ ತಾ। ಚಿತ್ರದುರ್ಗ ಜಿಲ್ಲೆ–577526
ಮೊ : 7259325187

38. ಶ್ರೀ ಮಹೇಶ್ ವಿ. ಬಣಕಾರ್
ಸೋಮಸಾಗರ, ಹಿರೇಬಾಸೂರು ಪೋಸ್ಟ್
ಹಾನಗಲ್ ತಾ। ಹಾವೇರಿ ಜಿಲ್ಲೆ–581120
ಮೊ : 9844582447

39. ಶ್ರೀ ಸುರೇಶ್ ಹುಚ್ಚಪ್ಪಳವರ್
'ಶ್ರೀ ಮಲ್ಲಿಕಾರ್ಜುನ ನಿಲಯ' 2ನೇ ಅಡ್ಡರಸ್ತೆ,
5ನೇ ಮುಖ್ಯ ರಸ್ತೆ, ಸಿದ್ಧಾರೂಢ ನಗರ,
ರಾಣಿಬೆನ್ನೂರು ಟೌನ್, ರಾಣಿಬೆನ್ನೂರು ತಾ॥
ಹಾವೇರಿ ಜಿಲ್ಲೆ–581115. ಮೊ : 9845913231

40. ಶ್ರೀ ನಾಗನಗೌಡ ಕೆ.ಹೆಚ್.
ಕಡರನಾಯಕನಹಳ್ಳಿ, ಕಡರನಾಯಕನಹಳ್ಳಿ ಅಂಚೆ
ಹರಿಹರ ತಾ॥ ದಾವಣಗೆರೆ ಜಿಲ್ಲೆ–577516
ಮೊ : 9916565813

41. ಶ್ರೀ ಪರಮೇಶ್ವರಪ್ಪ ಹೆಚ್.
ನಂ.160, ಸಾಹುಕಾರ್ ಚನ್ನಯ್ಯ ಮುಖ್ಯರಸ್ತೆ,
ಗಂಗೋತ್ರಿ ಬಡಾವಣೆ, ಮೈಸೂರು–570009
ಮೊ : 9880547151

ನಮ್ಮ ಬ್ಯಾಂಕ್ :
ತುಮಕೂರು ವೀರಶೈವ ಕೋ–ಆಪರೇಟೀವ್
ಬ್ಯಾಂಕ್ (ಲಿ)
ನೊಳಂಬವಾಣಿ
ಖಾತೆ ಸಂಖ್ಯೆ : 00063090000189
ಶಾಖೆ : ಬಸವೇಶ್ವರನಗರ, ಬೆಂಗಳೂರು.
ಐ.ಎಫ್.ಎಸ್.ಸಿ. : BKL0362TVC
ಬ್ಯಾಂಕ್ : IDBI BANK LTD

ನೂತನ ನಿರ್ದೇಶಕರುಗಳಿಗೆ ಶುಭಾಷಯಗಳು



ಶ್ರೀ ಕೆ.ಬಿ.ಶಶಿಧರ
ಸದಸ್ಯರು



ಶ್ರೀ ನಟರಾಜ್ ಎಸ್.ಆರ್.
ಸದಸ್ಯರು



ಶ್ರೀ ಎಂ.ದಯಾನಂದಸ್ವಾಮಿ
ಸದಸ್ಯರು



ಶ್ರೀ ಗುರುಪ್ರಸಾದ್ ಬಿ.
ಸದಸ್ಯರು



ಶ್ರೀ ಲೋಕೇಶ್ವರ
ಸದಸ್ಯರು



ಶ್ರೀ ಬಿ.ಆರ್.ಯತಿರಾಜ್
ಸದಸ್ಯರು



ಶ್ರೀ ಮಂಜುನಾಥ ಎಸ್.ಸಿ.
ಸದಸ್ಯರು



ಶ್ರೀ ಮಂಜುನಾಥ್ ಹೆಚ್.ಎಂ.
ಸದಸ್ಯರು



ಶ್ರೀ ಶೇಖಿರಪ್ಪ ಎನ್.ಬಿ.
ಸದಸ್ಯರು



ಶ್ರೀ ಮಲ್ಲಿಕಾರ್ಜುನ್ ಹೆಚ್.ಆರ್.
ಸದಸ್ಯರು



ಶ್ರೀ ಬಿ.ಎಸ್.ರೇಣುಕಾರಾಧ್ಯ
ಸದಸ್ಯರು



ಶ್ರೀ ನಾಗಭೂಷಣ್ ಎಸ್.ಆರ್.
ಸದಸ್ಯರು

ನೂತನ ನಿರ್ದೇಶಕರುಗಳಿಗೆ ಶುಭಾಷಯಗಳು




ಶ್ರೀ ಬಿ.ಸಿ.ತಿಪ್ಪೇಶಪ್ಪ
ಸದಸ್ಯರು



ಶ್ರೀ ಭೂಕಾಂತ್ ಬಿ.ಡಿ.
ಸದಸ್ಯರು



ಶ್ರೀ ಚಂದ್ರಶೇಖರ್ ಎಂ.
ಸದಸ್ಯರು



ಶ್ರೀ ಲಕ್ಷ್ಮಯ್ಯ ಜಿ.ಆರ್.
ಸದಸ್ಯರು



ಶ್ರೀ ನಾಗನಗೌಡ ಕೆ.ಹೆಚ್.
ಸದಸ್ಯರು



ಶ್ರೀ ರಾಜಪ್ಪ ಟಿ.
ಸದಸ್ಯರು



ಶ್ರೀ ಮಲ್ಲಿಕಾರ್ಜುನಯ್ಯ ಸಿ.
ಸದಸ್ಯರು



ಶ್ರೀ ಸುಧಾಕರ ಹೆಚ್.ಆರ್.
ಸದಸ್ಯರು



ಶ್ರೀ ನಿಜಗುಣ ಎಂ.
ಸದಸ್ಯರು



ಶ್ರೀ ಚಂದ್ರಶೇಖರ್ ಬಿ.ಎಸ್.
ಸದಸ್ಯರು



ಶ್ರೀ ಶಿವಕುಮಾರ್ ಆರ್.ಎನ್.
ಸದಸ್ಯರು



ಶ್ರೀ ಪರಮೇಶ್ವರಪ್ಪ ಹೆಚ್.
ಸದಸ್ಯರು

ನೂತನ ನಿರ್ದೇಶಕರುಗಳಿಗೆ ಶುಭಾಷಯಗಳು



ಶ್ರೀ ಮಲ್ಲಿಕಾರ್ಜುನ ಎ.ಜಿ.
ಸದಸ್ಯರು



ಶ್ರೀ ಸಿದ್ಧೇಶ್ವರ ಬಿಷ್ಟಳ್ಳಿ
ಸದಸ್ಯರು



ಶ್ರೀ ಯೋಗೀಶ್ ಎಂ.ಎಸ್.
ಸದಸ್ಯರು



ಶ್ರೀ ಜಯಣ್ಣ ಡಿ.
ಸದಸ್ಯರು



ಶ್ರೀ ಮಹೇಶ್ ವಿ. ಬಣಕಾರ್
ಸದಸ್ಯರು



ಶ್ರೀ ಸುರೇಶ್ ಹುಚ್ಚಪ್ಪಳವರ್
ಸದಸ್ಯರು



ಶ್ರೀ ಪರಮೇಶ್ ವೈ.ಸಿ.
ಸದಸ್ಯರು



ಶ್ರೀ ಶಿವಕುಮಾರ್ ಜಿ.ಆರ್.
ಸದಸ್ಯರು



ಜನವರಿ 2027ರಂದು ಹಾಸನದಲ್ಲಿ 854ನೇ ಶ್ರೀಗುರುಸಿದ್ದರಾಮೇಶ್ವರರ ಜಯಂತಿ ನೆಡೆಯುವ ಸ್ಥಳ ಪರಿಶೀಲನೆ ಹಾಗೂ ಪೂರ್ವ ಭಾವಿ ಸಭೆ ನಡೆಯಿತು.

Vol-16 Issue No. : 3 Periodical

RNI No. KARKAN-2012/53684/Dtd. 19-12-2013, Nolambavani - Kannada Quarterly
July, August, September 2026, Number of Pages 56







ನೂತನವಾಗಿ ಆಯ್ಕೆಯಾದ ಅಧ್ಯಕ್ಷರಿಗೆ ಹಾಗೂ ಸಂಪಾದಕ ಮಂಡಳಿಯಿಂದ ಆಯ್ಕೆಯಾದ ನಿರ್ದೇಶಕರುಗಳಿಗೆ
ನೊಳಂಬವಾಣಿ ಸಂಪಾದಕ ಮಂಡಳಿಯ ಸದಸ್ಯರು ಅಭಿನಂದಿಸಿದ ಸಂದರ್ಭ

Published, Printer and Owner : B.K.Chandrashekar, NOLAMBA ADHYAYANA KENDRA
Owned by on behalf of Nolamba Lingayatha Sangha (R.), # 1/A, 1st Cross, 3rd Stage, 4th Block, Basaveshwaranagar, Bengaluru-79, Karnataka.
Published from : Nolamba Lingayatha Sangha (R.), # 1/A, 1st Cross, 3rd Stage, 4th Block, Basaveshwaranagar, Bengaluru-79, Karnataka.
Printed at : Kala Offset Printers, # 1203, 1st Main, 1st Cross, M.C.Layout, Vijayanagar, Bengaluru - 560 040.
Editor : Dr. Rakesh B.C.